ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು
ಸಿರಿಗೆರೆ ವಚನ ಸಾಹಿತ್ಯ ದತ್ತಿ ಪ್ರಕಟಣೆ

# ವಚನ ಸಂಶೋಧನ

ಡಾ. ವೀರಣ್ಣ ರಾಜೂರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

BVP-1211- 27/2/17
1196-(5).

BVP CHECKED
DEC 2017

ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು,
ಸಿರಿಗೆರೆ ವಚನ ಸಾಹಿತ್ಯ ದತ್ತಿ ಪ್ರಕಟಣೆ

# ವಚನ ಸಂಶೋಧನ

ಡಾ. ವೀರಣ್ಣ ರಾಜೂರ

ಶುಭವಾಗಲಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

VACHANA SAMSHODHANA
by : Dr. Veeranna Rajoora
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 97+v Price : Rs. 35=00 : 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಮೂವತ್ತೈದು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಸಿರಿಗೆರೆ
ವಚನ ಸಾಹಿತ್ಯ ದತ್ತಿ ಪ್ರಕಟಣೆ

ಅಧ್ಯಕ್ಷರು
ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಈ ಕೃತಿಯನ್ನು ಸಿದ್ಧಪಡಿಸಿರುವ ಡಾ. ವೀರಣ್ಣ ರಾಜೂರ ಅವರಿಗೆ ಧನ್ಯವಾದಗಳು. ಪ್ರಕಟಣೆಗೆ ಅವಕಾಶ ನೀಡಿ ಉಪಕರಿಸಿರುವ ದತ್ತಿ ದಾನಿಗಳಾದ ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರಿಗೆ ಪ್ರಣಾಮಗಳು. ಈ ಗ್ರಂಥವು ಕನ್ನಡ ಸಾಹಿತ್ಯ ಸಂಶೋಧನಾಸಕ್ತರಿಗೂ, ವಿದ್ಯಾರ್ಥಿಗಳಿಗೂ, ಅತ್ಯಂತ ಉಪಯುಕ್ತವಾಗಿದೆ. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

# ನನ್ನ ನುಡಿ

ಹನ್ನೆರಡನೆಯ ಶತಮಾನ ಕನ್ನಡ ನಾಡು ಕಂಡ ಅಪೂರ್ವ ಕ್ರಾಂತಿಯ ಅನನ್ಯಯುಗ. ಅಂದು ಕಲ್ಯಾಣದ ಶರಣರು ನಡೆಸಿದ ಸಮಾಜೋ-ಧಾರ್ಮಿಕ ಸಾಂಸ್ಕೃತಿಕ ಚಳವಳಿ ಮಾನವ ಬದುಕಿಗೆ ಒಂದು ಹೊಸ ಅರ್ಥ, ಆವಿಷ್ಕಾರಗಳನ್ನು ನೀಡಿತು. ಈ ಚಳವಳಿಗೆ ಮಾಧ್ಯಮವಾದ 'ವಚನ' ಕನ್ನಡದ ವಿನೂತನ ಸಾಹಿತ್ಯ ಪ್ರಕಾರವಾಗಿ ಪರಿಣಮಿಸಿತು.

ವಚನ ಸಾಹಿತ್ಯವನ್ನು ಕುರಿತು ವಿಭಿನ್ನ ನೆಲೆಯ ಅನೇಕ ಅಧ್ಯಯನಗಳು ನಡೆಯುತ್ತ ಬಂದಿವೆ. ನಾನು ಈ ಕುರಿತು ನಡೆಸಿದ ಅಧ್ಯಯನದ ಕೆಲವು ಮಾದರಿಗಳನ್ನು ಪ್ರಸ್ತುತ 'ವಚನ ಸಂಶೋಧನ' ಕೃತಿಯಲ್ಲಿ ಅಳವಡಿಸಲಾಗಿದೆ.

ಇದರಲ್ಲಿ ಒಟ್ಟು ಆರು ಸಂಪ್ರಬಂಧಗಳಿವೆ. ಮೊದಲ ಪ್ರಬಂಧ ವಚನಸಾಹಿತ್ಯ ಕುರಿತು ಈವರೆಗೆ ನಡೆದ ಸಂಶೋಧನೆಯ ಸ್ವರೂಪ ಹಾಗೂ ಪರಂಪರೆಯನ್ನು ತಿಳಿಸಿಕೊಡುತ್ತದೆ. ಎರಡನೆಯದು ವಚನಸಾಹಿತ್ಯ ಸಂಪಾದನೆಯ ಇತಿಹಾಸವನ್ನು ಕೆಲವು ಘಟ್ಟಗಳ ಹಿನ್ನೆಲೆಯಲ್ಲಿ ನಿರೂಪಿಸುತ್ತದೆ. ಮೂರನೆಯ ಪ್ರಬಂಧದಲ್ಲಿ ಸ್ವರವಚನಗಳ ಉಗಮ-ಸ್ವರೂಪ-ಲಕ್ಷಣಗಳನ್ನು ಮೊದಲಬಾರಿಗೆ ಖಚಿತವಾಗಿ ತಿಳಿಸಿಕೊಟ್ಟರೆ, ನಾಲ್ಕನೆಯ ಪ್ರಬಂಧದಲ್ಲಿ ಈಚೆಗೆ ತಾನೆ ಹೊಸದಾಗಿ ದೊರೆತ ಗುರುಬಸವಾರ್ಯನ ಇತಿವೃತ್ತ ಹಾಗೂ ಕೃತಿ ಕೈವಲ್ಯ ಪದ್ಧತಿಯ ಸಮಗ್ರ ಪರಿಚಯ ಹಾಗೂ ವಿವೇಚನೆಯನ್ನು ಮಾಡಿಕೊಡಲಾಗಿದೆ. ಐದನೆಯ ಪ್ರಬಂಧ ಮೋಳಬಸವೇಶ್ವರನನ್ನು ಕುರಿತು ನಾನು ನಡೆಸಿದ ವ್ಯಾಪಕವಾದ ಅಧ್ಯಯನದ ಫಲಿತಗಳನ್ನು ಒಳಗೊಂಡಿದೆ. ಆರನೆಯ ಹಾಗೂ ಕೊನೆಯ ಪ್ರಬಂಧ ಅನುಭಾವ ಸಾಹಿತ್ಯದ ಸ್ಥೂಲವಾದ ಸಮೀಕ್ಷೆಗೆ ಮೀಸಲಾಗಿದೆ. ಈ ಎಲ್ಲ ಸಂಪ್ರಬಂಧಗಳಿಗೆ ಹೆಚ್ಚಾಗಿ ವಚನಸಾಹಿತ್ಯವೇ ಮೂಲ ಆಕರವಾಗಿರುವುದರಿಂದ ಈ ಕೃತಿಗೆ 'ವಚನ ಸಂಶೋಧನ' ಎಂಬ ಶೀರ್ಷಿಕೆಯನ್ನು ಕೊಡಲಾಗಿದೆ.

ಬೇರೆ ಬೇರೆ ಸಂದರ್ಭದಲ್ಲಿ ಬರೆದ ಈ ಪ್ರಬಂಧಗಳು ಈಗಾಗಲೇ ಬೇರೆ ಬೇರೆ ಪ್ರತಿಷ್ಠಿತ ಅಭಿನಂದನ ಗ್ರಂಥ, ಸ್ಮರಣಗ್ರಂಥ ಹಾಗೂ ಸಂಶೋಧನ ಸಂಪುಟಗಳಲ್ಲಿ ಪ್ರಕಟವಾಗಿವೆ. ಓದುಗರಿಗೆ ಹಾಗೂ ಸಂಶೋಧಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಂಕಲನಗೊಳಿಸಿ ಕೊಡಲಾಗಿದೆ. ಪ್ರತಿ ಲೇಖನದ ಕೊನೆಯಲ್ಲಿ ಪ್ರಕಟವಾದ ಗ್ರಂಥ ಹಾಗೂ ಪ್ರಕಟಿತ ವರ್ಷಗಳನ್ನು ನಮೂದಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ನಾಡಿನ ಪ್ರತಿಷ್ಠಿತ ಸಾಹಿತ್ಯ ಸಂಸ್ಥೆ. ಅದರ ಅಡಿಯಲ್ಲಿ ಈ ಗ್ರಂಥ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ.

ಈ ಕೃತಿಯನ್ನು ಪ್ರಕಟಿಸಲು ಆಯ್ಕೆ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರ ಅವರಿಗೆ, ಗೌ. ಕಾರ್ಯದರ್ಶಿಗಳಾದ ಪ್ರೊ. ಜಿ. ಶಂಕರಯ್ಯ ಮತ್ತು ಶ್ರೀ ಪುಂಡಲೀಕ ಹಾಲಂಬಿ, ಗೌ. ಕೋಶಾಧ್ಯಕ್ಷರಾದ ಡಾ. ನಲ್ಲೂರ ಪ್ರಸಾದ ಅವರಿಗೆ ಅನಂತ ಕೃತಜ್ಞತೆಗಳು.

- ವೀರಣ್ಣ ರಾಜೂರ

# ಪರಿವಿಡಿ


೧. ವಚನ ಸಾಹಿತ್ಯ ಸಂಶೋಧನೆ ೧

೨. ವಚನ ಸಂಪಾದನ ಸಾಹಿತ್ಯ ೨೫

೩. ಸ್ವರವಚನಗಳ ಉಗಮ-ಸ್ವರೂಪ-ಲಕ್ಷಣ ೪೨

೪. ಗುರುಬಸವಾರ್ಯನ ಕೈವಲ್ಯ ಪದ್ಧತಿ ೫೬

೫. ಬೋಳಬಸವೇಶ್ವರ: ಒಂದು ಸ್ಥೂಲ ಅಧ್ಯಯನ ೬೮

೬. ಅನುಭಾವ ಸಾಹಿತ್ಯ ೮೭

# ೧. ವಚನಸಾಹಿತ್ಯ ಸಂಶೋಧನೆ

೧೨ನೆಯ ಶತಮಾನ, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಅವಿಸ್ಮರಣೀಯ ಕಾಲ. ಬಸವಾದಿ ಶಿವಶರಣರು, ಅಂದು ಉಜ್ವಲ ನಕ್ಷತ್ರಗಳಂತೆ ಬೆಳಗಿ, ಜಡಗಟ್ಟಿದ ವ್ಯವಸ್ಥೆಯನ್ನು ಒಡೆದು ಹಾಕಿ, ಸಮಾಜಪುರುಷನಲ್ಲಿ ಸಮಾನತೆ, ಸ್ವಾತಂತ್ರ್ಯ, ಸೋದರತ್ವ, ಸತ್ಯ-ನಿಷ್ಠೆ-ಸಜ್ಜನಿಕೆಗಳನ್ನು ಸಂವಹನಗೊಳಿಸಿ, ನವಜಾಗ್ರತಿಯನ್ನು ಉಂಟುಮಾಡಲು ನಡೆಸಿದ ಸಮಾಜೋ-ಧಾರ್ಮಿಕ ಜನಪರ ಕ್ರಾಂತಿ, ನಾಡಿನ ಇತಿಹಾಸದಲ್ಲಿಯೇ ಒಂದು ವಿಸ್ಮಯಕರ ಅಪೂರ್ವ ಘಟನೆ. ಅವರ ಈ ಮಹಾಕ್ರಾಂತಿಗೆ ಸಮರ್ಥ ಮಾಧ್ಯಮವಾದುದು ವಚನ.

ವಚನ, ಜಾಗತಿಕ ಸಾಹಿತ್ಯದಲ್ಲಿಯೇ ಅನನ್ಯವೆನಿಸಿದ, ಒಂದು ಚಳುವಳಿ ಮಾಧ್ಯಮ ಪ್ರಥಮ ಸಾಹಿತ್ಯ ಪ್ರಕಾರ. ಅಷ್ಟೇ ಅಲ್ಲ, ಅದೊಂದು ಸತ್ಯಶುದ್ಧ ನಡೆ-ನುಡಿ ಸಾಮರಸ್ಯ ಸಾಧಿಸಿದ ಸಾತ್ವಿಕ ಜೀವಿಗಳ ಆತ್ಮಸಾಕ್ಷಿಯ ಅನುಪಮ ಅಭಿವ್ಯಕ್ತಿ. ಹೀಗಾಗಿ ಇದಕ್ಕೆ, ವಿಶ್ವಸಾಹಿತ್ಯಕ್ಕೆ ಕನ್ನಡ ಕೊಟ್ಟ ನೂತನ ಕೊಡುಗೆ ಎಂಬ ಖ್ಯಾತಿ; ಕೀರ್ತಿ.

ವಚನಸಾಹಿತ್ಯಕ್ಕೆ ಎಂಟುನೂರು ವರ್ಷಗಳ ಇತಿಹಾಸವಿದೆ. ೧೨ನೆಯ ಶತಮಾನದಲ್ಲಿ ಆರಂಭವಾಗಿ, ಮಹಾಪೂರದಂತೆ ತುಂಬಿ ಬಂದು, ಮುಂದೆ ಅನೇಕ ಆಪತ್ತು-ವಿಪತ್ತುಗಳಿಗೆ ತುತ್ತಾಗಿ, ಮತ್ತೆ ಮರುಹುಟ್ಟು ಪಡೆದು, ಅನೇಕ ಏರು-ಇಳುವುಗಳಲ್ಲಿ ನಡೆದು ಸಾಗಿ, ಇಂದಿನವರೆಗೂ ಅದು ಸಜೀವ ವಾಹಿನಿಯಾಗಿ ಹರಿದುಬಂದಿದೆ.

ಹೀಗೆ ಹರಿದುಬಂದ ಈ ಸಾಹಿತ್ಯದ ಶೋಧ-ಪರಿಷ್ಕರಣ-ವ್ಯಾಖ್ಯಾನ-ವಿಶ್ಲೇಷಣ ಹಾಗೂ ಪ್ರಕಟನ ಕಾರ್ಯಗಳು ಕಾಲದಿಂದ ಕಾಲಕ್ಕೆ ಅನೇಕ ಮುಖವಾಗಿ ನಡೆಯುತ್ತ ಬಂದಿವೆ. ವಚನಸಾಹಿತ್ಯವನ್ನು ಕುರಿತು ಇಲ್ಲಿಯವರೆಗೆ ನಡೆದ ಸಂಶೋಧನೆ ವಿಪುಲ, ವೈವಿಧ್ಯಮಯ. ಅದರ ಒಂದು ಪಕ್ಷಿನೋಟ ಈ ಲೇಖನ.

ಸಂಶೋಧನೆ ಎನ್ನುವುದು ಪಾಶ್ಚಾತ್ಯರಿಂದ ನಮಗೆ ಒದಗಿಬಂದ ಒಂದು ನೂತನ ಜ್ಞಾನಶಾಖೆ. ಕನ್ನಡದಲ್ಲಿ ಇದು ೧೯ನೆಯ ಶತಮಾನದಿಂದ ಆರಂಭವಾಗುತ್ತದೆ. ಸಾಮಾನ್ಯವಾಗಿ ಕನ್ನಡದ ಉಳಿದ ಸಾಹಿತ್ಯ ಪ್ರಕಾರಗಳಂತೆ, ವಚನಸಾಹಿತ್ಯ ಸಂಶೋಧನೆಯೂ

ಈ ಅವಧಿಯಲ್ಲಿಯೇ ಆರಂಭವಾಯಿತು ಎಂದು ಹೇಳಬಹುದಾದರೂ ಅದರ ಶೋಧದ ಇತಿಹಾಸ ೧೫ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಹೀಗಾಗಿ ವಚನಸಾಹಿತ್ಯ ಸಂಶೋಧನಪರಂಪರೆಯಲ್ಲಿ ಮುಖ್ಯವಾಗಿ ಎರಡು ಪ್ರಮುಖ ಕಾಲಘಟ್ಟಗಳನ್ನು, ಮತ್ತೆ ಅವುಗಳಲ್ಲಿ ಕೆಲವು ಉಪ ಕಾಲಘಟ್ಟಗಳನ್ನು ಗುರುತಿಸಬಹುದಾಗಿದೆ.

೧. ಪ್ರಾಚೀನ ಕಾಲ (೧೫ ರಿಂದ ೧೯ನೆಯ ಶತಮಾನದವರೆಗೆ)

೨. ಆಧುನಿಕ ಕಾಲ (೧೯ರಿಂದ ಇಲ್ಲಿಯವರೆಗೆ)

**ಉಪಕಾಲ ಘಟ್ಟಗಳು**

೧. ಪ್ರಾಚೀನ ಕಾಲದಲ್ಲಿ

- ನೂರೊಂದು ವಿರಕ್ತರ ಕಾಲ ಅಥವಾ ಪ್ರೌಢದೇವರಾಯನ ಕಾಲ
- ಏಳುನೂರೊಂದು ವಿರಕ್ತರ ಕಾಲ ಅಥವಾ ತೋಂಟದ ಸಿದ್ಧಲಿಂಗರ ಕಾಲ.

೨. ಆಧುನಿಕ ಕಾಲದಲ್ಲಿ:

- ಹಳಕಟ್ಟಿಪೂರ್ವ ಕಾಲ
- ಹಳಕಟ್ಟಿ ಕಾಲ
- ಹಳಕಟ್ಟಿ ಅನಂತರದ ಕಾಲ

ಈ ಎರಡೂ ಪ್ರಮುಖ ಕಾಲಘಟ್ಟಗಳಲ್ಲಿ ನಡೆದ ವಚನಸಂಶೋಧನ ಕಾರ್ಯದಲ್ಲಿ ಒಟ್ಟಾಗಿ 'ಆಕರಶೋಧ' ಮತ್ತು 'ಆಶಯಶೋಧ' ಎಂಬ ಎರಡು ಮುಖ್ಯ ನೆಲೆಗಳನ್ನು ಕಾಣಬಹುದು.

ಸಂಶೋಧನೆಯಲ್ಲಿ 'ಆಕರಶೋಧ'ಕ್ಕೆ ಪ್ರಮುಖ ಹಾಗೂ ಪ್ರಥಮ ಸ್ಥಾನ. ವಿವಿಧ ಮೂಲಗಳಿಂದ ಸಾಮಗ್ರಿಯನ್ನು ಕಲೆಹಾಕಿ ಒಂದು ವ್ಯವಸ್ಥಿತ ಕ್ರಮದಲ್ಲಿ ಜೋಡಿಸುವ ಕಾರ್ಯ ಈ ಹಂತದಲ್ಲಿ ನಡೆಯುತ್ತದೆ. ಇದು ಮಾಹಿತಿಸಂಗ್ರಹದ 'ಆಕರನಿಷ್ಠ ಸಂಶೋಧನೆ' ಎನಿಸುತ್ತದೆ. ಎಲ್ಲ ಕ್ಷೇತ್ರಗಳಲ್ಲಿ ಮೊದಲು ನಡೆದ ಸಂಶೋಧನೆ ಇದೇ ಮಾದರಿಯದು. ವಚನಸಾಹಿತ್ಯ ಇದಕ್ಕೆ ಹೊರತಾಗಿಲ್ಲ. ವಿವಿಧೆಡೆಗಳಲ್ಲಿ ಅಡಗಿ ಕುಳಿತಿದ್ದ, ಚದುರಿಹೋಗಿದ್ದ ವಚನಗಳನ್ನು ಹುಡುಕಿ, ಸಂಗ್ರಹಿಸಿ ಒಂದೆಡೆ ಕಲೆಹಾಕಿ ನಾಮಾನುಗುಣವಾಗಿ, ವಿಷಯಾನುಗುಣವಾಗಿ ಜೋಡಿಸಿಡುವಲ್ಲಿ ನಡೆದ ಕಾರ್ಯ 'ಆಕರನಿಷ್ಠ ಸಂಶೋಧನೆ'ಗೆ ಉದಾಹರಣೆಯಾಗಿದೆ. ಸಂಗ್ರಹಿಸಿದ ಆಕರಗಳನ್ನು ಬಳಸಿಕೊಂಡು ಅವುಗಳ ಅಂತರಂಗವನ್ನು ವಿಭಿನ್ನ ನೆಲೆಗಳಲ್ಲಿ ಶೋಧಿಸಿ, ಕರ್ತೃವಿನ ಮೂಲ ಆಶಯವನ್ನು ಪ್ರಕಟಿಸಲು ನಡೆಸುವ ಪ್ರಯತ್ನ 'ಆಶಯನಿಷ್ಠ ಸಂಶೋಧನೆ' ಎನಿಸುತ್ತದೆ. ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಇದು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ನಡೆದುದು ಕಂಡುಬರುತ್ತದೆ:

೧. ಧಾರ್ಮಿಕ ಅಥವಾ ತಾತ್ವಿಕ ನೆಲೆ  ೨. ಸಾಮಾಜಿಕ ನೆಲೆ

೩. ಸಾಹಿತ್ಯಿಕ ನೆಲೆ  ೪. ಸಾಂಸ್ಕೃತಿಕ ನೆಲೆ

ಈ ಹಿನ್ನೆಲೆಯಲ್ಲಿ, ವಚನಸಾಹಿತ್ಯ ಸಂಶೋಧನೆ ನಡೆದುಬಂದ ದಾರಿಯನ್ನು, ಅಲ್ಲಲ್ಲಿ ನೆಟ್ಟ ಮೈಲುಗಲ್ಲುಗಳನ್ನು, ಮೂಡಿಸಿದ ಹೆಜ್ಜೆಗುರುತುಗಳನ್ನು ಸ್ಥೂಲವಾಗಿ ಇನ್ನು ಮುಂದೆ ಸಮೀಕ್ಷಿಸಲಾಗಿದೆ.

## ಆಕರಶೋಧ

**ಪ್ರಾಚೀನ ಕಾಲ:**

ಹನ್ನೆರಡನೆಯ ಶತಮಾನದಲ್ಲಿ ವಿಪುಲವಾಗಿ ಸೃಷ್ಟಿಯಾದ ವಚನಸಾಹಿತ್ಯ ಕಲ್ಯಾಣಕ್ರಾಂತಿ ಕಾರಣವಾಗಿ 'ಊರು ಸುಟ್ಟು ಸೂರೆಯಾಗುವಾಗ ಆರಿಗಾರೂ ಇಲ್ಲ' ಎನ್ನುವಂತೆ ಅನಾಥವಾಯಿತು. ದಿಕ್ಕು ದಿಕ್ಕಿಗೆ ಚದುರಿಹೋದ ಶರಣರು, ತಮ್ಮೊಡನೆ ಕಟ್ಟಿಕೊಂಡುಹೋಗಿದ್ದ ಜ್ಞಾನಸಂಪತ್ತು ಎನಿಸಿದ ವಚನ ಕಟ್ಟುಗಳನ್ನು ಅಲ್ಲಲ್ಲಿಯೇ ಬಿಟ್ಟು ಬಯಲಾದರು. ಅದು ಮಠ-ಮಾನ್ಯ, ಗುಡಿ-ಗುಂಡಾರಗಳಲ್ಲಿ ಅಜ್ಞಾತವಾಸವನ್ನು ಅನುಭವಿಸತೊಡಗಿತು.

ಶಿವಶರಣರ ತರುವಾಯ ಬಂದ ಹರಿಹರ-ರಾಘವಾಂಕಾದಿ ವೀರಶೈವ ಕವಿಗಳು ವಚನ ರಚನೆಗೆ ತೊಡಗಲಿಲ್ಲ. ಪ್ರತಿಯಾಗಿ, ಉನ್ನತ ಆಧ್ಯಾತ್ಮಿಕ-ಸಾಮಾಜಿಕ ಹಾಗೂ ಸಾಂಸ್ಕೃತಿಕ ಬಾಳನ್ನು ನಡೆಸಿಹೋದ ಶರಣರ ಉಜ್ವಲ ಬದುಕನ್ನು, ಅವರು ಬೀರಿದ ದಿವ್ಯ ಸಂದೇಶವನ್ನು, ಮೆರೆದ ಆದರ್ಶ, ಜೀವನ ಮೌಲ್ಯಗಳನ್ನು ಹೊಸದೊಂದು ಕಾವ್ಯಮಾರ್ಗದ ಮೂಲಕ ಪ್ರಸಾರಗೊಳಿಸಿದರು. ಅವರ ವಚನಗಳ ಭಾವ-ಭಾಷೆ-ದೃಷ್ಟಿ- ಧೋರಣೆಗಳನ್ನು, 'ಜನ ಬದುಕಬೇಕೆಂಬ' ಅವರ ಘನವಾದ ಉದ್ದೇಶವನ್ನು ತಮ್ಮ ಕಾವ್ಯದ ಆದರ್ಶವಾಗಿಟ್ಟುಕೊಂಡು ಮುನ್ನಡೆದರು.

ಹೀಗೆ, ವಚನಸಾಹಿತ್ಯ ಒಂದು ದೃಷ್ಟಿಯಿಂದ ವೀರಶೈವ ಕಾವ್ಯಗಳಲ್ಲಿ ಗುಪ್ತವಾಗಿ ಸಾಗಿ ಬಂದರೆ, ಇನ್ನೊಂದು ದೃಷ್ಟಿಯಿಂದ ಮಠ-ಮಂದಿರಗಳಲ್ಲಿ ಪಠಣ-ಸ್ತುತಿ-ಪೂಜೆಗಳ ಮೂಲಕ ಬದುಕಿ ಬಂದಿತು. ಅಲ್ಲದೆ, ವಚನಗಳನ್ನು ತಮತಮಗೆ ಬೇಕಾದ ರೀತಿಯಲ್ಲಿ ಸಂಗ್ರಹಿಸುವ, ನಕಲು-ಪ್ರತಿನಕಲು ಮಾಡಿಕೊಳ್ಳುವ ಚಟುವಟಿಕೆಗಳು ಸಣ್ಣ ಪ್ರಮಾಣದಲ್ಲಿ ಸದ್ದುಗದ್ದಲವಿಲ್ಲದೆ ನಡೆದಿದ್ದವು. ಆದರೆ ಕಾವ್ಯ-ಪುರಾಣಗಳ ಆಕರ್ಷಣೆಯ ಎದುರು ಅವು ಎದ್ದು ಕಾಣದೆ ವಚನಸಾಹಿತ್ಯ ಅವಜ್ಞೆಗೆ ಗುರಿಯಾಯಿತು.

**ನೂರೊಂದು ವಿರಕ್ತರ ಕಾಲ :**

ಹದಿನೈದನೆಯ ಶತಮಾನವು ವಚನಸಾಹಿತ್ಯದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದಷ್ಟೇ ಮಹತ್ವದ ಕಾಲ. 'ವಿಜಯಕಲ್ಯಾಣ'ವೆನಿಸಿದ್ದ ವಿಜಯನಗರ ಸಾಮ್ರಾಜ್ಯದ ಸೂತ್ರವನ್ನು ವೀರಶೈವ ದೊರೆ ಪ್ರೌಢದೇವರಾಯ ಹಿಡಿದುಕೊಂಡ ಮೇಲೆ, ವೀರಶೈವ ಸಾಹಿತ್ಯಕ್ಕೆ ಹೊಸ ಚೈತನ್ಯ ಮೂಡಿತು. ಸ್ವತಂತ್ರ ಕಾವ್ಯ ರಚನೆಯ ಜೊತೆಗೆ, ಚದುರಿಹೋಗಿದ್ದ ಶರಣರ ವಚನಸಾಹಿತ್ಯವನ್ನು ಶೋಧಿಸುವ, ಒಂದೆಡೆ ಕಲೆಹಾಕುವ, ವಿವಿಧ

2

ಸ್ಥಲಕಟ್ಟಿಗನುಗುಣವಾಗಿ ಜೋಡಿಸುವ, ಟೀಕೆ, ಟಿಪ್ಪಣಿ, ವ್ಯಾಖ್ಯಾನ ಬರೆಯುವ ಕಾರ್ಯವೂ ಭರದಿಂದ ನಡೆಯಿತು. ಈ ಕಾರ್ಯವನ್ನು ಶ್ರದ್ಧೆ-ನಿಷ್ಠೆ-ಅವಧಾನಗಳಿಂದ ಮಾಡಿದವರು, ಈ ಅವಧಿಯಲ್ಲಿದ್ದ ರಾಜಪೂಜಿತ ನೂರೊಂದು ವಿರಕ್ತರು ಹಾಗೂ ರಾಜಪೋಷಿತ ಅನುಭಾವಿಗಳು.

ಅವರಲ್ಲಿ ಮಹಾಲಿಂಗದೇವ(೧೪೨೫), ಜಕ್ಕಣಾರ್ಯ (೧೪೩೦), ಗುಬ್ಬಿಯ ಮಲ್ಲಣ್ಣ (೧೪೩೦), ಕಲ್ಲುಮಠದ ಪ್ರಭುದೇವ (೧೪೩೦), ಕರಸ್ಥಲದ ವೀರಣ್ಣೊಡೆಯ (೧೪೩೦), ಕರಸ್ಥಲದ ಮಲ್ಲಿಕಾರ್ಜುನ ಒಡೆಯ (೧೪೩೦), ಶಿವಗಣಪ್ರಸಾದಿ ಮಹಾದೇವಯ್ಯ (೧೪೩೦) ಮೊದಲಾದವರು ಪ್ರಮುಖರು. ಮಹಾಲಿಂಗದೇವನು ಪ್ರಭುದೇವರ ವಚನಗಳನ್ನು ಶೋಧಿಸಿ ಸಂಗ್ರಹಿಸಿ, ಷಟ್‌ಸ್ಥಲಕ್ಕನುಸರಿಸಿ ಸಂಕಲಿಸಿ ಅವುಗಳಿಗೆ ತಾನೇ ಟೀಕೆಯನ್ನು ರಚಿಸಿದ. ವಿವಿಧ ಶರಣರ, ವಚನ ಸ್ವರವಚನಗಳನ್ನು ಸೇರಿಸಿ, ಸೂತ್ರವಿಟ್ಟು 'ಏಕೋತ್ತರಶತಸ್ಥಲ' ಎಂಬ ನೂರೊಂದು ಸ್ಥಲದ ನೂತನ ಕೃತಿಯನ್ನು ಸಂಕಲಿಸಿದ. ಹಾಗೆಯೇ ವಿವಿಧ ಶರಣರ ವಚನ, ಸ್ವರವಚನ ಸೂತ್ರಗಳನ್ನು ಅಳವಡಿಸಿ, ಮಿಶ್ರಷಟ್‌ಸ್ಥಲವೆಂಬ ೩೬ ಸ್ಥಲ ಪರಿಕ್ರಮದ ಕೃತಿಯೊಂದನ್ನು ರಚಿಸಿದ. ಹೀಗೆ 'ಷಟ್‌ಸ್ಥಲ', 'ಮಿಶ್ರಷಟ್‌ಸ್ಥಲ', 'ಏಕೋತ್ತರಶತಸ್ಥಲ'ವೆಂಬ ಮೂರು ವಿಧದ ಸಂಕಲನಗಳನ್ನು ಸಿದ್ಧಪಡಿಸಿ ಸ್ಥಲಕಟ್ಟು ಸಾಹಿತ್ಯಕ್ಕೆ ಒಂದು ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿಗೆ ಭಾಜನವಾದ ಮಹಾಲಿಂಗದೇವನು, ವಚನಸಾಹಿತ್ಯ ಸಂಶೋಧನಕಾರರಲ್ಲಿಯೂ ಪ್ರಥಮ ವ್ಯಕ್ತಿ ಎಂಬ ಖ್ಯಾತಿಗೆ ಪಾತ್ರನಾಗಿದ್ದಾನೆ.

ಮಹಾಲಿಂಗದೇವನ ಮಾರ್ಗದಲ್ಲಿಯೇ ನಡೆದ ಜಕ್ಕಣಾರ್ಯ ಏಕೋತ್ತರಶತಸ್ಥಲದ ಸ್ವರವಚನಗಳನ್ನು ಪ್ರತ್ಯೇಕಿಸಿ, ಅವುಗಳಿಗೆ ಟೀಕೆ ಬರೆದು ಸ್ವತಂತ್ರ ಕೃತಿಯನ್ನಾಗಿಸುತ್ತಾನೆ. ಗುಬ್ಬಿಯ ಮಲ್ಲಣ್ಣ ಆಚರಣೆ ಮತ್ತು ನೀತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಚನಗಳನ್ನು ಸಂಕಲಿಸಿ ಮತ್ತೊಂದು ವಿಧದ ನೂರೊಂದು ಸ್ಥಲಗಳನ್ನು ಕಲ್ಪಿಸಿ, 'ಗಣಭಾಷಿತ ರತ್ನಮಾಲೆ' ಎಂಬ ನೂತನ ಕೃತಿಯನ್ನು ಸಿದ್ಧಪಡಿಸುತ್ತಾನೆ. ಕಲ್ಲುಮಠದ ಪ್ರಭುದೇವ ೧೬ ಸ್ಥಲಗಳನ್ನು ಯೋಜಿಸಿ, ಷಟ್‌ಸ್ಥಲದಲ್ಲಿ ಒಂದು ಹೊಸ ಕ್ರಮವನ್ನು ಕಲ್ಪಿಸಿ, 'ಲಿಂಗಲೀಲಾ ವಿಲಾಸ ಚಾರಿತ್ರ' ಎಂಬ ಕೃತಿಯನ್ನು ಸಂಕಲಿಸಿ, ಅಲ್ಲಿನ ವಚನಗಳಿಗೆ ತಾನೇ ಟೀಕೆಯನ್ನೂ ಬರೆಯುತ್ತಾನೆ. ಕರಸ್ಥಲದ ವೀರಣ್ಣೊಡೆಯನು ಪ್ರಭುದೇವರ ವಚನಗಳನ್ನಾಯ್ದು 'ಲಿಂಗಸೂತ್ರದ ವಚನ' ಎಂಬ ಕೃತಿಯನ್ನು ಸಂಕಲಿಸಿದರೆ, ಕರಸ್ಥಲದ ಮಲ್ಲಿಕಾರ್ಜುನ ಒಡೆಯನು 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ ' ಎಂಬ ೬೧ ಸ್ಥಲದ ಕೃತಿಯನ್ನು ಸಿದ್ಧಪಡಿಸುತ್ತಾನೆ.

ಶಿವಗಣಪ್ರಸಾದಿ ಮಹಾದೇವಯ್ಯ ವಚನಗಳನ್ನು ಆಧಾರವಾಗಿಟ್ಟುಕೊಂಡು 'ಶೂನ್ಯಸಂಪಾದನೆ' ಎಂಬ ಹೊಸದೊಂದು ಅಪೂರ್ವ ಕೃತಿಯನ್ನು ಸೃಷ್ಟಿಸುತ್ತಾನೆ. ಅನುಭವಮಂಟಪದಲ್ಲಿ ನಡೆದಿರಬಹುದಾದ ಶರಣರ ಮಧ್ಯದ ವಿಚಾರ ಮಂಥನವನ್ನು,

ಅವರವರ ವಚನಗಳಿಂದ ನಾಟಕೀಯ ತಂತ್ರದಲ್ಲಿ ಅಳವಡಿಸಿಕೊಟ್ಟಿರುವುದು ಈ ಕೃತಿಯ ಅನನ್ಯತೆಯೆನಿಸಿದೆ. ಸಮಗ್ರ ವೀರಶೈವ ಸಿದ್ಧಾಂತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೌಲಿಕ ಸಮಸ್ಯೆಗಳನ್ನು ಚರ್ಚಿಸಿ ನಿಷ್ಕರ್ಷಿಸುವ ದೃಷ್ಟಿಯಿಂದ ರಚಿತವಾದ ಈ ಮಹಾಸಂಪಾದನೆ ಮಹಾದೇವಯ್ಯನ ಅದ್ಭುತ ಕಲ್ಪನಾಶಕ್ತಿಗೆ, ಸಂಶೋಧನ ದೃಷ್ಟಿಗೆ ಹಾಗೂ ಕಲಾಪ್ರಜ್ಞೆಗೆ ನಿದರ್ಶನವೆನಿಸಿದೆ. ಇದು ಸಂಪಾದನಸಾಹಿತ್ಯಕ್ಕೆ ಮೊದಲ ಮಾದರಿ ಎನಿಸಿದೆ. ಇದು ಪ್ರಥಮ ಘಟ್ಟ.

**ಏಳುನೂರೊಂದು ವಿರಕ್ತರ ಕಾಲ :**

ವಚನಸಾಹಿತ್ಯ ಸಂಶೋಧನೆಯ ಎರಡನೆಯ ಘಟ್ಟ ತೋಂಟದ ಸಿದ್ಧಲಿಂಗೇಶ್ವರರ ಕಾಲದಿಂದ ಮೊದಲುಗೊಳ್ಳುತ್ತದೆ. ತೋಂಟದ ಸಿದ್ಧಲಿಂಗೇಶ್ವರರು ಸ್ವತಃ ವಚನಗಳನ್ನು ರಚಿಸಿದುದಲ್ಲದೆ, ಅವುಗಳನ್ನು ತಾವೇ ಷಟ್‌ಸ್ಥಲಾನುಗುಣವಾಗಿ ಜೋಡಿಸಿ, 'ಷಟ್‌ಸ್ಥಲಜ್ಞಾನಸಾರಾಮೃತ' ಎಂಬ ಹೆಸರನ್ನಿಡುವ ಕಾರ್ಯವನ್ನೂ ಮಾಡುತ್ತಾರೆ. ಮುಂದೆ ಏಳುನೂರೊಂದು ವಿರಕ್ತರೆಂದು ಖ್ಯಾತನಾಮರಾದ ಇವರ ಶಿಷ್ಯ-ಪ್ರಶಿಷ್ಯರನೇಕರು ಈ ಕಾರ್ಯವನ್ನು ತುಂಬ ಮುತುವರ್ಜಿಯಿಂದ ಮುಂದುವರಿಸುತ್ತಾರೆ. ಈ ಅವಧಿಯಲ್ಲಿ 'ಸಂಪಾದನ ಸಮಯ' ಎಂಬುದೊಂದು ಹುಟ್ಟಿಕೊಂಡು ವಚನ ಶೋಧನೆ, ಸಂಕಲನ, ಸಂಪಾದನೆಯನ್ನೇ ತಮ್ಮ ಬದುಕಿನ ಮುಖ್ಯ ಮಣಿಹವನ್ನಾಗಿ ಮಾಡಿಕೊಂಡು ಸಮರ್ಪಣಾಭಾವದಿಂದ ಈ ಕಾರ್ಯವನ್ನು ನೆರವೇರಿಸುತ್ತಾರೆ. ಅವರವರ ದೃಷ್ಟಿಕೋನ, ಅನುಭವದ ಆಳ, ಆಧ್ಯಾತ್ಮಿಕ ನಿಲುವು, ತಾತ್ವಿಕ ನಿಷ್ಠೆಗಳಿಗನುಗುಣವಾಗಿ ಷಟ್‌ಸ್ಥಲ, ಮಿಶ್ರಷಟ್‌ಸ್ಥಲ, ಏಕೋತ್ತರಶತಸ್ಥಲ, ಇನ್ನೂರ ಹದಿನಾರು ಸ್ಥಲ ಹಾಗೂ ಸಂಕೀರ್ಣಸ್ಥಲಕಟ್ಟಿನ ಕೃತಿಗಳು ಅಧಿಕ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತವೆ. ಸಂಪಾದನ-ಸಂಶೋಧನ ಕಾರ್ಯಕ್ಕೆ ಹೆಚ್ಚಿನ ತೀವ್ರತೆ, ವೈವಿಧ್ಯ, ವ್ಯಾಪ್ತಿಗಳು ಉಂಟಾಗುತ್ತವೆ. ಸಂಪಾದನೆಯ ಚೆನ್ನಂಜೇದೇವ, ಸಂಪಾದನೆಯ ಸಿದ್ಧವೀರಣ್ಣ, ಸಂಪಾದನೆಯ ಬೋಳಬಸವ, ಸಂಪಾದನೆಯ ಪರ್ವತೇಶ, ಎಳಮಲೆಯ ಗುರುಶಾಂತದೇವ, ಸಂಪಾದನೆಯ ಗುರುಲಿಂಗದೇವ, ಸಂಪಾದನೆಯ ವೀರಸಂಗಯ್ಯ, ಸಂಪಾದನೆಯ ಮರಿಸಂಗಯ್ಯ ಮೊದಲಾದ ಸಂಕಲನಕಾರರು, ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣೊಡೆಯರಂಥ ಶೂನ್ಯಸಂಪಾದನಕಾರರು ಹಾಗೂ ಅನೇಕ ಟೀಕಾಕಾರರು ಈ ಅವಧಿಯಲ್ಲಿ ಮೌಲಿಕ ಸಂಕಲನಗಳನ್ನು ಸಿದ್ಧಪಡಿಸುತ್ತಾರೆ. ಹೀಗೆ ಎರಡೂ ಘಟ್ಟಗಳಲ್ಲಿ ಹುಟ್ಟಿಕೊಂಡ ಒಟ್ಟು ಸಾಹಿತ್ಯವನ್ನು ೧. ಸಂಗ್ರಹ, ೨. ಸಂಕಲನ, ೩. ಸಂಪಾದನೆ, ೪. ಟೀಕೆ ಎಂದು ವಿಭಜಿಸಬಹುದು.

೧. ಯಾವುದೇ ತಾತ್ವಿಕ ಹಿನ್ನೆಲೆಯಿಲ್ಲದೆ ಒಬ್ಬೊಬ್ಬ ವಚನಕಾರ/ವಚನಕಾರ್ತಿಯ ಹೆಸರಿನಡಿಯಲ್ಲಿ ವಚನಗಳನ್ನು ಅಳವಡಿಸಿದ ಕೃತಿಗಳು ಸಂಗ್ರಹಗಳೆನಿಸುತ್ತವೆ.

ಉದಾ: ಏಕವ್ಯಕ್ತಿ ವಚನಸಂಗ್ರಹಗಳು:ಮಹಾದೇವಿಯಕ್ಕನ ವಚನಗಳು, ಜೇಡರದಾಸಿಮಯ್ಯನ

ವಚನಗಳು, ನೀಲಮ್ಮನ ವಚನಗಳು, ಹಡಪದಪ್ಪಣ್ಣನ ವಚನಗಳು ಮುಂ.

ಅನೇಕ ವ್ಯಕ್ತಿ ವಚನ ಸಂಗ್ರಹಗಳು: ಸಕಲಪುರಾತನರ ವಚನಗಳು (ಕೋಲಶಾಂತಯ್ಯ, ಗೊಗ್ಗವ್ವೆ, ಬಸವಣ್ಣನ ವಚನಗಳಿಂದ ಆರಂಭವಾಗುವ ಮೂರು ವಿಧದ ಕಟ್ಟುಗಳು), ಎಲ್ಲ ಪುರಾತರ ಸ್ತೋತ್ರದ ವಚನಗಳು, ವಚನಸಾರ.

೨. ಒಂದು ನಿಶ್ಚಿತ ತಾತ್ವಿಕ ಹಿನ್ನೆಲೆ ಇಟ್ಟುಕೊಂಡು ಸ್ಥಲಸಹಿತವಾಗಿ, ಇಲ್ಲವೆ ಸ್ಥಲರಹಿತವಾಗಿ ವಚನಗಳನ್ನು ಅಳವಡಿಸಿದ ಕೃತಿಗಳು ಸಂಕಲನಗಳೆನಿಸುತ್ತವೆ.

ಉದಾ: ಸ್ತೋತ್ರದ ವಚನಗಳು: ಬಸವಸ್ತೋತ್ರದ ವಚನಗಳು, ಲಿಂಗಸ್ತೋತ್ರದ ವಚನಗಳು, ಮಿಶ್ರಸ್ತೋತ್ರದ ವಚನಗಳು, ಶಿವಮಹಿಮಾಸ್ತೋತ್ರದ ವಚನಗಳು, ಶರಣಸ್ತೋತ್ರದ ವಚನಗಳು, ಷಟ್‌ಸ್ಥಲಸ್ತೋತ್ರದ ವಚನಗಳು, ಅಷ್ಟಾವರಣಸ್ತೋತ್ರದ ವಚನಗಳು, ಪ್ರಭುಸ್ತೋತ್ರದ ವಚನಗಳು.

**ತಾತ್ವಿಕ ಸಂಕಲನಗಳು:**

- ಏಕವ್ಯಕ್ತಿ ವಚನಷಟ್‌ಸ್ಥಲ ಕಟ್ಟುಗಳು:ಬಸವಣ್ಣನವರ ಷಟ್‌ಸ್ಥಲ ವಚನಗಳು,ಪ್ರಭುದೇವರ ಷಟ್‌ಸ್ಥಲ ವಚನಗಳು, ಸಿದ್ಧರಾಮನ ಶಿವಯೋಗ ಷಟ್‌ಸ್ಥಲಾನುಭಾವ
- ಅನೇಕ ವ್ಯಕ್ತಿವಚನ ಷಟ್‌ಸ್ಥಲ ಕಟ್ಟುಗಳು: ಪರಮಮೂಲಜ್ಞಾನಷಟ್‌ಸ್ಥಲ, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಜ್ಞಾನಷಟ್‌ಸ್ಥಲಸಾರ, ವಿಶೇಷಾನುಭವ ಷಟ್‌ಸ್ಥಲ.
- ಷೋಡಶಸ್ಥಲ: ಲಿಂಗಲೀಲಾವಿಲಾಸ ಚಾರಿತ್ರ
- ಮಿಶ್ರಷಟ್‌ಸ್ಥಲ:ಸೂಕ್ಷ್ಮ ಮಿಶ್ರಷಟ್‌ಸ್ಥಲ
- ಏಕೋತ್ತರಶತಸ್ಥಲ:ಮಹಾಲಿಂಗದೇವ, ಜಕ್ಕಣಾರ್ಯ, ಸಿದ್ಧಲಿಂಗರ ಏಕೋತ್ತರ ಶತಸ್ಥಲ ಕೃತಿಗಳು, ಚನ್ನಬಸವಣ್ಣನ ವಚನೈಕೋತ್ತರ ಶತಸ್ಥಲ.
- ಇನ್ನೂರ ಹದಿನಾರು ಸ್ಥಲ: ಕಂಬಾಳ ಶಾಂತಮಲ್ಲೇಶನ ಗಣವಚನರತ್ನಾವಳಿ (ಸ್ಟವ)
- ಅಷ್ಟಾವರಣ: ವೀರಶೈವ ಚಿಂತಾಮಣಿ
- ಶಿವಯೋಗ: ಶಿವಯೋಗ ಚಿಂತಾಮಣಿ, ಶಿವಯೋಗ ಪ್ರದೀಪಿಕೆ(ಸ್ಟವ)
- ಭಕ್ತಿ:ಭಕ್ತ್ಯಾನಂದ ಸುಧಾರ್ಣವ
- ಶೀಲ: ಶೀಲಸಂಪಾದನೆ
- ಆಚರಣೆ: ಆಚರಣೆ ಸಂಬಂಧ ವಚನಗಳು, ಚಿದೈಶ್ವರ್ಯ ಚಿದಾಭರಣ, ಷಟ್ಪ್ರಕಾರಸಂಗ್ರಹ, ಗಣಭಾಷಿತ ರತ್ನಮಾಲೆ
- ಇತರ:ಅದ್ವೈತಾನಂದದ ವಚನಗಳು, ಲಿಂಗಚಿದಮೃತಬೋಧೆ

೩. ಸಂಭಾಷಣೆಯ ರೂಪದಲ್ಲಿ ವಚನ-ಸ್ವರವಚನಗಳನ್ನು ಮತ್ತು ಅಲ್ಲಲ್ಲಿ ಸ್ವಯಂ ರಚಿತ ಗದ್ಯವನ್ನು ಜೋಡಿಸಿ ಹೆಣೆದ ತಾತ್ವಿಕ ಕೃತಿಗಳು ಸಂಪಾದನೆ ಎನಿಸುತ್ತವೆ.

ಉದಾ:ಶಿವಗಣಪ್ರಸಾದಿ ಮಹಾದೇವಯ್ಯ, ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ,

ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಗಳು

೪. ಏಕವ್ಯಕ್ತಿ ಅಥವಾ ಅನೇಕ ವ್ಯಕ್ತಿ ವಚನಗಳಿಗೆ, ಸ್ಥಲಕಟ್ಟಿನ ವಚನಗಳಿಗೆ ಬರೆದ ವ್ಯಾಖ್ಯಾನ, ಟೀಕೆಗಳು ಟೀಕಾಸಾಹಿತ್ಯವೆನಿಸುತ್ತವೆ.

ಈ ನಾಲ್ಕೂ ವಿಭಾಗಕ್ಕೆ ಸಂಬಂಧಿಸಿದ ಸದ್ಯ ದೊರಕುವ ಕೃತಿಗಳ ಸಂಖ್ಯೆ ಸು. ೧೫೦ಕ್ಕೂ ಅಧಿಕ.

ಹೀಗೆ, ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಾಚೀನ ಕಾಲದ ಈ ಎರಡು ಕಾಲಘಟ್ಟಗಳಲ್ಲಿ ವಚನಸಂಗ್ರಹ-ಸಂಕಲನ-ವ್ಯಾಖ್ಯಾನ ಎಂಬ ಮೂರು ವಿಧದ ಕಾರ್ಯಗಳು ನಡೆದುದು ಕಂಡುಬರುತ್ತದೆ. ಇವು ಸಂಶೋಧನ ವಿಧಾನದ ಆಕರಸಂಗ್ರಹ, ಸಂಯೋಜನೆ, ವಿಶ್ಲೇಷಣೆ ಎಂಬ ಮೂರು ಹಂತಗಳನ್ನು ಪ್ರತಿನಿಧಿಸುತ್ತವೆ. ಅಲ್ಲದೆ, ಅಲ್ಲಲ್ಲಿ ಅಡಗಿ ಕುಳಿತಿದ್ದ ವಚನಗಳನ್ನು ಹುಡುಕಿ ತೆಗೆಯುವಲ್ಲಿ, ನಾಮಾನುಗುಣವಾಗಿ, ವಿಷಯಾನುಗುಣವಾಗಿ ಜೋಡಿಸುವಲ್ಲಿ, ತಾತ್ವಿಕ ದೃಷ್ಟಿಯಿಂದ ಸಂಕಲಿಸುವಲ್ಲಿ, ಸಂವಾದರೂಪದಲ್ಲಿ ಸಂಯೋಜಿಸಿ ಸಂಪಾದಿಸುವಲ್ಲಿ, ವಚನಗಳ ಅಂತರಾರ್ಥ ಅರಿತು ಟೀಕೆ, ಟಿಪ್ಪಣಿ, ವ್ಯಾಖ್ಯಾನ ಬರೆಯುವಲ್ಲಿ ಶೋಧನೆ, ಪರಿಶ್ರಮ, ವಿದ್ವತ್ತು, ಚಿಂತನೆ, ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆಗಳು ವಿನಿಯೋಗವಾಗಿರುವುದರಿಂದ ಇವರು ಮಾಡಿದ ಕಾರ್ಯವನ್ನು ಸಂಶೋಧನೆಯೆಂದು ಕರೆಯುವಲ್ಲಿ ಯಾವ ಅಭ್ಯಂತರವೂ ಕಾಣುವುದಿಲ್ಲ. ಆದರೆ ಈ ಸಂಶೋಧನೆಯನ್ನು ವಿಶೇಷವಾಗಿ 'ಆಕರಶೋಧನಿಷ್ಠ ಸಂಶೋಧನೆ' ಎಂದು ಹೆಸರಿಸಬಹುದು.

**ಆಧುನಿಕ ಕಾಲ**

ಆಧುನಿಕ ಕಾಲದ ಕನ್ನಡ ಸಂಶೋಧನೆ ಕ್ರೈಸ್ತ ಮಿಶನರಿಗಳಿಂದ ಆರಂಭವಾಗುತ್ತದೆ. ಅವರು ತಮ್ಮ ಧರ್ಮತತ್ತ್ವಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಪ್ರಸಾರಗೊಳಿಸುವ ಉದ್ದೇಶದಿಂದ ಕನ್ನಡವನ್ನು ಕಲಿತರು. ಜೊತೆಗೆ, ಸಂಶೋಧನ ಪ್ರವೃತ್ತಿ ಕಾರಣವಾಗಿ ಕನ್ನಡ ಕಾವ್ಯ, ಶಾಸ್ತ್ರ, ಶಾಸನ ಇತ್ಯಾದಿಗಳನ್ನು ಶೋಧಿಸಿ ಪ್ರಕಟಿಸುವ ಕಾರ್ಯದಲ್ಲಿಯೂ ತೊಡಗಿದರು.* ಹಾಗೆ ಅವರು ಪ್ರಕಟಿಸಿದ ಕೃತಿಗಳಲ್ಲಿ ಜೈನ-ವೀರಶೈವ-ಬ್ರಾಹ್ಮಣ ಮೂರು ಮತದ ಕವಿಗಳ ಕಾವ್ಯಗಳು, ಶಾಸ್ತ್ರಗಳು ಸಮಾವೇಶಗೊಂಡಿವೆ. ಆದರೆ ವಚನಸಾಹಿತ್ಯ ಮಾತ್ರ ಅವರ ಶೋಧನೆಗೆ ಹೊರತಾಗಿ ಉಳಿದುದು ಸೋಜಿಗದ ಸಂಗತಿ. ಅದಕ್ಕೆ ಕಾರಣವನ್ನು, ಡಾ. ಫ.ಗು. ಹಳಕಟ್ಟಿ ಅವರಿಗೆ ಬಾಸೆಲ್‌ಮಿಶನ್ ಪ್ರೆಸ್ಸಿನವರು ಬರೆದ ಪತ್ರ ತಿಳಿಸಿಕೊಡುತ್ತದೆ. "ಫ.ಗು. ಹಳಕಟ್ಟಿ ಅವರು ಕ್ರಿ.ಶ. ೧೯೧೮ರ ಹೊತ್ತಿಗೆ ತಾವು ಸಂಗ್ರಹಿಸಿದ ವಚನಶಾಸ್ತ್ರಸಾರ ಭಾಗ-೧ ಈ ಹಸ್ತಪ್ರತಿಯನ್ನು ಮುದ್ರಿಸುವಂತೆ ಮಂಗಳೂರಿನ ಬಾಸೆಲ್‌ಮಿಶನ್ ಪ್ರೆಸ್ಸಿನವರಿಗೆ, ೫೦೦ ರೂ. ಮುಂಗಡ

* ಮೋಗ್ಲಿಂಗ್ ೧೮೪೮ರಲ್ಲಿ ಪ್ರಕಟಿಸಿದ ಲಕ್ಷ್ಮೀಶನ ಜೈಮಿನಿ ಭಾರತ ಮೊದಲ ಪ್ರಕಟಿತ ಕಾವ್ಯ. ಅವನೇ ೧೮೫೦ರಲ್ಲಿ ಪ್ರಕಟಿಸಿದ ಬಸವಪುರಾಣ, ಚೆನ್ನಬಸವಪುರಾಣಗಳು ಮೊದಲ ವೀರಶೈವ ಕಾವ್ಯಗಳು.

ಹಣ ಸಹಿತವಾಗಿ ಕಳಿಸಿದರಂತೆ. ಆದರೆ ಕೆಲವೇ ದಿನಗಳಲ್ಲಿ ಹಸ್ತಪ್ರತಿ ಹಾಗೂ ದುಡ್ಡು ಮರಳಿ ಬಂದವಂತೆ. ಜೊತೆಗೆ ಕಳಿಸಿದ ಪತ್ರದಲ್ಲಿ 'ನಿಮ್ಮ ಈ ಕೃತಿಯಲ್ಲಿ ನಮ್ಮ ಧರ್ಮದ ತತ್ವನೀತಿಗಳೇ ಪ್ರತಿಪಾದನೆಗೊಂಡಿರುವುದರಿಂದ, ಇದರ ಪ್ರಕಟನೆ ನಮ್ಮ ಧರ್ಮದ ಪ್ರಚಾರಕ್ಕೆ ಬಾಧೆ ತರಬಹುದಾಗಿದೆ. ಆದಕ್ಕಾಗಿ ಹಸ್ತಪ್ರತಿಯನ್ನು ಮರಳಿ ಕಳಿಸುತ್ತಿದ್ದೇವೆ' ಎಂದು ಬರೆಯಲಾಗಿತ್ತಂತೆ". ಇದರಿಂದ, ಕ್ರೈಸ್ತ ಮಿಶನರಿಗಳು ಉದ್ದೇಶಪೂರ್ವಕವಾಗಿ ವಚನಸಾಹಿತ್ಯ ಶೋಧನೆಯತ್ತ ಗಮನ ಹರಿಸಲಿಲ್ಲವೆಂಬುದು ವೇದ್ಯವಾಗುತ್ತದೆ.

ಹೀಗೆ, ಕ್ರೈಸ್ತ ಮಿಶನರಿಗಳಿಂದ ಉದ್ದೇಶಪೂರ್ವಕ ಉಪೇಕ್ಷೆಗೆ ಒಳಗಾದ ವಚನಸಾಹಿತ್ಯವನ್ನು ಪರಿಶೋಧಿಸಿ, ಪ್ರಕಟಿಸಲು ಮುಂದಾದವರು ದೇಶೀ ವೀರಶೈವ ವಿದ್ವಾಂಸರು ಹಾಗೂ ಪುಸ್ತಕ-ವ್ಯಾಪಾರಿಗಳು. ೧೮೮೩ರಲ್ಲಿ 'ಅಪ್ರಮಾಣ ಕೂಡಲಸಂಗಮದೇವ' ಅಂಕಿತದ ವಚನಗಳುಳ್ಳ 'ಶಿಖಾರತ್ನಪ್ರಕಾಶ' ಎಂಬ ಗ್ರಂಥವನ್ನು ಪ್ರಕಟಿಸುವ ಮೂಲಕ ಆರಂಭವಾದ ವಚನಸಾಹಿತ್ಯಶೋಧನೆ ಹಾಗೂ ಪ್ರಕಟನೆಯ ಕಾರ್ಯ ಮುಂದೆ ಕಾಲದಿಂದ ಕಾಲಕ್ಕೆ ತನ್ನ ವೇಗ-ವ್ಯಾಪ್ತಿ-ಉತ್ಕಟತೆಗಳನ್ನು ಹೆಚ್ಚಿಸಿಕೊಳ್ಳುತ್ತ ನಡೆದುಬಂದಿದೆ. ಹಾಗೆ ಸಾಗಿಬಂದ ವಚನಸಾಹಿತ್ಯ ಸಂಶೋಧನೆಯ ಮಾರ್ಗದಲ್ಲಿ ಹಳಕಟ್ಟಿಪೂರ್ವ ಕಾಲ, ಹಳಕಟ್ಟಿ ಕಾಲ ಮತ್ತು ಹಳಕಟ್ಟಿ ಅನಂತರದ ಕಾಲ ಎಂದು ಮೂರು ಮುಖ್ಯ ಕಾಲಘಟ್ಟಗಳನ್ನು ಗುರುತಿಸಬಹುದಾಗಿದೆ.

**ಹಳಕಟ್ಟಿಪೂರ್ವ ಕಾಲ**

ಹಳಕಟ್ಟಿ ಅವರು ವಚನಸಾಹಿತ್ಯ ಸಂಶೋಧನೆಗೆ ತೊಡಗುವ ಪೂರ್ವದಲ್ಲಿ, ವಚನಗ್ರಂಥ ಪ್ರಕಟನೆಯ ಕಾರ್ಯ ಪುಸ್ತಕ ವ್ಯಾಪಾರಿಗಳಾದ ಬಳ್ಳಾರಿಯ ಶೆಟ್ಟರಿಂದ ಆರಂಭವಾಗಿತ್ತು. ೧೮೮೩ರಿಂದ ೧೯೧೪ರ ಅವಧಿಯಲ್ಲಿ ಶಿಖಾರತ್ನಪ್ರಕಾಶ (೧೮೮೩), ಸಿದ್ಧೇಶ್ವರ ವಚನವು (೧೮೮೫), ನಿಃಕಲರ ವಚನ (೧೮೮೫), ಅಖಂಡೇಶ್ವರ ವಚನ (೧೮೯೫), ಬಸವಣ್ಣನವರ ವಚನಗಳು (೧೮೮೯), ಅಂಬಿಗರ ಚೌಡಯ್ಯನ ವಚನಶಾಸ್ತ್ರವು (೧೯೦೫), ಘನಲಿಂಗದೇವ ನಿರೂಪಿಸಿದ ಕನ್ನಡ ವೀರಶೈವ ಸಿದ್ಧಾಂತ ವಚನ (೧೯೦೭), ಮುಕ್ತ್ಯಾಂಗನಾಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ (೧೯೦೭), ಸಟೀಕಾ ಗಣಭಾಷಿತರತ್ನಮಾಲೆ (೧೯೦೯), ಚೆನ್ನಬಸವಣ್ಣನವರ ವಚನ (೧೯೧೪) ಎಂಬ ಹತ್ತು ವಚನ ಗ್ರಂಥಗಳು ಬೆಳಕಿಗೆ ಬಂದವು. ಇವುಗಳಲ್ಲಿ ಕೆಲವಕ್ಕೆ ಸಂಪಾದಕರ ಹೆಸರಿಲ್ಲದ್ದು, ಬಳಸಿಕೊಂಡ ಹಸ್ತಪ್ರತಿಗಳ ವಿವರಗಳಿಲ್ಲದ್ದು, ಪಾಠಾಂತರ ಗುರುತಿಸದೇ ಹೋದದ್ದು, ಪ್ರಸ್ತಾವನೆ, ಅನುಬಂಧಗಳಿಲ್ಲದ್ದು ಇವೇ ಮೊದಲಾದ ಎದ್ದು ಕಾಣುವ ಕೊರತೆಗಳಿಂದಾಗಿ, ಸಂಶೋಧನೆಯ ದೃಷ್ಟಿಯಿಂದ ಇವುಗಳಿಗೆ ಅಷ್ಟಾಗಿ ಮಹತ್ವವಿಲ್ಲ ಎನಿಸಿದರೂ, ವಚನಸಾಹಿತ್ಯ ಸಂಶೋಧನೆಗೆ ಮೂಲವಾದ ಆಕರಸಾಮಗ್ರಿಯನ್ನು ಒದಗಿಸುವ ಕಾರ್ಯ ಇವುಗಳಿಂದಲೇ ಆರಂಭವಾಯಿತು ಎಂಬುದನ್ನು ಮಾತ್ರ ಮರೆಯುವಂತಿಲ್ಲ.

ಹಳಕಟ್ಟಿಪೂರ್ವ ಯುಗದಲ್ಲಿ ವಚನಸಾಹಿತ್ಯ ಹಾಗೂ ವಚನಕಾರರ ಬಗೆಗೆ ಅಧಿಕೃತವಾಗಿ ಸಂಶೋಧನೆ ನಡೆಸಿದ ವಿದ್ವಾಂಸರೆಂದರೆ ಆರ್. ನರಸಿಂಹಾಚಾರ್ ಅವರು. ೧೯೦೭ರಿಂದ ೧೯೦೭ರ ಮಧ್ಯದ ಕಾಲಾವಧಿಯಲ್ಲಿ ಅವರು ಕನ್ನಡ ಕವಿ-ಕಾವ್ಯಗಳ ಶೋಧದಲ್ಲಿ ತೊಡಗಿ, ತುಂಬ ಪರಿಶ್ರಮವಹಿಸಿ ಸಿದ್ಧಪಡಿಸಿದ ಕರ್ಣಾಟಕ ಕವಿಚರಿತೆ ಮೊದಲ ಸಂಪುಟದಲ್ಲಿ ೫೪ ಜನ ವಚನಕಾರರ ಸಂಕ್ಷಿಪ್ತ ಪರಿಚಯ ಮತ್ತು ಕರ್ತೃವಿನ ಹೆಸರು ದೊರೆಯದ ೨೫ ಅಂಕಿತಗಳ ಉಲ್ಲೇಖ ಮಾಡುವುದರ ಮೂಲಕ ವಚನಸಾಹಿತ್ಯದ ವಿಸ್ತಾರವನ್ನು ಮೊದಲ ಬಾರಿಗೆ ಎತ್ತಿ ತೋರಿಸುತ್ತಾರೆ. ೧೯೧೯ರಲ್ಲಿ ಪ್ರಕಟಿಸಿದ ಕವಿಚರಿತೆಯ ಎರಡನೆಯ ಸಂಪುಟದಲ್ಲಿ ಈ ಸಂಖ್ಯೆ ಮತ್ತು ವಿಷಯಗಳನ್ನು ಒಂದು ವ್ಯವಸ್ಥೆಗೆ ಒಳಪಡಿಸಿ, ಶರಣರ ಸ್ಥೂಲ ಪರಿಚಯದೊಂದಿಗೆ ಉತ್ತಮ ವಚನಗಳನ್ನು ಉದ್ಧರಿಸಿ ಎರಡೂ ಸಂಪುಟ ಸೇರಿ ಒಟ್ಟು ೬೦ ಜನ ವಚನಕಾರರನ್ನು ಬೆಳಕಿಗೆ ತಂದುಕೊಡುತ್ತಾರೆ. ಈ ಸಂಪುಟಗಳನ್ನು ಹಳಕಟ್ಟಿ ಅವರು ತಮ್ಮ ವಚನಶಾಸ್ತ್ರಸಾರ ಭಾಗ:೧ನ್ನು ಸಿದ್ಧಪಡಿಸುವಲ್ಲಿ ಬಳಸಿಕೊಂಡಂತೆ ತಿಳಿಸುತ್ತಾರೆ. ಹಾಗೆಯೇ, ಕವಿಚರಿತೆಕಾರರು ಹಳಕಟ್ಟಿ ಅವರ ವಚನಶಾಸ್ತ್ರಸಾರವನ್ನು ಬಳಸಿಕೊಂಡು ೧೯೨೯ರಲ್ಲಿ ಪ್ರಕಟಿಸಿದ ಮೂರನೆಯ ಸಂಪುಟದಲ್ಲಿ ಒಟ್ಟು ೨೪೩ಜನ ವಚನಕಾರರ ಪಟ್ಟಿಯನ್ನು ಕೊಟ್ಟಿದ್ದಾರೆ.

ಹೀಗೆ, ಹಳಕಟ್ಟಿ ಅವರ ಪೂರ್ವದಲ್ಲಿ ಬಳ್ಳಾರಿ ಮುಂತಾದ ಪಟ್ಟಣಗಳ ಶೆಟ್ಟರಿಂದ ಹತ್ತೆಂಟು ವಚನಕೃತಿಗಳು, ಆರ್. ನರಸಿಂಹಾಚಾರ್ಯರಿಂದ ೬೦ ಜನ ವಚನಕಾರರು, ಅವರ ಕೆಲವು ವಚನಗಳು ಬೆಳಕಿಗೆ ಬಂದಿವೆ. ಇದು ವಚನಸಾಹಿತ್ಯ ಸಂಶೋಧನೆಯ ಅರುಣೋದಯ ಕಾಲ. ಇಲ್ಲಿ ನಡೆದುದು ವಚನಗಳ ಪ್ರಕಟಣೆ ಮತ್ತು ಆಕರಶೋಧಕಾರ್ಯ ಮಾತ್ರ.

**ಹಳಕಟ್ಟಿ ಕಾಲ**

ವಚನಸಾಹಿತ್ಯ ಶೋಧನೆ, ಪರಿಷ್ಕರಣ, ಪ್ರಕಟಣ ಕಾರ್ಯಗಳಿಗೆ ಹೆಚ್ಚಿನ ವ್ಯಾಪ್ತಿ, ವೇಗ ಉಂಟಾದದ್ದು ಡಾ. ಫ.ಗು. ಹಳಕಟ್ಟಿ ಅವರಿಂದ. ವೃತ್ತಿಯಿಂದ ವಕೀಲರಾಗಿದ್ದ ಅವರು ೧೯೦೫ರಲ್ಲಿ ಆಕಸ್ಮಿಕವಾಗಿ ಕಂಡ ಗುಬ್ಬಿ ಮಲ್ಲಣ್ಣನ 'ಗಣಭಾಷಿತ ರತ್ನಮಾಲೆ'ಯ ಒಂದು ಹಸ್ತಪ್ರತಿಯಿಂದ ಆಕರ್ಷಿತರಾಗಿ, ವಚನ ಕಟ್ಟುಗಳ ಶೋಧಕ್ಕೆ ತೊಡಗಿ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಮೂಲವೃತ್ತಿಯನ್ನು ತೊರೆದು ವಚನಸಾಹಿತ್ಯ ಪರಿಷ್ಕರಣ-ಪ್ರಕಟನೆಗಳಿಗಾಗಿಯೇ ತಮ್ಮ ಇಡೀ ಬದುಕನ್ನು ಮುಡುಪಾಗಿಟ್ಟುದು ಒಂದು ಅಪೂರ್ವ ಘಟನೆ.

ಹಸ್ತಪ್ರತಿ ಶೋಧನೆಯೊಂದಿಗೆ ಆರಂಭವಾದ ಹಳಕಟ್ಟಿ ಅವರ ವಚನಸಾಹಿತ್ಯ ಸಂಶೋಧನೆಯ ಕಾರ್ಯ, ಹಸ್ತಪ್ರತಿಯಿಂದ ವಚನಗಳನ್ನು ಪ್ರತಿ ಮಾಡುವುದು, ಒಬ್ಬೊಬ್ಬ ವಚನಕಾರನ ಹೆಸರಿನಡಿಯಲ್ಲಿ ಜೋಡಿಸುವುದು, ತಾತ್ವಿಕ ಹಿನ್ನೆಲೆಯಲ್ಲಿ ವಿಭಜಿಸುವುದು, ಬೇರೆ ಬೇರೆ ಪ್ರತಿಗಳಿಂದ ವಚನಪಾಠವನ್ನು ಹೋಲಿಸಿ ನೋಡುವುದು, ಶುದ್ಧವಾದುದನ್ನು

ಸ್ವೀಕರಿಸುವುದು, ಗ್ರಂಥ ರೂಪದಲ್ಲಿ ಪ್ರಕಟಿಸುವುದು ಹೀಗೆ ವಿವಿಧ ಹಂತಗಳಲ್ಲಿ ಸಾಗಿ ನಡೆಯಿತು. ಜೊತೆಗೆ ಶಿವಶರಣ ಶರಣೆಯರ ಚರಿತ್ರೆಗಳನ್ನು ರಚಿಸುವುದು, ವಿನೂತನ ಸ್ಥಲಕಟ್ಟಿನ ಕೃತಿಗಳಮ್ನು ಸಂಯೋಜಿಸುವುದು, ಶಿವಾನುಭವ ಶಬ್ದಕೋಶ ಸಿದ್ಧಪಡಿಸುವುದು ಇವೇ ಮೊದಲಾದ ವಚನಸಂಬಂಧಿ ಕಾರ್ಯಗಳೂ ನಡೆದವು. ಈ ಗ್ರಂಥಗಳನ್ನು ಪ್ರಕಟಿಸಲು 'ಹಿತಚಿಂತಕ' ಹೆಸರಿನ ಮುದ್ರಣಾಲಯ (೧೯೨೫), 'ಶಿವಾನುಭವ' ಹೆಸರಿನ ಪತ್ರಿಕೆ (೧೯೨೬), 'ಶಿವಾನುಭವ ಗ್ರಂಥಮಾಲೆ' ಸ್ಥಾಪಿತವಾದವು. ಇವುಗಳ ಮೂಲಕ ಅವರು ಪ್ರಕಟಿಸಿದ ವಚನಗ್ರಂಥಗಳ ಸಂಖ್ಯೆ ಸು. ೭೭. ಇದರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಮಹಾದೇವಿಯಕ್ಕ ಮೊದಲಾದ ಪ್ರಸಿದ್ಧ ವಚನಕಾರರ ವಚನಸಂಕಲನಗಳ ಜೊತೆಗೆ ಗಣದಾಸಿ ವೀರಣ್ಣ, ಏಲೇಶ್ವರದ ಕೇತಯ್ಯ, ಸತ್ಯಕ್ಕ ಮೊದಲಾದ ಕಡಿಮೆ ಸಂಖ್ಯೆಯ ವಚನಗಳ ವಚನಕಾರರ ಏಕವ್ಯಕ್ತಿ ಕೃತಿಗಳೂ, ಏಕೋತ್ತರ ಶತಸ್ಥಲ, ಶೂನ್ಯಸಂಪಾದನೆಗಳಂಥ ಬಹುವ್ಯಕ್ತಿ ವಚನಗಳಿಂದ ಕೂಡಿದ ಸ್ಥಲಕಟ್ಟಿನ ಕೃತಿಗಳೂ, ಶಿವಶರಣರ ಸಂಕೀರ್ಣವಚನಗಳು, ಶಿವಶರಣರ ಸಂಗೀತದ ವಚನಗಳು, ನೈತಿಕ ಮತ್ತು ಭಕ್ತಿಯ ವಚನಗಳು, ಹೊಸ ಪದ್ಧತಿಯ ಬಸವೇಶ್ವರರ ವಚನಗಳು ಎಂಬಂಥ ವಿಶಿಷ್ಟ ಸಂಕಲನಗಳೂ ಸಮಾವೇಶಗೊಂಡಿವೆ.

೧೯೨೩ರಿಂದ ೧೯೫೩ರ ಮಧ್ಯಕಾಲದಲ್ಲಿ ಡಾ. ಹಳಕಟ್ಟಿ ಅವರು ಸಿದ್ಧಪಡಿಸಿದ 'ವಚನಶಾಸ್ತ್ರಸಾರ'ದ ಮೂರು ಸಂಪುಟಗಳು ಅವರ ವ್ಯಾಪಕವಾದ ವಚನಸಾಹಿತ್ಯ ಅಧ್ಯಯನ, ಅಪಾರವಾದ ಪರಿಶ್ರಮ, ಪ್ರತಿಭೆ, ಚಿಂತನೆಗಳ ಫಲವಾಗಿ ಮೂಡಿಬಂದ ಮೇರು ಕೃತಿಗಳು; ಅವರ ಕೀರ್ತಿಯನ್ನು ಎತ್ತಿ ಹಿಡಿದ ಸತ್ಕೃತಿಗಳು. ಇವರು ರಚಿಸಿದ 'ಶಿವಾನುಭವ ಶಬ್ದಕೋಶ' ಕೇವಲ ಪದಗಳಿಗೆ ಅರ್ಥಕೊಡುವ ನಿಘಂಟು ಅಲ್ಲ. ವಚನ ಸಾಹಿತ್ಯದಲ್ಲಿ ಬಳಕೆಯಾದ ಪ್ರತಿಯೊಂದು ಪಾರಿಭಾಷಿಕ ಪದಗಳ ಅರ್ಥ, ಆಶಯಗಳನ್ನು ವಿವರವಾಗಿ ನೀಡುವ ವಿಶಿಷ್ಟ ಕೋಶ. ಇದು ಹಳಕಟ್ಟಿ ಅವರ ವಚನಸಾಹಿತ್ಯದ ಆಳವಾದ ಅಧ್ಯಯನ, ಚಿಂತನೆಗಳಿಂದ ರೂಪುಗೊಂಡ ಒಂದು ಸಂಶೋಧನಗ್ರಂಥ.

ಹೀಗೆ, ವಚನಸಾಹಿತ್ಯದ ಆಮೂಲಾಗ್ರ ಸಂಶೋಧನೆಗಾಗಿ ಮಾಡಿದ ಈ ಏಕವ್ಯಕ್ತಿ ಸಾಹಸ ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿದೆ. ವಚನಸಾಹಿತ್ಯ ಸಂಶೋಧನೆಗೆ ತೊಡಗುವ ಯಾವುದೇ ವಿದ್ಯಾರ್ಥಿ-ವಿದ್ವಾಂಸ ಹಳಕಟ್ಟಿ ಅವರ ಕಾರ್ಯವನ್ನು ನೋಡದೇ ಮುಂದೆ ಹೋಗಲು ಆಗುವುದಿಲ್ಲ. ಹೀಗಾಗಿ 'ವಚನ ಪಿತಾಮಹ' ಎಂಬ ಹೆಸರು ಅವರಿಗೆ ಅರ್ಥಪೂರ್ಣವಾಗಿದೆ, ಅನ್ವರ್ಥಕವೆನಿಸಿದೆ.

ಇದೇ ವೇಳೆಯಲ್ಲಿ ಉಪಾಧ್ಯಾಯವೃತ್ತಿಯಲ್ಲಿದ್ದ ಶ್ರೀ ಚೆನ್ನಮಲ್ಲಿಕಾರ್ಜುನರು ಹಳಕಟ್ಟಿಯವರ ಮಾದರಿಯಲ್ಲಿಯೇ ಹಸ್ತಪ್ರತಿಸಂಗ್ರಹ, ಪರಿಷ್ಕರಣ, ಪ್ರಕಟಣ ಕಾರ್ಯವನ್ನು ಕೈಕೊಂಡ ಮತ್ತೊಬ್ಬ ಮಹತ್ವದ ವಚನಸಾಹಿತ್ಯ ಸಂಶೋಧಕರು. ವಚನಸಾಹಿತ್ಯ ಪ್ರಕಟಣೆಗಾಗಿ 'ಶಿವಲಿಂಗವಿಜಯ' (೧೯೩೧) ಎಂಬ ಮುದ್ರಣಾಲಯ, 'ಸದ್ಧರ್ಮ ದೀಪಿಕೆ'ಯೆಂಬ ಪತ್ರಿಕೆ

(೧೯೩೧), 'ಸದ್ಧರ್ಮ ಗ್ರಂಥಮಾಲೆ'ಯನ್ನು ಸ್ಥಾಪಿಸಿದರು. ಅವುಗಳ ಮೂಲಕ ಸಿದ್ಧೇಶ್ವರ ವಚನ (೧೯೩೨-೩೩), ಸರ್ವಪುರಾತನರ ವಚನ, ಜೇಡರದಾಸಿಮಯ್ಯನ ವಚನ ಮೊದಲಾದ ಸು. ೧೨ ಗ್ರಂಥಗಳನ್ನು ಪ್ರಕಟಿಸಿದರು. ವಚನಗಳಿಗೆ ಟೀಕೆ-ಟಿಪ್ಪಣಿ, ವಿವರಗಳನ್ನು ಬರೆದುದು ಇವರ ವಿಶೇಷ ಕಾರ್ಯ.

**ಹಳಕಟ್ಟಿ ಅನಂತರದ ಕಾಲ**

ಹಳಕಟ್ಟಿ ಅವರ ನಂತರ ವಚನಸಾಹಿತ್ಯ ಪರಿಷ್ಕರಣ ಮತ್ತು ಸಂಶೋಧನೆಗಳಿಗೆ ಹೊಸ ದಿಕ್ಕು ದೆಸೆ ಮೂಡಿಸಿದವರು ಪ್ರೊ. ಶಿ.ಶಿ. ಬಸವನಾಳ ಅವರು. "ವಚನಸಾಹಿತ್ಯದ ಸಂಗ್ರಹಮೌಲ್ಯವನ್ನು ಸಂಪಾದನಾಮೌಲ್ಯಕ್ಕೆ ಎತ್ತರಿಸಿದ ಪ್ರಥಮ ಕೀರ್ತಿ" ಅವರಿಗೆ ಸಲ್ಲುತ್ತದೆ. ಅವರು ಸಂಪಾದಿಸಿದ ಬಸವಣ್ಣನವರ ಷಟ್‌ಸ್ಥಲ ವಚನಗಳು ವಚನ ಪರಿಷ್ಕರಣ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲು. ಬಸವನಾಳರಿಗಿಂತ ಪೂರ್ವದಲ್ಲಿ ಬಸವಣ್ಣನವರ ವಚನಗಳು ನಾಲ್ಕು ಆವೃತ್ತಿಗಳಲ್ಲಿ (೧೮೮೯, ೧೯೨೩, ೧೯೨೬, ೧೯೪೨ ಬಳ್ಳಾರಿ ಶೆಟ್ಟರು, ಹಳಕಟ್ಟಿ) ಪ್ರಕಟವಾಗಿದ್ದವು. ಆದರೆ ಅವು ವ್ಯವಸ್ಥಿತವಾದ ವೈಜ್ಞಾನಿಕ ಪರಿಷ್ಕರಣಗಳಾಗಿರದೆ "ಹೇಗಾದರೂ ಆಗಲಿ, ಒಮ್ಮೆ ಮುದ್ರಿತವಾಗಿ ಹೊರಬಿದ್ದರಾಯಿತು, ವಿದ್ವಜ್ಜನರ ಅಭ್ಯಾಸ, ವಿಮರ್ಶೆಗಳಿಗೆ ಸಿಕ್ಕಿ ಶುದ್ಧ ಸಂಸ್ಕರಣಗಳಿಗೆ ಮಾರ್ಗವಾಗಬಹುದು ಎಂಬ ಸದಿಚ್ಛೆಯಿಂದ " ಪ್ರಕಟಿಸಿದವುಗಳಾಗಿದ್ದವು. ಅದನ್ನು ಅರಿತು ಬಸವನಾಳರು ಬಸವಣ್ಣನವರ ವಚನಗಳನ್ನು ಶಾಸ್ತ್ರಶುದ್ಧವಾಗಿ ಪರಿಷ್ಕರಿಸಲು ಕೈಗೆತ್ತಿಕೊಂಡರು. ೯ ವರ್ಷಗಳ ಕಾಲ (೧೯೪೨-೧೯೫೧) ಪರಿಶ್ರಮಪಟ್ಟು ಅವರು ಸಿದ್ಧಪಡಿಸಿದ ಈ ಕೃತಿ ಅನೇಕ ದೃಷ್ಟಿಯಿಂದ ಇಂದಿಗೂ ಮಾದರಿಯಾಗಿ ನಿಂತಿದೆ. ವಚನಗಳನ್ನು ಲಯಾನುಸಾರವಾಗಿ ಅನೇಕ ಸಾಲುಗಳಾಗಿ ಒಡೆದು ಮುದ್ರಿಸಿದ್ದು, ವಿರಾಮಚಿಹ್ನೆಗಳನ್ನು ನಿಯತವಾಗಿ ಬಳಸಿದ್ದು, ವಚನದ ತಾತ್ವಿಕ-ಧಾರ್ಮಿಕ-ಸಾಮಾಜಿಕ-ಭಾಷಿಕ ಆಶಯಕ್ಕನುಗುಣವಾಗಿ ಪಾಠಗಳನ್ನು ಶುದ್ಧಗೊಳಿಸಿದ್ದು, ವಿಸ್ತಾರವಾದ ಪ್ರಸ್ತಾವನೆಯಲ್ಲಿ ವಚನಸಾಹಿತ್ಯದ ಲಕ್ಷಣ, ವೈಶಿಷ್ಟ್ಯಗಳನ್ನು ಎತ್ತಿ ಹೇಳಿದ್ದು, ಅನುಬಂಧದಲ್ಲಿ ವಚನಗಳ ಅಕಾರಾದಿ, ಕಠಿಣ ಪದಕೋಶ, ಅವಶ್ಯವಿದ್ದ ವಚನಗಳಿಗೆ ಟೀಕೆ-ಟಿಪ್ಪಣಿ ಜೋಡಿಸಿದ್ದು, ಇವೆಲ್ಲ ಈ ಕೃತಿಯ ವಿಶೇಷಗಳೆನಿಸಿವೆ; ಪರಿಪೂರ್ಣ ಪರಿಷ್ಕರಣಗ್ರಂಥಕ್ಕೆ ಅವಶ್ಯವಾಗಿ ಇರಬೇಕಾದ ಪರಿಕರಗಳೆನಿಸಿವೆ. ಈ ಕಾರಣದಿಂದ ಈ ಕೃತಿ ಒಂದು ಉತ್ತಮ ಪರಿಷ್ಕರಣವೆನಿಸಿದೆ. ಹಾಗೆಯೇ ಒಂದು ಉತ್ತಮ ಸಂಶೋಧನೆಯೂ ಆಗಿದೆ. ಬಸವನಾಳರ ಈ ಮಾರ್ಗ ಮುಂದಿನ ವಚನಸಾಹಿತ್ಯ ಸಂಶೋಧಕರಿಗೆಲ್ಲ ಮಾದರಿ ಎನಿಸಿತು, ಮಾರ್ಗದರ್ಶಕವಾಯಿತು.

ಬಸವನಾಳರ ಮಾರ್ಗದಲ್ಲಿ ನಡೆದು, ವಚನಸಾಹಿತ್ಯ ಪರಿಷ್ಕರಣ ಹಾಗೂ ಸಂಶೋಧನ ಕ್ಷೇತ್ರದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿದ ಇಬ್ಬರು ಘನ ವಿದ್ವಾಂಸರೆಂದರೆ, ಡಾ. ಆರ್.ಸಿ. ಹಿರೇಮಠ ಮತ್ತು ಡಾ. ಎಲ್. ಬಸವರಾಜು ಅವರು.

ಡಾ. ಆರ್.ಸಿ. ಹಿರೇಮಠ ಅವರ ನೇತೃತ್ವದಲ್ಲಿ ಕನ್ನಡ ಅಧ್ಯಯನ ಪೀಠದಲ್ಲಿ ೧೯೬೨ರಲ್ಲಿ ಅಸ್ತಿತ್ವಕ್ಕೆ ಬಂದ 'ಸಮಗ್ರ ವಚನ ವಾಙ್ಮಯ ಸಂಗ್ರಹ-ಸಂಸ್ಕರಣ, ಪ್ರಕಟನ ಯೋಜನೆ'ಯ ಅಡಿಯಲ್ಲಿ 'ನ ಭೂತೋ ನ ಭವಿಷ್ಯತಿ' ಎನ್ನುವಂತೆ ಅಪೂರ್ವ ಸಾಂಘಿಕ ಕಾರ್ಯವೊಂದು ನಡೆಯಿತು. ಡಾ. ಹಿರೇಮಠ ಅವರ ಆಳವಾದ ವಿದ್ವತ್ತು, ಪರಿಷ್ಕರಣ ಪಾಂಡಿತ್ಯ, ಪರಿಶ್ರಮ ಪ್ರವೃತ್ತಿ, ಸಂಶೋಧನ ಶ್ರದ್ಧೆಗಳ ಫಲವಾಗಿ ಅಲ್ಪಾವಧಿಯಲ್ಲಿಯೇ ಕಲ್ಪನೆಗೆ ಮೀರಿದ ಕಾರ್ಯಗಳು ನಡೆದವು. ಚೆನ್ನಬಸವಣ್ಣನವರ ವಚನಗಳು (೧೯೬೫), ಬಸವಣ್ಣನವರ ವಚನಗಳು (೧೯೬೮), ಸಿದ್ಧರಾಮೇಶ್ವರ ವಚನಗಳು (೧೯೬೮), ಶಿವಶರಣೆಯರ ವಚನಗಳು (೧೯೬೮), ಅಲ್ಲಮಪ್ರಭುದೇವರ ವಚನಗಳು (೧೯೭೬), ಶಿವಗಣಪ್ರಸಾದಿ ಮಹಾದೇವಯ್ಯ, ಗುಮ್ಮಳಾಪುರದ ಸಿದ್ಧಲಿಂಗರ ಶೂನ್ಯಸಂಪಾದನೆಗಳು, ಸಕಲ ಪುರಾತನರ ವಚನಗಳು, ವಿಶೇಷಾನುಭವ ಷಟ್‌ಸ್ಥಲ, ವೀರಶೈವ ಚಿಂತಾಮಣಿ, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ ಮೊದಲಾದ ಸ್ಥಲಕಟ್ಟಿನ ಕೃತಿಗಳು ಒಂದರ ಮೇಲೊಂದು ಪ್ರಕಟವಾಗಿ, 'ವಚನ ಸಾಹಿತ್ಯ ಸಂಪಾದನೆಯ ಸುಗ್ಗಿಯ ಕಾಲ'ವನ್ನು ನಿರ್ಮಿಸಿದವು. ವಿವಿಧ ಮೂಲಗಳಿಂದ ಪ್ರತಿಯೊಬ್ಬ ಶರಣನ ವಚನಗಳನ್ನು ಆಯ್ದು, ನೂರಾರು ಹಸ್ತಪ್ರತಿಗಳನ್ನು ಕಲೆ ಹಾಕಿ, ಶುದ್ಧಪಾಠವನ್ನು ನಿರ್ಣಯಿಸಿ, ಸುದೀರ್ಘವಾದ ಪ್ರಸ್ತಾವನೆಯಲ್ಲಿ ಪರಿಷ್ಕರಣದ ವಿಧಾನ, ಹಸ್ತಪ್ರತಿಗಳ ವಿವರ, ವಂಶನಿರ್ಣಯ, ವಚನಕಾರನ ಚರಿತ್ರೆ, ವಚನಗಳ ಆಶಯ ಮೌಲ್ಯಮಾಪನ ಮಾಡಿ, ಅನುಬಂಧದಲ್ಲಿ ವಚನಗಳ ಅಕಾರಾದಿ, ಕಠಿಣ ಪದಕೋಶ, ಪಾರಿಭಾಷಿಕ ಪದಕೋಶ, ವಿಶಿಷ್ಟ ಪದಕೋಶ, ಸಂದರ್ಭ-ಟಿಪ್ಪಣಿ ಇತ್ಯಾದಿ ಪೂರಕ ಸಾಮಗ್ರಿಯನ್ನು ಅಳವಡಿಸಿ ಪ್ರಕಟಿಸಿದ ಒಂದೊಂದು ಕೃತಿಗಳೂ ಉನ್ನತ ಸಂಶೋಧನ ಗ್ರಂಥಗಳೆನಿಸಿವೆ. ಸಂಶೋಧಕರಿಗೆ ಅಪಾರ ಸಾಮಗ್ರಿಯನ್ನು ಒದಗಿಸುವ ಆಕರ ಗ್ರಂಥಗಳೆನಿಸಿವೆ.

ಡಾ. ಹಿರೇಮಠರ ದಾರಿಯಲ್ಲಿಯೇ ನಡೆದ ಡಾ. ಎಂ.ಎಸ್. ಸುಂಕಾಪುರ ಅವರು ಸಕಲಪುರಾತನರ ವಚನಗಳು, ಸಕಲಪುರಾತನರ ಬೆಡಗಿನ ವಚನಗಳು, ಬಾಲಸಂಗಯ್ಯನ ವಚನಗಳು, ಪರಮೂಲಜ್ಞಾನ ಷಟ್‌ಸ್ಥಲ, ಪ್ರಸಾದಿಸ್ಥಲದ ವಚನಗಳು, ಲಿಂಗಚಿದಮೃತ ಬೋಧೆ ಎಂಬ ವಚನಗ್ರಂಥಗಳನ್ನು ಪ್ರಕಟಿಸುವ ಮೂಲಕ ಡಾ. ಹಿರೇಮಠರು ಅರ್ಧಕ್ಕೆ ಬಿಟ್ಟು ಹೋಗಿದ್ದ ಸಾಂಘಿಕ ಕಾರ್ಯವನ್ನು ಪೂರ್ಣಗೊಳಿಸಿದರು. ಈ ಮಹತ್ಕಾರ್ಯ ಕಾರಣವಾಗಿ ಕನ್ನಡ ಅಧ್ಯಯನ ಪೀಠದ ಹೆಸರು ವಚನಸಾಹಿತ್ಯ ಪ್ರಕಟನೆಯ ಇತಿಹಾಸದಲ್ಲಿ ಉಜ್ವಲವಾಗಿ ಬೆಳಗುವಂತಾಯಿತು.

ಡಾ. ಎಲ್. ಬಸವರಾಜು ಅವರದು ವಚನಸಾಹಿತ್ಯ ಪರಿಷ್ಕರಣ ಮತ್ತು ಸಂಶೋಧನೆಯಲ್ಲಿ ಮತ್ತೊಂದು ದೊಡ್ಡ ಹೆಸರು. ೧೯೫೨ ರಲ್ಲಿ ಬಸವಣ್ಣನವರ ವಚನಗಳನ್ನು ಪರಿಷ್ಕರಿಸಿ ಪ್ರಕಟಿಸುವ ಮೂಲಕ ವಚನ ಸಾಹಿತ್ಯ ಸಂಶೋಧನ ದೀಕ್ಷೆಯನ್ನು ತೊಟ್ಟ ಇವರು ಮುಂದೆ ಅಲ್ಲಮನ ವಚನಚಂದ್ರಿಕೆ(೧೯೬೨), ಶಿವದಾಸಗೀತಾಂಜಲಿ (೧೯೬೩),

ಅಕ್ಕನ ವಚನಗಳು (೧೯೬೯), ದೇವರದಾಸಿಮಯ್ಯನ ವಚನಗಳು (೧೯೭೦) ಮೊದಲಾದ ಕೃತಿಗಳನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದರು. ಒಂದೊಂದು ಗ್ರಂಥಗಳಿಗೆ ಬರೆದ ವಿದ್ವತ್ಪೂರ್ಣ ಪ್ರಸ್ತಾವನೆಗಳು ವ್ಯಾಪಕವಾದ ಅಧ್ಯಯನ, ಗಂಭೀರವಾದ ಚಿಂತನೆ, ಅಪಾರ ಪರಿಶ್ರಮಗಳಿಂದ ಮೂಡಿ ಬಂದಿದ್ದು, ತಮ್ಮ ವಿಸ್ತಾರ ಹಾಗೂ ಸತ್ವಗಳಿಂದ ಸ್ವತಂತ್ರ ಸಂಶೋಧನ ಪ್ರಬಂಧದ ಸ್ವರೂಪವನ್ನು ಪಡೆದಿವೆ. ವೈವಿಧ್ಯಪೂರ್ಣ ವಿಸ್ತೃತ ಅನುಬಂಧಗಳಂತೂ ಸಂಶೋಧಕರಿಗೆ ವಿಪುಲ ಸಾಮಗ್ರಿಯನ್ನು ಒದಗಿಸುತ್ತವೆ. ಇವರು ಮಾಡಿದ ಈ ಏಕವ್ಯಕ್ತಿ ಸಾಹಸ ಬೆರಗುಗೊಳಿಸುತ್ತದೆ.

ಇದೇ ಅವಧಿಯಲ್ಲಿ ಹೊಸಹಳ್ಳಿ ಪ್ರಭುಸ್ವಾಮಿಗಳು, ಪ್ರೊ. ಸಂ.ಶಿ. ಭೂಸನೂರಮಠ, ಉತ್ತಂಗಿ ಚೆನ್ನಪ್ಪ, ಎಸ್.ಎಂ. ಹುಣಶ್ಯಾಳ, ವೀ.ರು. ಕೊಪ್ಪಳ, ಎಚ್. ದೇವೀರಪ್ಪ, ಸಿ.ಕೆ. ಪರಶುರಾಮ, ಬಿ.ಸಿ. ಜವಳಿ, ಎಚ್.ಪಿ. ಮಲ್ಲೇದೇವರು, ಬಿ. ಎಸ್. ಸಣ್ಣಯ್ಯ ಮೊದಲಾದವರು ಈ ಕಾರ್ಯವನ್ನು ಶಕ್ತ್ಯಾನುಸಾರ ಮಾಡಿದ್ದಾರೆ.

ಬಸವನಾಳ ಮಾರ್ಗದ ಈ ಪರಂಪರೆಯನ್ನು ಡಾ. ಎಂ.ಎಂ. ಕಲಬುರ್ಗಿ, ಡಾ. ವಿ. ಶಿವಾನಂದ, ಡಾ. ಎಸ್. ವಿದ್ಯಾಶಂಕರ, ಡಾ. ಬಿ.ವಿ. ಶಿರೂರ, ಶ್ರೀ ಪಿ.ಎಂ. ಗಿರಿರಾಜು, ಡಾ. ವೀರಣ್ಣ ರಾಜೂರ, ಡಾ. ಬಿ.ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ, ಎಸ್. ಉಮಾಪತಿ, ಹ.ನಂ. ವಿಜಯಕುಮಾರ, ಬಿ.ವಿ. ಮಲ್ಲಾಪೂರ ಮೊದಲಾದವರು ಮುಂದುವರಿಸಿಕೊಂಡು ಸಾಗಿ, ಅಪ್ರಕಟಿತ ವಚನಗ್ರಂಥಗಳನ್ನು ಶಾಸ್ತ್ರ ಶುದ್ಧವಾಗಿ ಪರಿಷ್ಕರಿಸುವ, ವಚನಗಳನ್ನು ಬೇರೆ ಬೇರೆ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಕಾರ್ಯವನ್ನು ತುಂಬ ಗಂಭೀರವಾಗಿ ಮುಂದುವರಿಸಿದ್ದಾರೆ.

ವಚನಸಾಹಿತ್ಯ ಪ್ರಕಟನೆ ಮತ್ತು ಸಂಶೋಧನ ಕಾರ್ಯ ಸಾಂಘಿಕ ಹಾಗೂ ವೈಯಕ್ತಿಕ ನೆಲೆಗಳಂತೆ ಸಾಂಸ್ಥಿಕ-ಮಟ್ಟದಲ್ಲಿಯೂ ನಡೆದುಬಂದಿದೆ. ವಿಶ್ವವಿದ್ಯಾಲಗಳಂತೆ ಧಾರ್ಮಿಕ ಸಂಸ್ಥೆಗಳು, ಸಂಸ್ಕೃತಿ ಇಲಾಖೆ ಈ ಕಾರ್ಯವನ್ನು ಕೈಗೆತ್ತಿಕೊಂಡು ನಡೆಸುತ್ತ ಬಂದಿವೆ. ಅವುಗಳಲ್ಲಿ ಧಾರವಾಡದ ಮುರುಘಾಮಠ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಚಿತ್ರದುರ್ಗದ ಬೃಹನ್ಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಗದುಗಿನ ತೋಂಟದಾರ್ಯಮಠ, ಬೆಳಗಾವಿಯ ನಾಗನೂರಮಠ, ಬೆಂಗಳೂರಿನ ಸರ್ಪಭೂಷಣಮಠ, ಮೈಸೂರಿನ ಸುತ್ತೂರುಮಠ, ಸಿರಿಗೆರೆಯ ತರಳಬಾಳುಮಠ, ಬಸವಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದವು ಮುಖ್ಯವೆನಿಸಿವೆ. ಇವುಗಳಲ್ಲಿ ಗದುಗಿನ ತೋಂಟದಾರ್ಯಮಠದ ಕಾರ್ಯ ಎದ್ದು ಕಾಣುವಂತಿದೆ. ಡಾ. ಎಂ.ಎಂ. ಕಲಬುರ್ಗಿಯವರ ನಿರ್ದೇಶನದಲ್ಲಿ ಶ್ರೀಮಠದ ವೀರಶೈವ ಅಧ್ಯಯನ ಸಂಸ್ಥೆಯ ಅಡಿಯಲ್ಲಿ ಪ್ರಕಟವಾದ ೩೪ ಅಪ್ರಕಟಿತ ವಚನಗ್ರಂಥಗಳು, ೧೧ ಸ್ವರವಚನಗ್ರಂಥಗಳು, ೩ ಸಂಶೋಧನ ಗ್ರಂಥಗಳು, ೧ ಅನುವಾದ ಗ್ರಂಥ, ಅದರ ವಚನಸಾಹಿತ್ಯ ಸಂಶೋಧನ ನಿಷ್ಠೆಯನ್ನು ಎತ್ತಿ ಹೇಳುತ್ತವೆ. ಈ ಕಾರ್ಯದಲ್ಲಿ ದುಡಿದ ವಿದ್ವಾಂಸರಲ್ಲಿ ಡಾ. ಬಿ.ವಿ. ಶಿರೂರ, ಜಿ.ಎ.

ಶಿವಲಿಂಗಯ್ಯ, ಡಾ. ವೀರಣ್ಣ ರಾಜೂರ, ಶ್ರೀ ಎಸ್. ಶಿವಣ್ಣ, ಡಾ. ಬಿ.ಆರ್. ಹಿರೇಮಠ, ಪ್ರೊ. ಎಸ್. ಉಮಾಪತಿ, ಡಾ. ವೈ.ಸಿ. ಭಾನುಮತಿ, ಡಾ. ಪಿ.ವಿ. ನಾರಾಯಣ ಮೊದಲಾದವರು ಮುಖ್ಯರೆನಿಸಿದ್ದಾರೆ.

ವಚನಸಾಹಿತ್ಯ ಸಂಶೋಧನೆ-ಪ್ರಕಟನೆಯ ಇತಿಹಾಸದಲ್ಲಿ ಕರ್ನಾಟಕ ಸರ್ಕಾರದ ಕನ್ನಡ-ಸಂಸ್ಕೃತಿ ನಿರ್ದೇಶನಾಲಯದ ಕಾರ್ಯ ಅದ್ವಿತೀಯವಾದದ್ದು. 'ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ' ಎಂಬ ಯೋಜನೆಯ ಅಡಿಯಲ್ಲಿ, ಡಾ. ಎಂ.ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಿದ್ಧವಾದ ೧೪ ಸಂಪುಟಗಳು ಇದುವರೆಗೆ ದೊರಕುವ ಎಲ್ಲ ಶರಣರ ಎಲ್ಲ ನಿಜ ವಚನಗಳನ್ನು ಶುದ್ಧವಾಗಿ ಹೊರತಂದಿವೆ. ಇಲ್ಲಿ ಏಕಕಾಲಕ್ಕೆ ವಚನಶೋಧ-ಪರಿಷ್ಕರಣ-ವಿಶ್ಲೇಷಣ ಎಂಬ ಮೂರೂ ಕಾರ್ಯಗಳು ಅಪೂರ್ವ ರೀತಿಯಲ್ಲಿ ನಡೆದಿವೆ. ಇವುಗಳ ಸಂಪಾದಕರು ಡಾ. ಎಂ.ಎಂ. ಕಲಬುರ್ಗಿ, ಡಾ. ಬಿ.ವಿ. ಮಲ್ಲಾಪುರ, ಡಾ. ವಿದ್ಯಾಶಂಕರ, ಡಾ. ವೀರಣ್ಣ ರಾಜೂರ, ಎಸ್. ಶಿವಣ್ಣ, ಡಾ. ಬಿ.ಆರ್. ಹಿರೇಮಠ ಅವರು. ಮೌಲಿಕ ಪ್ರಸ್ತಾವನೆ, ಪದಕೋಶ, ಆಕರಸೂಚಿ, ವಚನಗಳ ಅಕಾರಾದಿಯೊಂದಿಗೆ ಪ್ರಕಟವಾದ ಇವು ವಚನಸಾಹಿತ್ಯವನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬೇಕೆನ್ನುವ ಸಂಶೋಧಕರಿಗೆ, ವಿದ್ವಾಂಸರಿಗೆ ಅಮೂಲ್ಯ ಆಕರಸಾಮಗ್ರಿ ಎನಿಸಿವೆ. ಒಂದು ಸಾಹಿತ್ಯ ಪ್ರಕಾರವನ್ನು ಒಂದೆಡೆ ಸಮಗ್ರವಾಗಿ ಶೋಧಿಸಿಕೊಟ್ಟ ಇಂಥ ಉದಾಹರಣೆ ಇನ್ನೊಂದಿಲ್ಲ.

ಇಲ್ಲಿಯವರೆಗೆ ಮಾಡಿದ ಸಮೀಕ್ಷೆಯಲ್ಲಿ ವಚನಸಾಹಿತ್ಯದ ಆಕರಶೋಧದ ಪರಂಪರೆಯನ್ನು ಗಮನಿಸಲಾಯಿತು. ವಚನಸಾಹಿತ್ಯದ ಸಂಶೋಧನೆ ಈ ಆಕರಶೋಧ ಪರಂಪರೆಯ ಜೊತೆಯಲ್ಲಿಯೇ ಸಾಗಿಬಂದಿರುವುದರಿಂದ ಅದನ್ನು ಬೇರ್ಪಡಿಸಿ ಅಧ್ಯಯನ ಮಾಡಲು ಬರುವುದಿಲ್ಲ.

## ಆಶಯಶೋಧ

ಆಕರಶೋಧದ ಜೊತೆಯಲ್ಲಿಯೇ ವಚನಗಳ ಆಶಯಶೋಧ ಕಾರ್ಯವೂ ಪೂರಕವಾಗಿ ನಡೆಯುತ್ತ ಬಂದುದನ್ನು ಕಾಣುತ್ತೇವೆ. ಪ್ರಾಚೀನ ವಚನ ಸಂಕಲನಕಾರರು ಹಾಗೂ ಸಂಪಾದನಕಾರರು ವಚನಗಳನ್ನು ವಿಷಯಾನುಗುಣವಾಗಿ ವಿಂಗಡಿಸಿ ವಿವಿಧ ಸ್ಥಲಕಟ್ಟುಗಳಾಗಿ ಜೋಡಿಸುವಲ್ಲಿ, ಅವುಗಳ ಅಂತರಾರ್ಥವನ್ನು, ಉದ್ದೇಶವನ್ನು ಅರಿತು ವ್ಯಾಖ್ಯಾನಿಸುವಲ್ಲಿ ಒಂದು ದೃಷ್ಟಿಯಿಂದ ಆಶಯಶೋಧದ ಕಾರ್ಯವನ್ನೇ ಮಾಡುತ್ತ ಬಂದಿದ್ದಾರೆ.

ಆಧುನಿಕ ಕಾಲದಲ್ಲಿ ವಚನಗಳ ಆಶಯಶೋಧ ಕಾರ್ಯ ಮೊದಲು ಆರಂಭವಾದದ್ದು ಹಳಕಟ್ಟಿಯವರಿಂದಲೇ ಎಂದು ಹೇಳಬೇಕಾಗುತ್ತದೆ. ಅವರು ಸಂಯೋಜಿಸಿದ ವಚನಶಾಸ್ತ್ರಸಾರ ಸಂಪುಟಗಳು ವಚನಗಳ ಆಶಯವನ್ನು ಅರಿತು ಜೋಡಿಸಿದ ಗ್ರಂಥಗಳಾಗಿವೆ. ಅವರು ರಚಿಸಿದ

'ಶಿವಾನುಭವ ಶಬ್ದಕೋಶ' ವಚನಗಳ ಅಂತರಂಗವನ್ನು ಬಿಚ್ಚಿ ತೋರಿಸುವ ವಿಶಿಷ್ಟ ಕೃತಿಯಾಗಿದೆ.

ಹಳಕಟ್ಟಿ ಅವರ 'ವಚನಶಾಸ್ತ್ರಸಾರ'ವನ್ನು ಮಾದರಿಯಾಗಿಟ್ಟುಕೊಂಡು ಹೊಸದೊಂದು ಕ್ರಮದಲ್ಲಿ ವಚನಗಳನ್ನು ವಿಭಜಿಸಿ ವಿವೇಚಿಸಲು ಪ್ರಯತ್ನಿಸಿದ ಆರ್.ಆರ್. ದಿವಾಕರ ಅವರ 'ವಚನಶಾಸ್ತ್ರರಹಸ್ಯ', ಎಂ.ಆರ್. ಶ್ರೀನಿವಾಸ ಮೂರ್ತಿ ಅವರ 'ವಚನಧರ್ಮಸಾರ'ಗಳೂ ವಚನಗಳ ಆಶಯಶೋಧಕ್ಕೆ ಹೊರಟ ಕೃತಿಗಳಾಗಿವೆ.

ವಚನಗಳ ನಿಜವಾದ ಆಶಯಶೋಧಕ್ಕೆ ತೊಡಗಿದವರು ಪ್ರೊ. ಶಿ.ಶಿ. ಬಸವನಾಳರು. ಅವರು ಸಂಪಾದಿಸಿದ 'ಬಸವಣ್ಣನವರ ಷಟ್‌ಸ್ಥಲವಚನಗಳು' ಗ್ರಂಥದ ಪ್ರಸ್ತಾವನೆ ಇದಕ್ಕೆ ಉತ್ತಮ ನಿದರ್ಶನವೆನಿಸಿದೆ. ಮುಂದೆ ಡಾ. ಆರ್.ಸಿ. ಹಿರೇಮಠ, ಡಾ. ಎಲ್. ಬಸವರಾಜು ಹಾಗೂ ಇತರರು ಸಂಪಾದಿಸಿದ ಕೃತಿಗಳಲ್ಲಿಯೂ ಇದು ಸಾಗಿ ನಡೆದಿದೆ. ಇದು ವಚನಗಳ ಆಕರಶೋಧದ ಜೊತೆಗೆ ನಡೆದ ಆಶಯಶೋಧದ ಮಾತಾಯಿತು. ಇನ್ನು ಕೇವಲ ವಚನಗಳ ಆಶಯಶೋಧವನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ನಡೆದ ಸಂಶೋಧನೆಯನ್ನು ಕೆಳಗಿನಂತೆ ಸಮೀಕ್ಷಿಸಬಹುದು.

ವಚನಸಾಹಿತ್ಯದ ಆಶಯಶೋಧನಿಷ್ಠ ಸಂಶೋಧನೆ ಮುಖ್ಯವಾಗಿ ಧಾರ್ಮಿಕ ಅಥವಾ ತಾತ್ವಿಕ ನೆಲೆ, ಸಾಮಾಜಿಕ ನೆಲೆ, ಸಾಹಿತ್ಯಿಕ ನೆಲೆ ಹಾಗೂ ಸಾಂಸ್ಕೃತಿಕ ನೆಲೆ ಎಂಬ ನಾಲ್ಕು ಹಂತಗಳಲ್ಲಿ ನಡೆದುಬಂದಿದೆ.

### ಧಾರ್ಮಿಕ ಅಥವಾ ತಾತ್ವಿಕ ನೆಲೆ

ಶಿವಶರಣರು ರೂಪಿಸಿದ ವೀರಶೈವ ಧರ್ಮತತ್ವಗಳ ಪ್ರತಿಪಾದನೆ ವಚನಗಳಲ್ಲಿ ಉತ್ಕಟವಾಗಿ ನಡೆದಿದೆ. ಹೀಗಾಗಿ ಅನೇಕ ಜನ ವಿದ್ವಾಂಸರು ಮೊದಲು ವಚನಸಾಹಿತ್ಯದ ಧಾರ್ಮಿಕ ಅಧ್ಯಯನಕ್ಕೆ, ತಾತ್ವಿಕ ವಿವೇಚನೆಗೆ ತೊಡಗಿದುದು ಕಂಡುಬರುತ್ತದೆ. ವೀರಶೈವದ ಮುಖ್ಯ ತತ್ವಗಳಾದ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಶಿವಯೋಗ, ಕಾಯಕ-ದಾಸೋಹ ಮೊದಲಾದವುಗಳ ಸ್ವರೂಪ-ಲಕ್ಷಣ-ವೈಶಿಷ್ಟ್ಯಗಳನ್ನು ಗುರುತಿಸುವ ಹಲವಾರು ಕೃತಿಗಳು ಹುಟ್ಟಿಕೊಂಡಿವೆ. ಡಾ. ಆರ್.ಸಿ. ಹಿರೇಮಠರ 'ಷಟ್‌ಸ್ಥಲ ಪ್ರಭೆ' ಚೆನ್ನಬಸವಣ್ಣ ಹಾಗೂ ತೋಂಟದ ಸಿದ್ಧಲಿಂಗರ ವಚನಗಳಲ್ಲಿ ಅಡಗಿದ ಷಟ್‌ಸ್ಥಲ ತತ್ವವನ್ನು ಶೋಧಿಸಿಕೊಡುವ ಕಾರ್ಯ ಮಾಡಿದರೆ, 'ಮಹಾಯಾತ್ರೆ' ವೀರಶೈವದ ಉಗಮ-ವಿಕಾಸ-ಪರಂಪರೆಯನ್ನು ವಚನ ಮತ್ತು ಕಾವ್ಯಗಳ ಆಧಾರದಿಂದ ನಿರೂಪಿಸುತ್ತದೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ 'ವಚನಗಳಲ್ಲಿ ವೀರಶೈವಧರ್ಮ' ಸಮಗ್ರ ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾದ ವೀರಶೈವ ಧರ್ಮತತ್ವಗಳನ್ನು ತುಂಬ ವ್ಯಾಪಕವಾಗಿ ಹಾಗೂ ಸಮರ್ಥವಾಗಿ ಸಂಶೋಧಿಸಿಕೊಡುತ್ತದೆ. ಸಂ.ಶಿ. ಭೂಸನೂರಮಠರ 'ಶೂನ್ಯಸಂಪಾದನೆಯ ಪರಾಮರ್ಶೆ' ಶೂನ್ಯಸಂಪಾದನೆ ಗ್ರಂಥದಲ್ಲಿ ಅಡಗಿದ ಶರಣತತ್ವಗಳನ್ನು ವೈಚಾರಿಕ ಹಾಗೂ ವೈಜ್ಞಾನಿಕ

ನೆಲೆಯಲ್ಲಿ ವಿಶ್ಲೇಷಿಸುವ ಕಾರ್ಯವನ್ನು ಮಾಡುತ್ತದೆ. ಜಚನಿ ಅವರ 'ಸಂಪಾದನೆಯ ಸೊಂಪು' ಸಂಪುಟಗಳು ಶೂನ್ಯಸಂಪಾದನೆಯ ಅಂತರಂಗವನ್ನು ತೆರೆದು ತೋರಿಸುವ ವ್ಯಾಖ್ಯಾನಗ್ರಂಥಗಳಾಗಿವೆ. ಡಾ. ಜಿ.ಎಸ್. ಸಿದ್ಧಲಿಂಗಯ್ಯ ಅವರ 'ಶೂನ್ಯ ಸಂಪಾದನೆಗಳು-ಮರು ಚಿಂತನೆ', ಅಮರೇಶ ನುಗಡೋಣಿ ಸಂಪಾದಿಸಿದ 'ಶೂನ್ಯಸಂಪಾದನೆಗಳು ಸಾಂಸ್ಕೃತಿಕ-ಮುಖಾಮುಖಿ' ಎಂಬ ಗ್ರಂಥಗಳು ಶೂನ್ಯಸಂಪಾದನೆಗಳನ್ನು ಕುರಿತ ಪುನರ್ ವಿಮರ್ಶೆಗಳಾಗಿವೆ.

ವಚನಗಳ ತಾತ್ವಿಕ ಶೋಧಕ್ಕೆ ತೊಡಗಿದ ಇತರ ಕೃತಿಗಳಲ್ಲಿ ತಿಪ್ಪೇರುದ್ರಸ್ವಾಮಿ ಅವರ 'ಶರಣರ ಅನುಭಾವಸಾಹಿತ್ಯ', ಆರ್.ಆರ್. ದಿವಾಕರ ಅವರ 'ಅನುಭವ, ಅನುಭಾವ, ಅನುಭೂತಿ', ಮುಂಡರಗಿ ಅನ್ನದಾನೀಶ್ವರಸ್ವಾಮಿಗಳ 'ಷಟ್‌ಸ್ಥಲ: ಒಂದು ಅಧ್ಯಯನ', 'ವೀರಶೈವಧರ್ಮ: ಒಂದು ಅಧ್ಯಯನ', ವಿ.ಎಸ್. ಕಂಬಿ ಅವರ 'ಶೂನ್ಯಸಂಪಾದನೆ', ವೀರಶೈವದರ್ಶನ ಸಂಪುಟಗಳು, ಹಿರೇಮಲ್ಲೂರ ಈಶ್ವರನ್ ಅವರ 'ಲಿಂಗಾಯತ ಧರ್ಮ: ಒಂದು ಅಧ್ಯಯನ', ಜಯಶ್ರೀ ದಂಡೆ ಅವರ 'ಶೈವ ಹಾಗೂ ವೀರಶೈವ', ಡಾ. ಎಂ. ಶಿವಕುಮಾರಸ್ವಾಮಿಗಳ 'ಶೈವಾಗಮಗಳು ಮತ್ತು ವಚನ ಸಾಹಿತ್ಯ', ಅಕ್ಕೂರಮಠ ಅವರ 'ಧರ್ಮಸಂಪದ', ಡಾ. ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿದ 'ಶಿವಶರಣರ ಕಾಯಕ ಸಿದ್ಧಾಂತ', ಶಿ.ಶಿ. ಬಸವನಾಳರು ಸಂಪಾದಿಸಿದ 'ವೀರಶೈವ ತತ್ವಪ್ರಕಾಶ' ಹಾಗೂ ಅನೇಕ ಬಿಡಿ ಲೇಖನಗಳು ಗಮನಾರ್ಹವೆನಿಸಿವೆ.

**ಸಾಮಾಜಿಕ ನೆಲೆ**

ವಚನಸಾಹಿತ್ಯ ಸಮಾಜೋ-ಧಾರ್ಮಿಕ ಚಳುವಳಿಯ ಉಪಸೃಷ್ಟಿ; ಶಿವಶರಣರು ನಿರ್ಮಿಸ ಬಯಸಿದ ಸರ್ವಸಮಾನತೆಯ ಸುಂದರ ಸಮಾಜದ ಮುಖ್ಯಮಾಧ್ಯಮ. ಹೀಗಾಗಿ ವಚನಗಳಲ್ಲಿ ವ್ಯಕ್ತಿಯ ಸಾಮಾಜಿಕ ಬದುಕಿಗೆ ಸಂಬಂಧಿಸಿದ ಸಂಗತಿಗಳು ದಟ್ಟವಾಗಿ ಹಬ್ಬಿಕೊಂಡಿವೆ. ಅವುಗಳನ್ನು ಶೋಧಿಸುವ, ಶರಣರ ಸಾಮಾಜಿಕ ಚಿಂತನೆಗಳನ್ನು ಇತರ ಜಾಗತಿಕ ಚಿಂತಕರ ವಿಚಾರಗಳ ಜೊತೆಗೆ ಹೋಲಿಸಿ ನೋಡುವ, ಶರಣರ ವಿಚಾರಧಾರೆಯ ಅಪೂರ್ವತೆಯನ್ನು ಎತ್ತಿ ಹೇಳುವ ಕಾರ್ಯ ತುಂಬ ವ್ಯಾಪಕವಾಗಿ ನಡೆದಿದೆ.

ಡಾ. ಸಿ. ವೀರಣ್ಣ ಅವರ 'ಹನ್ನೆರಡನೆಯ ಶತಮಾನದ ಕಾಯಕಜೀವಿಗಳ ಚಳುವಳಿ', ಹರ್ಡೇಕರ ಮಂಜಪ್ಪನವರ 'ವಚನಕಾರರ ಸಮಾಜರಚನೆ', ತಿಪ್ಪೇರುದ್ರಸ್ವಾಮಿ, ಬಸವರಾಜ ಸಬರದ, ಪಿ.ವಿ. ನಾರಾಯಣ ಅವರ 'ವಚನ ಚಳುವಳಿ' ಎಂಬ ಕೃತಿಗಳು, ಡಾ. ಎಂ. ಚಿದಾನಂದಮೂರ್ತಿ ಅವರ 'ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ', ಮ.ನ.ಜವರಯ್ಯ ಅವರ 'ದಲಿತವರ್ಗದ ಶರಣರು:ಒಂದು ಅಧ್ಯಯನ', ಬಿ.ಎಂ. ಹೂಗಾರ ಅವರ 'ಶರಣರ ಆಂದೋಲನ ಹಾಗೂ ಹೊಸ ಸಮಾಜ ಪರಿಕಲ್ಪನೆ', ಬಸವರಾಜ ಕಲ್ಗುಡಿ ಅವರ 'ಮಧ್ಯಕಾಲೀನ ಭಕ್ತಿ ಮತ್ತು ಅನುಭಾವಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ' ದೇ. ಜವರೇಗೌಡ ಅವರ 'ವಚನಗಳಲ್ಲಿ ಸಮಾಜವಾದ', 'ಬಸವೇಶ್ವರ-ಕಾರ್ಲಮಾರ್ಕ್ಸ್',

ತಿಪ್ಪೇರುದ್ರಸ್ವಾಮಿಗಳ 'ಬಸವೇಶ್ವರ-ಗಾಂಧೀಜಿ', ಹಿರೇಮಲ್ಲೂರ ಈಶ್ವರನ್ ಅವರ 'ಬಸವಣ್ಣ ಹಾಗೂ ಲಿಂಗಾಯತ ಧರ್ಮ' ಡಾ. ವೀರಣ್ಣ ರಾಜೂರ ಅವರ 'ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು', 'ವಿಚಾರ ಪತ್ನಿಯರು' ಎಂಬ ಕೃತಿಗಳು ಶರಣರ ಸಾಮಾಜಿಕ ಚಿಂತನೆಗಳನ್ನು ವಚನಗಳ ಹಿನ್ನೆಲೆಯಲ್ಲಿ ವಿವೇಚಿಸುವ ಗಂಭೀರವಾದ ಅಧ್ಯಯನಗಳೆನಿಸಿವೆ. ಈ ಕುರಿತ ಬಿಡಿ ಲೇಖನಗಳೂ ಅಧಿಕ ಸಂಖ್ಯೆಯಲ್ಲಿ ಹುಟ್ಟಿಕೊಂಡಿವೆ.

**ಸಾಹಿತ್ಯಿಕ ನೆಲೆ**

ಸಾಹಿತ್ಯ ಸೃಷ್ಟಿ ಉದ್ದೇಶರಹಿತವಾಗಿ, ಜೀವನಪರಧೋರಣೆ ಪ್ರೇರಿತವಾಗಿ ಹುಟ್ಟಿದ ವಚನಗಳಲ್ಲಿ ಸಾಹಿತ್ಯ ಸೌಂದರ್ಯಕ್ಕಿಂತ ಜೀವನ ಸೌಂದರ್ಯದೃಷ್ಟಿ ಪ್ರಮುಖವಾಗಿ ಕಂಡುಬಂದರೂ ಅವು ಸಂವೇದನಾಶೀಲ ವ್ಯಕ್ತಿಗಳ ಉತ್ಕಟ ಅನುಭವದ ಉನ್ನತ ಅಭಿವ್ಯಕ್ತಿಗಳಾಗಿರುವುದರಿಂದ ಉತ್ತಮ ಕಾವ್ಯದ ಲಕ್ಷಣಗಳನ್ನು ಸಹಜವಾಗಿಯೇ ಅಳವಡಿಸಿಕೊಂಡಿವೆ. ಅಷ್ಟೇ ಅಲ್ಲ, ಕನ್ನಡ ಭಾಷೆಯ ಎಲ್ಲ ಸಾಧ್ಯತೆಗಳನ್ನು ಸೂರೆಗೈದು ಕನ್ನಡ ಸಾಹಿತ್ಯಕ್ಕೆ ಹಿಂದೆಂದೂ ಕಾಣದ ಹೊಸ ಅಭಿವ್ಯಕ್ತಿರೀತಿಯನ್ನು ಆಗುಮಾಡಿಕೊಟ್ಟಿವೆ. ಹೀಗಾಗಿ, ವಚನ ಒಂದು ಸಾಹಿತ್ಯ ಪ್ರಕಾರ ಎಂದು ಮಾನ್ಯತೆ ಪಡೆದು, ವಿಭಿನ್ನ ಸಾಹಿತ್ಯಿಕ ನೆಲೆಗಳಲ್ಲಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟಿದೆ.

ಡಾ.ಎಂ. ಚಿದಾನಂದಮೂರ್ತಿ ಅವರ 'ವಚನಸಾಹಿತ್ಯ' ವಚನಗಳನ್ನು ಸಾಹಿತ್ಯಿಕ ರೀತಿಯಲ್ಲಿ ಅಧ್ಯಯನ ಮಾಡಿದ ಗ್ರಂಥರೂಪದ ಮೊದಲ ರಚನೆ. ವಚನಸಾಹಿತ್ಯದ ಸ್ವರೂಪ, ಲಕ್ಷಣ, ಉಗಮ, ವಿಕಾಸ, ಪ್ರಮುಖ ವಚನಕಾರರ ವಚನಗಳ ವಿವೇಚನೆ ಇಲ್ಲಿ ಸ್ಥೂಲವಾಗಿ ನಡೆದಿದೆ. ಇದಕ್ಕೂ ಮೊದಲು ಹಲವು ಬಿಡಿ ಲೇಖನಗಳು ಈ ಕಾರ್ಯಮಾಡಿವೆ. ಆಮೇಲೆ ಪಿ.ವಿ. ನಾರಾಯಣ ಅವರ 'ವಚನಸಾಹಿತ್ಯ', ವಿ.ಜಿ. ಪೂಜಾರ ಅವರ 'ವಚನಸಾಹಿತ್ಯ ಪರಂಪರೆ' ಎಂಬ ಕೃತಿಗಳು ಬಂದಿವೆ. ಶಾಂತರಸ ಅವರ 'ಬಸವಪೂರ್ವ ವಚನಕಾರರು', ಸಂಕೇಶ್ವರ ಕಾಲೇಜಿನ 'ಬಸವೋತ್ತರಯುಗದ ವಚನಸಾಹಿತ್ಯ' ಡಾ. ವೀರಣ್ಣ ರಾಜೂರ ಅವರ 'ಬಸವೋತ್ತರ ಯುಗದ ವಚನಕಾರರು' ಎಂಬ ಕೃತಿಗಳು ಬಸವಯುಗದ ಹಿಂದು ಮುಂದಿನ ವಚನಸಾಹಿತ್ಯದ ಪರಂಪರೆಯನ್ನು ತಿಳಿಸಿಕೊಡುತ್ತವೆ. ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ', 'ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು', ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳ ಸಾಹಿತ್ಯ ಚರಿತ್ರೆಗಳ ಮತ್ತು ಇನ್ನೂ ಅನೇಕ ಬಿಡಿ ಲೇಖನಗಳಲ್ಲಿ ವಚನಸಾಹಿತ್ಯಕ್ಕೆ ಸಂಬಂಧಿಸಿದ ಚಾರಿತ್ರಿಕ ವಿವೇಚನೆ ನಡೆದಿದೆ.

ವಚನಗಳನ್ನು ಭಾಷೆ, ಛಂದಸ್ಸು, ಕಾವ್ಯಮೀಮಾಂಸೆ, ವೈಚಾರಿಕತೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ ಹಲವಾರು ಕೃತಿಗಳು, ಅನೇಕ ಬಿಡಿ ಲೇಖನಗಳು ಬಂದಿವೆ. ಬಿ.ಬಿ. ರಾಜಪುರೋಹಿತ ಅವರ A Grammar of Vachana Literature ಎಂಬ ಪಿಎಚ್.ಡಿ. ಪ್ರಬಂಧ, 'ವಚನಗಳ ಭಾಷೆ-ವ್ಯಾಕರಣ' ಎಂಬ ಲೇಖನ, ಜಿ.ಎಸ್. ಸಿದ್ಧಲಿಂಗಯ್ಯನವರ

'ವಚನವಾಙ್ಮಯ ಮತ್ತು ಭಾಷೆ' ಡಾ.ವಿ. ಶಿವಾನಂದರ 'ವಚನಸಾಹಿತ್ಯದಲ್ಲಿ ಸಮಾಜೋ ಭಾಷಿಕ ಚಿಂತನೆಗಳು' ಎಂಬ ಗ್ರಂಥಗಳು, ವೀರಣ್ಣ ರಾಜೂರ ಅವರ 'ವಚನಸಾಹಿತ್ಯದಲ್ಲಿ ಪ್ರಯೋಗಶೀಲತೆ:ಭಾಷೆ ಮತ್ತು ತಂತ್ರ' ಎ.ವಿ. ನಾವಡ ಅವರ 'ವಚನಕಾರರ ಭಾಷೆ' ಎಂಬ ಲೇಖನಗಳು, ವಚನಸಾಹಿತ್ಯವನ್ನು ಭಾಷಿಕ ಹಾಗೂ ವ್ಯಾಕರಣದ ದೃಷ್ಟಿಯಿಂದ ವಿಶ್ಲೇಷಣೆ ಮಾಡಿದ ಬರಹಗಳಾಗಿವೆ. ಎಸ್.ವಿ. ಪರಮೇಶ್ವರ ಭಟ್ಟರ ' ಬಸವಣ್ಣನವರ ವಚನಗಳಲ್ಲಿ ರೂಪಾಂಶ', ಚಿದಾನಂದಮೂರ್ತಿ ಅವರ 'ಬಸವಣ್ಣನವರ ವಚನಗಳಲ್ಲಿ ಛಂದೋಲಯ'ಎಂಬ ಲೇಖನಗಳು, ಡಾ. ಗಿರಡ್ಡಿ ಗೋವಿಂದರಾಜ ಅವರ 'ವಚನವಿನ್ಯಾಸ' ಎಂಬ ಕೃತಿ, ವಚನಗಳನ್ನು ರೂಪ-ಶಿಲ್ಪ-ಛಂದಸ್ಸಿನ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ ಗಂಭೀರ ಬರಹಗಳೆನಿಸಿವೆ. ಡಾ. ಕೆ. ಕೃಷ್ಣಮೂರ್ತಿ ಅವರ 'ಬಸವಣ್ಣನವರ ವಚನಗಳ ಮೀಮಾಂಸೆ', ಜಿ.ಎಸ್. ಶಿವರುದ್ರಪ್ಪನವರ 'ವಚನಗಳಲ್ಲಿ ಕಾವ್ಯತತ್ತ್ವ' ಎಂಬ ಲೇಖನಗಳು ಕಾವ್ಯತತ್ತ್ವಗಳನ್ನು ಹುಡುಕುವ ಅಪೂರ್ವ ರಚನೆಗಳಾಗಿವೆ.

ಡಾ. ತಿಪ್ಪೇರುದ್ರಸ್ವಾಮಿಗಳ 'ವಚನಸಾಹಿತ್ಯದ ವೈಚಾರಿಕ ಅಧ್ಯಯನ' ಎಂಬ ಕೃತಿ, ಜಿ.ಎಸ್. ಶಿವರುದ್ರಪ್ಪನವರ 'ವಚನಕಾರರ ವಿಚಾರ ಕ್ರಾಂತಿ', ಕಿ. ರಂ. ನಾಗರಾಜ ಅವರ 'ಬಸವಣ್ಣನವರ ವಚನಗಳಲ್ಲಿ ಭಕ್ತಿ ಭಾವ ವೈಚಾರಿಕ ದೃಷ್ಟಿ' ಎಂಬ ಲೇಖನಗಳು ವಚನಗಳ ವೈಚಾರಿಕ ಅಧ್ಯಯನಕ್ಕೆ ಮಾದರಿ ಎನಿಸಿವೆ.

ಡಾ. ಪ್ರಭುಸ್ವಾಮಿಮಠ ಅವರ 'ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ' ಎಂಬ ಪಿಎಚ್.ಡಿ. ಪ್ರಬಂಧ, ಜಿ.ಎಸ್. ಶಿವರುದ್ರಪ್ಪನವರ 'ಬಸವಣ್ಣನವರ ವಚನಗಳಲ್ಲಿ ಕಾವ್ಯ ಸೌಂದರ್ಯ', ಚೆನ್ನವೀರ ಕಣವಿ ಅವರ 'ಬಸವಣ್ಣನವರ ವಚನಗಳ ಸಾಹಿತ್ಯಿಕ ಮೌಲ್ಯ', 'ಬಸವಣ್ಣನವರ ವಚನಗಳ ಕಾವ್ಯ ಸಂಪನ್ನತೆ', ಚ. ಸುಂದರೇಶ ಅವರ 'ಬಸವಣ್ಣನವರ ಕೆಲವು ಶಬ್ದ ಚಿತ್ರಗಳು', ಸುಜನಾ ಅವರ 'ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕಗಳು' ಎಂಬ ಲೇಖನಗಳು ಬಸವಣ್ಣನವರ ವಚನಗಳ ಸಾಹಿತ್ಯ ವಿವೇಚನೆಗೆ ತೊಡಗಿದ ಗಮನಾರ್ಹ ಬರಹಗಳೆನಿಸಿದರೆ, ಎಸ್.ವಿ. ಪರಮೇಶ್ವರಭಟ್ಟರ 'ಅಕ್ಕನವಚನಗಳಲ್ಲಿ ಕಾವ್ಯಗುಣ' ಶಾಂತರಸರ 'ಅಕ್ಕಮಹಾದೇವಿ ವಚನಗಳಲ್ಲಿ ಕಾವ್ಯ ಸತ್ಯ ಮತ್ತು ಸೌಂದರ್ಯ', ಎಚ್.ಎಂ. ಚೆನ್ನಯ್ಯ ಅವರ 'ಅಕ್ಕಮಹಾದೇವಿಯ ವಚನಗಳಲ್ಲಿ ಪ್ರತಿಮಾ ವಿಧಾನ', ವೀರಣ್ಣ ರಾಜೂರ ಅವರ 'ಮಹಾದೇವಿಯಕ್ಕನ ವಚನಗಳಲ್ಲಿ ಉಪಮೆ' ಎಂಬ ಲೇಖನಗಳು ಅಕ್ಕಮಹಾದೇವಿಯ ವಚನಗಳ ಸಾಹಿತ್ಯಿಕ ಮೌಲ್ಯವನ್ನು ಎತ್ತಿ ಹೇಳುವ ರಚನೆಗಳಾಗಿವೆ.

ಸಿ.ಪಿ.ಕೆ. ಅವರ 'ವಚನವಿಲೋಕನ', ಓ.ಎಲ್. ನಾಗಭೂಷಣಸ್ವಾಮಿ ಅವರ 'ಇಂದಿನ ಹೆಜ್ಜೆ', ಶ್ರೀಮತಿ ಉಷಾ ಅವರ 'ವಚನಗಳಲ್ಲಿ ಪ್ರತಿಮೆಗಳು' ಸಿ.ವಿ. ಕೆರಿಮನಿ ಷಷ್ಟ್ಯಬ್ದಿ ಸಂದರ್ಭದ 'ವಚನ ಸಾಹಿತ್ಯ ದರ್ಶನ' ಎಂಬ ಕೃತಿಗಳು, ತಿಪ್ಪೇರುದ್ರಸ್ವಾಮಿಗಳ 'ವಚನಸಾಹಿತ್ಯದಲ್ಲಿ ಪ್ರತಿಮೆಗಳು ಮತ್ತು ಪ್ರತೀಕಗಳು', ಚೆನ್ನವೀರ ಕಣವಿ ಅವರ

'ವಚನಸಾಹಿತ್ಯದಲ್ಲಿ ಉಪಮೆಗಳು' ಮೊದಲಾದ ಲೇಖನಗಳೂ ವಚನಗಳ ಸಾಹಿತ್ಯಿಕ ಸತ್ವವನ್ನು ಪ್ರಕಟಪಡಿಸುತ್ತವೆ. ಕವಿವಿ. ಬಸವಪೀಠ ಪ್ರಕಟಿಸಿದ 'ವಚನಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯ-ಮುಖಾಮುಖಿ' ಎಂಬ ಕೃತಿಯಲ್ಲಿ ವಚನಸಾಹಿತ್ಯ ಆಧುನಿಕ ಸಾಹಿತ್ಯದ ಮೇಲೆ ಬೀರಿದ ಪ್ರಭಾವವನ್ನು ಸಮರ್ಥವಾಗಿ ಗುರುತಿಸಲಾಗಿದೆ.

**ಸಾಂಸ್ಕೃತಿಕ ನೆಲೆ**

ವಚನಸಾಹಿತ್ಯವನ್ನು ಮೊದಲು ವೀರಶೈವ ತತ್ವಶಾಸ್ತ್ರವೆಂದು, ಸಾಮಾಜಿಕ ಚಳುವಳಿ ಮಾಧ್ಯಮವೆಂದು, ಒಂದು ಸಾಹಿತ್ಯ ಪ್ರಕಾರ ಎಂದು ಭಾವಿಸಿದಂತೆ ನಂತರದಲ್ಲಿ ಅದೊಂದು ಸಮಗ್ರ ಸಾಂಸ್ಕೃತಿಕ ಚಳುವಳಿ ಮಾಧ್ಯಮ ಸಾಹಿತ್ಯ ಎಂದೂ ತಿಳಿದುಕೊಳ್ಳಲಾಯಿತು. ಆ ಕಾರಣವಾಗಿ, ವಚನಗಳಲ್ಲಿ ಸಂಸ್ಕೃತಿಶೋಧಕಾರ್ಯ ಆರಂಭವಾಯಿತು. ಡಾ. ಎಂ. ಚಿದಾನಂದಮೂರ್ತಿ ಮತ್ತು ಡಾ. ಎಂ. ಎಂ. ಕಲಬುರ್ಗಿ ಅವರು ಶಾಸನ, ಕನ್ನಡ ಸಾಹಿತ್ಯದಂತೆ ವಚನಗಳ ಸಾಂಸ್ಕೃತಿಕ ಅಧ್ಯಯನಕ್ಕೂ ತೊಡಗಿದ ಬಹು ಮುಖ್ಯ ಸಂಶೋಧಕರು. ಚಿದಾನಂದಮೂರ್ತಿ ಅವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ಪೂರಕವಾಗಿ ಆರಂಭವಾದ ವಚನಗಳ ಸಾಂಸ್ಕೃತಿಕ ಅಧ್ಯಯನ, ಅವರ 'ಲಿಂಗಾಯತ ಅಧ್ಯಯನಗಳು', 'ವಚನಶೋಧ (೧-೨)' ಎಂಬ ಗ್ರಂಥಗಳಲ್ಲಿ ಅಳವಟ್ಟ ಸಂಪ್ರಬಂಧಗಳಲ್ಲಿ ತುಂಬ ಗಂಭೀರವಾಗಿ ಮುನ್ನಡೆದಿದೆ. ಡಾ. ಎಂ.ಎಂ. ಕಲಬುರ್ಗಿ ಅವರ 'ಮಾರ್ಗಸಂಪುಟ-೧' (ಸಾಹಿತ್ಯಮಾರ್ಗ) ಮತ್ತು ಮಾರ್ಗಸಂಪುಟ-೩ರಲ್ಲಿ ಎಡೆಪಡೆದ ಸು. ೭೫ ಕ್ಕೂ ಹೆಚ್ಚು ಲೇಖನಗಳು ಒಂದಿಲ್ಲೊಂದು ರೀತಿಯಲ್ಲಿ ವಚನಸಾಹಿತ್ಯದ ಗಂಭೀರ ಸಂಸ್ಕೃತಿ-ಶೋಧಕ್ಕೆ ತೊಡಗಿರುವುದನ್ನು ಕಾಣುತ್ತೇವೆ. ಇವರ ಸಂಶೋಧನೆಯ ಮತ್ತೊಂದು ವೈಶಿಷ್ಟ್ಯವೆಂದರೆ ಕೇವಲ ಆಶಯಶೋಧಕ್ಕೆ ತಮ್ಮ ಸಂಶೋಧನೆಯನ್ನು ಸೀಮಿತಗೊಳಿಸಿಕೊಳ್ಳದೆ ಅದಕ್ಕೆ ಆಧಾರವಾದ ಆಕರಶೋಧ ಕಾರ್ಯವನ್ನೂ ಸಮಪ್ರಮಾಣದಲ್ಲಿ ಮಾಡುತ್ತ ಬಂದುದು. ಅವರು ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ ಬಸವಸ್ತೋತ್ರದ ವಚನಗಳು, ಬಸವಣ್ಣನವರ ಟೀಕಿನ ವಚನಗಳು (ಸಂ. ೧-೨), ಬಸವಣ್ಣನವರ ವಚನಗಳು, ಸಂಕೀರ್ಣ ವಚನಸಂಪುಟ-೧, ಚೆನ್ನಬಸವಣ್ಣನವರ ವಚನಗಳ ಮಹಾಸಂಪುಟ, ವಚನ ಸಾಹಿತ್ಯದ ಪ್ರಾಚೀನ ಆಕರಕೋಶ, ವಚನಸಾಹಿತ್ಯ ಪ್ರಕಟನೆಯ ಇತಿಹಾಸ ಮೊದಲಾದ ಗ್ರಂಥಗಳು ಇದಕ್ಕೆ ನಿದರ್ಶನವೆನಿಸಿವೆ.

ಡಾ. ಎಂ. ಚಿದಾನಂದಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಡಾ. ಪಿ.ವಿ. ನಾರಾಯಣ ಅವರ 'ವಚನಸಾಹಿತ್ಯ:ಸಾಂಸ್ಕೃತಿಕ ಅಧ್ಯಯನ'ವು ಸಮಗ್ರ ವಚನ ಸಾಹಿತ್ಯದಲ್ಲಿ ಅಡಗಿದ ಸಂಸ್ಕೃತಿಯನ್ನು ತುಂಬ ಪರಿಶ್ರಮವಹಿಸಿ ಆಮೂಲಾಗ್ರವಾಗಿ ಶೋಧಿಸಿಕೊಟ್ಟ ಅಪೂರ್ವ ಸಂಶೋಧನ ಪ್ರಬಂಧ. ಇದರಲ್ಲಿ ವಚನಸಾಹಿತ್ಯದ ಸ್ವರೂಪ ಮತ್ತು ವೈಶಿಷ್ಟ್ಯ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಯುದ್ಧಪದ್ಧತಿ,

ವಿದ್ಯಾಭ್ಯಾಸ, ಕಲೆ, ಮನರಂಜನೆ ಇತ್ಯಾದಿ, ವೈಜ್ಞಾನಿಕ ತಿಳುವಳಿಕೆ, ವೀರಶೈವಧರ್ಮ, ಶೈವ ಮತ್ತು ಇತರ ಧರ್ಮಗಳು, ಜನಪ್ರಿಯ ದೈವಗಳು ಎಂಬ ವಿಭಾಗಗಳಡಿಯಲ್ಲಿ ವಚನಗಳು ಪ್ರಕಟಿಸುವ ಸಮಕಾಲೀನ ಬದುಕಿನ ಸಂಸ್ಕೃತಿ ಚಿತ್ರವನ್ನು ತುಂಬ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಇವಲ್ಲದೆ ಡಾ. ಎಸ್. ವಿದ್ಯಾಶಂಕರ ಅವರ 'ವಚನಾನುಶೀಲನ' ಮತ್ತು 'ನೆಲದ ಮರೆಯ ನಿಧಾನ' ಪಿ.ವಿ. ನಾರಾಯಣ ಅವರ 'ವಚನನಿರ್ವಚನ', 'ವಚನ ಪರಿಸರ', ವೀರಣ್ಣ ರಾಜೂರ ಅವರ 'ವಚನ ಅಧ್ಯಯನ', ಷಣ್ಮುಖಯ್ಯ ಅಕ್ಕೂರಮಠ ಅವರ 'ವಚನಸಾಹಿತ್ಯ ವಿವೇಚನೆ', ಆರ್. ರಾಚಪ್ಪ ಅವರ 'ವಚನಸಾಹಿತ್ಯ', ಚೆನ್ನಕ್ಕ ಪಾವಟೆ ಅವರ 'ವಚನ ಸನ್ನಿಧಿ', 'ಸುಯಿಧಾನ', ಬಿ. ಆರ್. ಹಿರೇಮಠ ಅವರ 'ವೀರಶೈವ ಸಂಶೋಧನೆ', ಬೆಂಗಳೂರು ಸರ್ಪಭೂಷಣ ಮಠದ 'ವಚನಚಿಂತನ', 'ವಚನಕಾರರು:ವ್ಯಕ್ತಿ-ಅಭಿವ್ಯಕ್ತಿ', 'ವಚನಕಾರರ ಪ್ರಮುಖ ಪರಿಕಲ್ಪನೆಗಳು', ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತಿನ 'ಶರಣತತ್ತ್ವ ಚಿಂತನ' ಹಾಗೂ 'ಶರಣ ಸಂಪದ' ಸಂಪುಟಗಳು, ಸುತ್ತೂರಮಠದ ಪ್ರಭುದೇವರ ವಿಚಾರಸಂಕಿರಣದ ಸಂಪುಟ, ಕ.ವಿ.ವಿ. ಪ್ರಸಾರಾಂಗದ 'ವಚನಸಾಹಿತ್ಯ ವಿವೇಚನೆ', ಬಸವಪೀಠದ 'ಬಸವಮಾರ್ಗ' ಸಂಪುಟಗಳು ಮೇಲೆ ವಿವೇಚಿಸಿದ ನಾಲ್ಕೂ ನೆಲೆಗಳಿಗೆ ಸಂಬಂಧಿಸಿದ ಲೇಖನಗಳನ್ನು ಅಳವಡಿಸಿಕೊಂಡು ವಚನಗಳ ಆಶಯಶೋಧದ ವ್ಯಾಪ್ತಿಯನ್ನು ಹೆಚ್ಚಿಸಿವೆ.

ಸಿ.ಕೆ. ನಾವಲಗಿ ಅವರ 'ವಚನಸಾಹಿತ್ಯದಲ್ಲಿ ಜಾನಪದ ಅಂಶಗಳು' ಎಂಬ ಪಿಎಚ್.ಡಿ. ಪ್ರಬಂಧ, ಪಿ.ವಿ. ನಾರಾಯಣ ಅವರ 'ವಚನಸಾಹಿತ್ಯದಲ್ಲಿ ಗಾದೆಗಳು', ಡಿ.ಕೆ. ರಾಜೇಂದ್ರ ಅವರ 'ಬಸವಣ್ಣನವರ ವಚನಗಳಲ್ಲಿ ಗಾದೆ ಮಾತುಗಳು', ಎನ್. ಮರುಳಸಿದ್ಧೇಶ್ವರ ಅವರ 'ಬಸವಣ್ಣನವರ ವಚನಗಳಲ್ಲಿ ಜಾನಪದ' ಎಂಬ ಲೇಖನಗಳು ವಚನಸಾಹಿತ್ಯವನ್ನು ಜಾನಪದದ ನೆಲೆಯಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಿವೆ. ಬಿ. ವಿರೂಪಾಕ್ಷಪ್ಪ ಅವರ 'ವಿಜ್ಞಾನದಾಸೋಹ' ಎಂಬುದು ವಚನಸಾಹಿತ್ಯದ ವೈಜ್ಞಾನಿಕ ಅಧ್ಯಯನಕ್ಕೆ ತೊಡಗಿದ ಅಪರೂಪದ ಗ್ರಂಥ.

ಧಾರ್ಮಿಕ ಸಂಸ್ಥೆಗಳ ಮಠಾಧಿಪತಿಗಳಿಗೆ, ವೀರಶೈವ ಗಣ್ಯವ್ಯಕ್ತಿಗಳಿಗೆ, ಸಾಹಿತಿಗಳಿಗೆ ಅರ್ಪಿಸಿದ ಅಭಿನಂದನ-ಸ್ಮರಣ-ಸಂಭಾವನ ಗ್ರಂಥಗಳಲ್ಲಿ, ಬಸವಪಥ, ಶರಣಸಾಹಿತ್ಯ, ಶಿವಾನುಭವ, ಪರಂಜ್ಯೋತಿ, ಸತ್ಯಶುದ್ಧ ಕಾಯಕ, ತರಳಬಾಳು, ಶರಣಸಂತಾನ, ಸಿದ್ಧಲಿಂಗಜ್ಯೋತಿ, ಪ್ರಸಾದ, ಮಹಾಮನೆ, ಕರ್ನಾಟಕ ಭಾರತಿ, ಪ್ರಬುದ್ಧ ಕರ್ನಾಟಕ, ಸಾಧನೆ, ಲೋಚನ- ಮೊದಲಾದ ಪತ್ರಿಕೆಗಳಲ್ಲಿ ಮೇಲಿನ ವಿಭಿನ್ನ ನೆಲೆಗಳಿಗೆ ಸಂಬಂಧಿಸಿದ ಅನೇಕ ಸಂಶೋಧನ ಪ್ರಬಂಧಗಳು ಪ್ರಕಟವಾಗಿವೆ. ಆದರೆ ಎಲ್ಲವೂ ಗಂಭೀರ ಅಧ್ಯಯನಗಳಾಗಿವೆ ಎಂದು ಹೇಳಲು ಬರುವಂತಿಲ್ಲ. ಕೆಲವು ಪರಿಚಯಾತ್ಮಕವಾಗಿದ್ದರೆ, ಮತ್ತೆ ಕೆಲವು ವಿಶ್ಲೇಷಣಾತ್ಮಕ, ವಿವೇಚನಾತ್ಮಕವೆನಿಸಿವೆ.

ವಚನಸಾಹಿತ್ಯ ಸಂಶೋಧನೆ ಕುರಿತು ಈಗ ಆಗಿರುವ ಕಾರ್ಯ ಅಧಿಕವೆನಿಸಿದರೂ ಇನ್ನೂ

ಆಗಬೇಕಾದುದೂ ಸಾಕಷ್ಟಿದೆ. ಅದನ್ನು ಹೀಗೆ ಗುರುತಿಸಬಹುದು.

೧. ಜ್ಞಾತ ವಚನಗಳ, ಅಂಕಿತಗಳ ಅಜ್ಞಾತ ಕರ್ತೃಗಳನ್ನು ಹುಡುಕುವುದು
೨. ಜ್ಞಾತಸ್ಥಲಕಟ್ಟಿನ ಕೃತಿಗಳ ಅಜ್ಞಾತ ಕರ್ತೃಗಳನ್ನು ಶೋಧಿಸುವುದು
೩. ಇನ್ನೂ ಅಜ್ಞಾತವಾಗಿರುವ ಸ್ಥಲಕಟ್ಟಿನ ಕೃತಿ ಹಾಗೂ ವಚನಗಳನ್ನು ಪತ್ತೆ ಹಚ್ಚುವುದು
೪. ಕೂಟವಚನಗಳನ್ನು ಕಳೆದು ನಿಜವಚನಗಳನ್ನು ನಿರ್ಧರಿಸುವುದು.
೫. ಅಶುದ್ಧ ಪಾಠಗಳನ್ನು ನೀಗಿ ಶುದ್ಧ ಪಾಠಗಳನ್ನು ನಿರ್ಣಯಿಸುವುದು.
೬. ಈಗ ದೊರೆತ ಆಕರಗಳನ್ನು ಹೊಸ ಜ್ಞಾತಿಗಳ ಹಿನ್ನೆಲೆಯಲ್ಲಿ ಪುನರ್‌ಪರಿಶೀಲಿಸುವುದು.
೭. ವಿವಿಧ ನೆಲೆಗಳಲ್ಲಿ ವಚನಗಳ ಆಶಯಶೋಧವನ್ನು ಇನ್ನಷ್ಟು ಗಂಭೀರವಾಗಿ ಹಾಗೂ ವ್ಯಾಪಕವಾಗಿ ನಡೆಸುವುದು.
೮. ಎಲ್ಲಕ್ಕೂ ಮಿಗಿಲಾಗಿ ವಚನಗಳನ್ನು ಅವು ಹುಟ್ಟಿದ ಸಂದರ್ಭ-ಉದ್ದೇಶ-ಉತ್ಕಟತೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು, ವ್ಯಾಖ್ಯಾನಿಸುವುದು, ಅವು ಅಡಗಿಸಿಕೊಂಡ ಮೌಲ್ಯಗಳನ್ನು ಶೋಧಿಸುವುದು. ವಚನಸಾಹಿತ್ಯದ ನಿಜವಾದ ವಿಶೇಷತೆಯನ್ನು ಗುರುತಿಸುವುದು ತುಂಬ ಅಗತ್ಯವಾಗಿ ನಡೆಯಬೇಕಾದ ಕಾರ್ಯವಾಗಿದೆ.

ಇದು ಕೇವಲ ಸ್ಥೂಲವಾದ ಸಮೀಕ್ಷೆ ಮಾತ್ರ. ವಿಸ್ತಾರವಾಗಿ ಬೆಳೆದು ನಿಂತ ವಚನಸಾಹಿತ್ಯ ಅಧ್ಯಯನ ಪರಂಪರೆ ಒಂದು ಪಿಎಚ್.ಡಿ. ಪ್ರಬಂಧಕ್ಕೆ ವಸ್ತುವಾಗಬಲ್ಲ ವ್ಯಾಪ್ತಿಯನ್ನು ಪಡೆದಿದೆ.

★★★

ವಚನಸಾಹಿತ್ಯ ಕುರಿತು ಈವರೆಗೆ ಹೊರಬಂದ ಪಿಎಚ್.ಡಿ/ಎಂ.ಫಿಲ್ ಪ್ರಬಂಧಗಳು ಕೆಳಗಿನಂತಿವೆ:

ಇವುಗಳಲ್ಲಿ ಕೆಲವು ಒಟ್ಟಾಗಿ ವಚನಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೆ ಮತ್ತೆ ಕೆಲವು ಒಬ್ಬೊಬ್ಬ ವಚನಕಾರ/ವಚನಕಾರ್ತಿಯ ವಚನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಿದ್ಧಪಡಿಸಿದುವಾಗಿವೆ. ಕೆಲವು ಪ್ರಕಟವಾಗಿವೆ; ಇನ್ನೂ ಕೆಲವು ಅಪ್ರಕಟಿತವಾಗಿವೆ.

೧. ೧೧-೧೨ನೆಯ ಶತಮಾನದ ಕನ್ನಡ ಸಾಹಿತ್ಯ, ಎಚ್.ಟಿ. ಸಾಸನೂರ, ಮುಂಬೈ ವಿ.ವಿ. - ೧೯೫೨(ಅಪ್ರ)
೨. ಶರಣರ ಅನುಭಾವಸಾಹಿತ್ಯ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕ.ವಿ.ವಿ. ಧಾರವಾಡ, ೧೯೬೨
೩. ಅಕ್ಕಮಹಾದೇವಿ ಜೀವನ ಮತ್ತು ಕೃತಿಗಳು, ವಿ. ಕಮಲಮ್ಮ ಉಸ್ಮಾನಿಯಾ ವಿ.ವಿ. ಹೈದರಾಬಾದ, ೧೯೬೪
೪. A Grammar of Vachana Literature, ಬಿ.ಬಿ. ರಾಜಪುರೋಹಿತ, ಕ.ವಿ.ವಿ. ಧಾರವಾಡ ೧೯೬೫(ಅಪ್ರ)
೫. ಸಿದ್ಧರಾಮ ಶಿವಯೋಗಿ, ಡಾ. ಎಂ.ಬಿ. ಕೊಟ್ರಶೆಟ್ಟಿ, ಕ.ವಿ.ವಿ. ಧಾರವಾಡ, ೧೯೬೮

೬. ಅಂಡಾಳ-ಮಹಾದೇವಿ-ಮೀರಾ, ಎಸ್. ವಿನೋದಾಬಾಯಿ, ದೆಹಲಿ ವಿ.ವಿ., ೧೯೬೯
೭. ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ, ಡಾ. ಎಂ.ಎಸ್. ಲಠ್ಠೆ, ಕ.ವಿ.ವಿ. ಧಾರವಾಡ ೧೯೭೦
೮. ಬಸವಣ್ಣನವರ ವಚನಗಳಲ್ಲಿ ಲೋಕಾನುಭವ ಮತ್ತು ಶಿವಾನುಭವ, ಡಾ. ಎಸ್.ಬಿ. ಹಿರೇಮಠ, ಕ.ವಿ.ವಿ. ಧಾರವಾಡ, ೧೯೭೭(ಅಪ್ರ)
೯. ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭು, ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ, ಕ.ವಿ.ವಿ. ಧಾರವಾಡ, ೧೯೭೭
೧೦. ವಚನಕಾರರ ದೃಷ್ಟಿಯಲ್ಲಿ ಸ್ತ್ರೀ, ಡಾ. ಶೈಲಜಾ ಉಡಚಣ, ಕ.ವಿ.ವಿ. ಧಾರವಾಡ, ೧೯೭೮
೧೧. ಕನ್ನಡ ಸಾಹಿತ್ಯದಲ್ಲಿ ಬಸವೇಶ್ವರರ ವ್ಯಕ್ತಿತ್ವ, ಡಾ. ಹ.ನಂ. ವಿಜಯಕುಮಾರ, ಬೆಂಗಳೂರು ವಿ.ವಿ. ೧೯೮೧
೧೨. ಬಸವೇಶ್ವರ ಮತ್ತು ಪುರಂದರದಾಸ, ಡಾ. ಬಸವರಾಜ ಸಬರದ, ಗುಲಬರ್ಗಾ ವಿ.ವಿ. ೧೯೮೨
೧೩. ಬೆಡಗಿನ ವಚನಗಳು, ಡಾ. ಜಯಶ್ರೀ ದಂಡೆ, ಗುಲಬರ್ಗಾ ವಿ.ವಿ. ೧೯೮೬(ಅಪ್ರ)
೧೪. ಬಸವಪೂರ್ವದ ವೀರಶೈವ ಸಾಹಿತ್ಯ, ಡಾ. ಬಿ.ವಿ. ಯಕ್ಕುಂಡಿಮಠ, ಕ.ವಿ.ವಿ. ಧಾರವಾಡ, ೧೯೮೭(ಅಪ್ರ)
೧೫. ಅಕ್ಕಮಹಾದೇವಿ-ಜೀವನ-ವ್ಯಕ್ತಿತ್ವ ಮತ್ತು ಪ್ರಭಾವಮುದ್ರೆ, ಡಾ. ಎಸ್.ಎಸ್. ಪಾಟೀಲ, ಕ.ವಿ.ವಿ. ಧಾರವಾಡ-೧೯೮೭
೧೬. ಶರಣರ ಆಂದೋಲನ ಹಾಗೂ ಹೊಸಸಮಾಜದ ಪರಿಕಲ್ಪನೆ, ಡಾ. ಎಂ.ಬಿ. ಹೂಗಾರ, ಕ.ವಿ.ವಿ. ಧಾರವಾಡ, ೧೯೮೮
೧೭. ೨೦ನೇ ಶತಮಾನದ ವಚನಸಾಹಿತ್ಯ, ಡಾ. ಪ್ರೀತಿ ಶುಭಚಂದ್ರ, ಮೈ.ವಿ.ವಿ. ೧೯೮೮
೧೮. ಮುದನೂರ ದಾಸಿಮಯ್ಯ:ಒಂದು ಅಧ್ಯಯನ, ಡಾ. ಎಚ್.ಎಸ್. ಗಂಗಮ್ಮ, ಕ.ವಿ.ವಿ. ಧಾರವಾಡ, ೧೯೮೮(ಅಪ್ರ)
೧೯. ದಲಿತ ವರ್ಗದ ಶರಣರು: ಒಂದು ಅಧ್ಯಯನ, ಡಾ. ಮ.ನ. ಜವರಯ್ಯ, ಮೈಸೂರು ವಿ.ವಿ. ೧೯೯೦
೨೦. ಜಚನಿ ವಚನಸಾಹಿತ್ಯ-ಒಂದು ಅಧ್ಯಯನ, ಡಾ. ಎಸ್.ಎಂ. ಹಂಡಗಿ, ಕ.ವಿ.ವಿ. ಧಾರವಾಡ, ೧೯೯೦
೨೧. ಶರಣರ ಕಾಯಕತತ್ವ, ಬಾಬು ಪೂಜಾರ, ಗುಲಬರ್ಗಾ ವಿ.ವಿ., ೧೯೯೦(ಅಪ್ರ)
೨೨. ವಚನಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಪಿ.ವಿ. ನಾರಾಯಣ, ಬೆಂಗಳೂರು ವಿ.ವಿ. ೧೯೯೧
೨೩. ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ, ಸಿ.ವಿ. ಪ್ರಭುಸ್ವಾಮಿಮಠ, ಕ.ವಿ.ವಿ. ಧಾರವಾಡ, ೧೯೯೨

೨೪. ವಚನಸಾಹಿತ್ಯದಲ್ಲಿ ಜಾನಪದ ಅಂಶಗಳು, ಡಾ. ಸಿ.ಕೆ. ನಾವಲಗಿ, ಕ.ವಿ.ವಿ. ಧಾರವಾಡ, ೧೯೯೨ (ಅಪ್ರ)

೨೫. ನಾಲ್ಕು ಶೂನ್ಯಸಂಪಾದನೆಗಳು: ಒಂದು ಅಧ್ಯಯನ, ಡಾ. (ಶ್ರೀಮತಿ) ಎಸ್.ಎಂ. ಹೆಗಡೆ, ಶಿವಾಜಿ ವಿ.ವಿ. ಕೊಲ್ಲಾಪೂರ -೧೯೯೨

೨೬. ಶೂನ್ಯಸಂಪಾದನೆಗಳು: ಒಂದು ತೌಲನಿಕ ಅಧ್ಯಯನ, ಡಾ. ಜಿ.ಟಿ. ವಿಸಾಜಿ, ಗುಲಬರ್ಗಾ ವಿ.ವಿ., ೧೯೯೩(ಅಪ್ರ)

೨೭. ಶಿವಶರಣೆಯರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ, ಡಾ. ಶ್ರೀಮತಿ ಎಸ್.ಎಸ್. ಮಟ್ಟಿ, ಕ.ವಿ.ವಿ. ಧಾರವಾಡ, ೧೯೯೩(ಅಪ್ರ)

೨೮. ಮೋಳಿಗೆ ಮಾರಯ್ಯ ಮತ್ತು ಮಹಾದೇವಮ್ಮ: ಒಂದು ಅಧ್ಯಯನ, ಸುಶೀಲಾ ನರ್ಕೆ, ಗುಲಬರ್ಗಾ ವಿ.ವಿ., ೧೯೯೪

೨೯. ಆದಯ್ಯ:ಒಂದು ಅಧ್ಯಯನ, ಎಸ್.ಎಸ್. ಯಾಳವಾರ, ಗುಲಬರ್ಗಾ ವಿ.ವಿ., ೧೯೯೫

೩೦. ಸೂಫಿಪಥ ಹಾಗೂ ಶರಣಪಥ: ಒಂದು ತೌಲನಿಕ ಅಧ್ಯಯನ, ಅಬ್ದುಲ್ ಹಮೀದ ಬೆಂಗಳೂರು ವಿ.ವಿ. ೧೯೯೮

೩೧. ಚೆನ್ನಬಸವಣ್ಣನವರ ವಚನಗಳು: ಒಂದು ಅಧ್ಯಯನ, ಡಾ. ಕೆ.ಎಸ್. ಮಠ, ಕ.ವಿ.ವಿ. ಧಾರವಾಡ ೧೯೭೬(ಅಪ್ರ)

೩೨. A Study of Shivayoga As Preached And Practiced By Veerashiva Mystics ಡಾ. (ಶ್ರೀಮತಿ) ಎನ್.ವಿ. ಕೊಪ್ಪಳ, ಕ.ವಿ.ವಿ. ಧಾರವಾಡ, ೧೯೬೮(ಅಪ್ರ)

೩೩. ಕರ್ನಾಟಕದ ಕವಯಿತ್ರಿಯರು: ಡಾ. ಸರೋಜಿನಿ ಮಹಿಷಿ, ಕ.ವಿ.ವಿ. ಧಾರವಾಡ, ೧೯೬೨

೩೪. ಅಲ್ಲಮನ ವಚನಚಂದ್ರಿಕೆ, ಶಿವದಾಸ ಗೀತಾಂಜಲಿ, ಡಾ. ಎಲ್. ಬಸವರಾಜು, ಮೈ. ವಿ.ವಿ., ೧೯೬೫(ಡಿ.ಲಿಟ್)

೩೫. ಷಣ್ಮುಖ ಶಿವಯೋಗಿಗಳು ಒಂದು ಅಧ್ಯಯನ, ರಾಜಶೇಖರ ದಾನರೆಡ್ಡಿ, ಕ.ವಿ.ವಿ. ಧಾರವಾಡ, ೧೯೯೪(ಅಪ್ರ)

೩೬. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ: ಡಾ. ಬಸವರಾಜ ಕಲ್ಗುಡಿ, ಬೆಂಗಳೂರು ವಿ.ವಿ. ೧೯೮೩

೩೭. ವೀರಶೈವ ಕವಿಗಳ ಮೇಲೆ ವಚನಕಾರರ ಪ್ರಭಾವ: ಪಿ.ಎಂ. ಕುಂದಗೋಳ, ಬೆಂ.ವಿವಿ. ೧೯೯೪

೩೮. ಬಸವಣ್ಣನವರ ವಚನಗಳ ಪ್ರತಿಮಾಲೋಕ ಉಷಾಕಿರಣ, ಬೆಂವಿವಿ ೧೯೯೯.

೩೯. ವಚನ ಚಳುವಳಿ ಹಾಗೂ ಸ್ತ್ರೀ ಜಾಗೃತಿ: ಎಸ್.ಕೆ. ಸುಮಂಗಲ, ಬೆಂ.ವಿವಿ ೧೯೯೬

೪೦. ೧೨ನೆಯ ಮತ್ತು ೨೦ನೆಯ ಶತಮಾನದ ವಚನಸಾಹಿತ್ಯ- ಒಂದು ತೌಲನಿಕ ಅಧ್ಯಯನ, ಸಿಸ್ಟರ್ ವಾಯ್‌ಲೆಟ್, ಬೆಂ.ವಿ.ವಿ. ೧೯೯೬

೪೧. ಬಸವಣ್ಣ ಕಾರ್ಲಮಾರ್ಕ್ಸ್ ಅಧ್ಯಯನ : ಗಂಗಮ್ಮ ರುಮಾ ಗುಲಬರ್ಗಾ ವಿವಿ. ೧೯೯೭

೪೨. ಬುದ್ಧ ಬಸವಣ್ಣರ ಒಂದು ತೌಲನಿಕ ಅಧ್ಯಯನ :ಸೂರ್ಯಕಾಂತ ಸೂಜ್ಯಾತ ಗುಲಬರ್ಗಾ ವಿ.ವಿ. ೧೯೯೮

೪೩. ಅಕ್ಕಮಹಾದೇವಿ ಜೀವನ ಮತ್ತು ಕೃತಿಗಳು: ವಿ. ಕಮಲಮ್ಮ ಉಸ್ಮಾನಿಯಾ ವಿವಿ ಹೈದರಾಬಾದ ೧೯೭೯.

೪೪. ಶರಣರಲ್ಲಿ ದಾಂಪತ್ಯದರ್ಶನ :ಜಗದೇವಿ ಬಿ. ತಿಬಶೆಟ್ಟಿ ಗುಲಬರ್ಗಾ ವಿವಿ ೨೦೦೩

೪೫. ಹನ್ನೆರಡನೆ ಶತಮಾನದ ವಚನಗಳಲ್ಲಿ ಸಾಮಾಜಿಕ ಚಿಂತನೆ :ಸಿ. ಸೋಮಶೇಖರ ಕನ್ನಡ ವಿವಿ ಹಂಪಿ ೨೦೦೩ (ಡಿಲಿಟ್)

೪೬. ಉಪನಿಷತ್ತು ಮತ್ತು ವಚನಗಳ ತೌಲನಿಕ ಅಧ್ಯಯನ, ಶಿವಮೂರ್ತಿಸ್ವಾಮಿ ಹಿರೇಮಠ, ಕ.ವಿ.ವಿ. ಧಾರವಾಡ ೨೦೦೩ (ಅಪ್ರ)

೪೭. ಮಡಿವಾಳ ಮಾಚಿದೇವ: ಒಂದು ಅಧ್ಯಯನ, ಶಕುಂತಲಾ ಪಾಟೀಲ, ಕ.ವಿ.ವಿ. ಧಾರವಾಡ ೨೦೦೪ (ಅಪ್ರ)

೪೮. ಬಸವೋತ್ತರಯುಗದ ವಚನಸಾಹಿತ್ಯ, ಡಾ. ಕಟ್ಟಿಗಿಹಳ್ಳಿಮಠ, ಕ.ವಿ.ವಿ. ಧಾರವಾಡ ೨೦೦೪ (ಅಪ್ರ)

೪೯. ಸಂಪಾದನ ಸಮಯ: ಒಂದು ಅಧ್ಯಯನ, ವಿಜಯಶ್ರೀ ಹಿರೇಮಠ, ಕ.ವಿ.ವಿ. ಧಾರವಾಡ, ೧೯೯೪ (ಎಂ.ಫಿಲ್)

೫೦. ಚೀಲಾಳ ಸಮಯ: ಒಂದು ಅಧ್ಯಯನ, ಎನ್.ವಿ. ಮನಗುಂಡಿ, ಕ.ವಿ.ವಿ. ಧಾರವಾಡ-೧೯೯೪(ಎಂ.ಫಿಲ್)

೫೧. ಹಡಪದಪ್ಪಣ್ಣ:ಜೀವನಸಾಹಿತ್ಯ, ಎನ್.ಎಂ. ಯಂಭತ್ನಾಳ್, ಕ.ವಿ.ವಿ. ಧಾರವಾಡ, ೧೯೯೪(ಎಂ.ಫಿಲ್)

೫೨. ಶಿವಶರಣೆ ನೀಲಾಂಬಿಕೆ: ಒಂದು ಅಧ್ಯಯನ, ಕು. ಬಿ.ಎಸ್. ಗಂಗನಹಳ್ಳಿ, ಕ.ವಿ.ವಿ. ಧಾರವಾಡ, (ಎಂ.ಫಿಲ್)

೫೩. ಡಾ. ಆರ್.ಸಿ. ಹಿರೇಮಠ ಅವರ ವಚನ ಸಂಪಾದನೆ, ಕ.ವಿ.ವಿ. ಧಾರವಾಡ, ೧೯೯೫ (ಎಂ.ಫಿಲ್)

೫೪. ನುಲಿಯ ಚಂದಯ್ಯ : ಒಂದು ಅಧ್ಯಯನ, ಕು. ಕುಲಕರ್ಣಿ, ಕ.ವಿ.ವಿ. ಧಾರವಾಡ, ೧೯೯೬ (ಎಂ.ಫಿಲ್)

೫೫. ಅರಿವಿನ ಮಾರಿ ತಂದೆ : ಒಂದು ಅಧ್ಯಯನ, ಕೆ.ಎಚ್. ಹಾದಿಮನಿ, ಕ.ವಿ.ವಿ. ಧಾರವಾಡ, ೨೦೦೪ (ಎಂ.ಫಿಲ್)*

●

* ಮಹಾಮಾರ್ಗ:ಡಾ. ಎಂ.ಎಂ. ಕಲಬುರ್ಗಿ ಅವರ ಅಭಿನಂದನ ಗ್ರಂಥ-೧೯೯೮

# ೨. ವಚನ ಸಂಪಾದನ ಸಾಹಿತ್ಯ

**ಪೀಠಿಕೆ:**

ಜಾಗತಿಕ ಸಾಹಿತ್ಯ ಚರಿತ್ರೆಯಲ್ಲಿ ಸೃಜನಸಾಹಿತ್ಯದಂತೆ-ಸೃಜನೇತರವೆನಿಸಿದ ಸಂಕಲನ ಸಾಹಿತ್ಯಕ್ಕೂ ಒಂದು ವಿಶಿಷ್ಟಸ್ಥಾನ ಮೀಸಲಾಗಿದೆ. ವೇದ-ಆಗಮ-ಉಪನಿಷತ್ತುಗಳ ಸಂಕಲನಗಳು, ಪ್ಲೇಟೋನ ಸಂಭಾಷಣೆಗಳ ಸಂಪುಟಗಳು, ಬುದ್ಧನ ಉಪದೇಶಗಳ ತ್ರಿಪಿಟಿಕೆ-ಸಂಗ್ರಹಗಳು ಮೊದಲಾದವು ಸಂಕಲನ ಸಾಹಿತ್ಯಕ್ಕೆ ವಿಶ್ವವಿಖ್ಯಾತಿಯನ್ನು, ವಿಶೇಷ ಮಾನ್ಯತೆಯನ್ನು ತಂದುಕೊಟ್ಟ ಅಪೂರ್ವ ಕೃತಿಗಳೆನಿಸಿವೆ. ಇವುಗಳಷ್ಟೇ ಅನನ್ಯವಾದ ಮಹತ್ವವನ್ನು ಪಡೆದ ಸಂಕಲನ ಸಾಹಿತ್ಯ ಹನ್ನೆರಡನೆಯ ಶತಮಾನದ ವೀರಶೈವ ಶರಣರ ಅನುಭಾವದ ಆಣಿಮುತ್ತುಗಳೆನಿಸಿದ ವಚನಗಳಿಂದ ಸಂಯೋಜಿಸಿದ 'ಸಂಪಾದನ ಸಾಹಿತ್ಯ'

ವಚನ ಸಾಹಿತ್ಯದ ಅಧ್ಯಯನದಲ್ಲಿ ವಚನಸೃಷ್ಟಿಯಂತೆ ವಚನ ಸಂಯೋಜನೆಯೂ ಅಷ್ಟೇ ಮಹತ್ವವನ್ನು ಪಡೆದ ಅಂಶವಾಗಿದೆ. ಆದರೆ ಒಂದು ತುಂಬ ಉತ್ಪ್ರೇಕ್ಷೆಗೆ ಒಳಗಾದರೆ, ಮತ್ತೊಂದು ತೀರ ಉಪೇಕ್ಷೆಗೆ ಗುರಿಯಾದುದು ವಿಷಾದದ ಸಂಗತಿ. ಒಂದು ವೇಳೆ-ವಚನರಚನೆಯಷ್ಟೆ ಮೌಲಿಕವೆನಿಸಿದ -ಸಂಪಾದನ ಸಾಹಿತ್ಯ ಹುಟ್ಟದೇಹೋಗಿದ್ದರೆ ಇಂದು ವಚನಸಾಹಿತ್ಯ ಇಷ್ಟು ಪ್ರಮಾಣದಲ್ಲಿ ಉಳಿದು-ಬೆಳೆದು ಬರಲು, ಇಷ್ಟೊಂದು ವ್ಯಾಪಕವಾದ ವಿಚಾರ ವಿಮರ್ಶೆ-ಮೌಲ್ಯಮಾಪನಕ್ಕೆ ಒಳಗಾಗಿ ತನ್ನ ಶ್ರೇಷ್ಠತೆಯನ್ನು ಮೆರೆಯಲು ಖಂಡಿತಾ ಸಾಧ್ಯವಾಗುತ್ತಿರಲಿಲ್ಲ. ಕಾರಣ ವಚನಕಾರರಷ್ಟೇ ವಚನಸಂಯೋಜಕರೂ ಸ್ಮರಣೀಯರೆನಿಸಿ ದ್ದಾರೆ.

'ಸಂಪಾದನಾ ಸಾಹಿತ್ಯ', 'ಸ್ಥಲಕಟ್ಟು ಸಾಹಿತ್ಯ' 'ಸಂಕಲನ ಸಾಹಿತ್ಯ' ಎಂದು ವಿಭಿನ್ನ ಹೆಸರುಗಳಿಂದ ಗುರುತಿಸಿಕೊಳ್ಳುವ ಈ ಸಾಹಿತ್ಯದ ಸ್ವರೂಪ-ಪರಂಪರೆ ವೈವಿಧ್ಯ ವೈಶಿಷ್ಟ್ಯಗಳನ್ನು ಕುರಿತು ಇದುವರೆಗೆ ನಡೆದ ವಿವೇಚನೆ ಕಡಿಮೆ ಪ್ರಮಾಣದ್ದೆನಿಸಿದರೂ ಕೆಲವರಾದರೂ[1] ಅತ್ತ ಗಮನ ಹರಿಸಿ, ಅದರ ನೆಲೆ ಬೆಲೆಗಳನ್ನು ಗುರುತಿಸಲು ಸ್ಥೂಲವಾಗಿಯಾದರು ಪ್ರಯತ್ನಿಸಿರುವುದು ಸಮಾಧಾನದ ಸಂಗತಿ. ಆದರೆ ಇಷ್ಟೇ ಸಾಲದು. ಇನ್ನೂ ವ್ಯಾಪಕವಾದ ಮತ್ತು ವ್ಯವಸ್ಥಿತವಾದ ಅಧ್ಯಯನ, ಮೌಲ್ಯಮಾಪನ ನಡೆದು ಅದರ ಮಹತ್ವ ಮೌಲಿಕತೆ-

ಮೇಲ್ಮೆಗಳನ್ನು ಗುರುತಿಸಿ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇದುವರೆಗೆ ದೊರಕದೆ ಹೋಗಿರುವ ಅದರ ನಿಶ್ಚಿತ ಸ್ಥಾನವನ್ನು ನಿರ್ಧರಿಸಿಕೊಡುವ ಕಾರ್ಯ ನಡೆಯಬೇಕಾಗಿದೆ. ಆ ದಿಸೆಯಲ್ಲಿ ಒಂದು ಸ್ಥೂಲವಾದ ಪ್ರಯತ್ನ ಈ ಪ್ರಬಂಧ.

ವಚನ ಒಂದು ಅಪೂರ್ವ ಸೃಷ್ಟಿ. ಅದು ಹೇಗೆ ಹುಟ್ಟಿತು ಅದಕ್ಕೆ ಪ್ರೇರಣೆಗಳಾವುವು ಎಂಬುದು ಇನ್ನೂ ಒಡೆಯಲಾಗದ ಒಗಟು, ಬಿಡಿಸಲಾಗದ ಬೆಡಗು. ಎದ್ದುಕಾಣುವ ಯಾವುದೇ ಪೂರ್ವಸಾಹಿತ್ಯದ ಪ್ರಭಾವ ಪ್ರೇರಣೆಗಳಿಲ್ಲದೆ ಕಾಲಮಾನದ ಅಗತ್ಯಕ್ಕನುಗುಣವಾಗಿ ಮುನ್ನಿನ ಸಾಹಿತ್ಯ ಪ್ರಕಾರಗಳಲ್ಲಿಯೇ ವಿಶಿಷ್ಟವೂ ವಿನೂತನವೂ ಆದ ರೂಪವಾಗಿ ಅದು ಒಡಮೂಡಿದೆ. ಸಕಲ ಜೀವಾತ್ಮರಿಗೆ ಲೇಸ ಬಯಸುವ ಘನವಾದ ಉದ್ದೇಶವನ್ನಿಟ್ಟುಕೊಂಡು, ಜನಸಾಮಾನ್ಯರ ನಾಡಿಯ ಮಿಡಿತಕ್ಕೆ ಸಹಜವಾಗಿ ಆತ್ಮೀಯವಾಗಿ ಸ್ಪಂದಿಸುತ್ತ ಬಂದ ಅದು ಸಾರ್ವಕಾಲಿಕ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಇಂದಿಗೂ ತನ್ನ ಪ್ರಸ್ತುತತೆಯನ್ನು ಮೆರೆಯುತ್ತ ಜೀವಂತವಾಗಿ ಉಳಿದುಬಂದಿದೆ. ಅದನ್ನು ಉಳಿಸಿ ಬೆಳೆಸಿದ ಕೀರ್ತಿ ತದನಂತರ ಬಂದ ವೀರಶೈವ ಕವಿಗಳಿಗೆ, ಅನಂತರದ ಸಂಪಾದನಾಕಾರರಿಗೆ ಸಲ್ಲುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ಮಹಾಪೂರದಂತೆ ಬಂದ ವಚನವಾಹಿನಿ ಕಲ್ಯಾಣದ ಕ್ರಾಂತಿಯಿಂದಾಗಿ ತಟ್ಟನೆ ಇಳಿದುಹೋಯಿತು. 'ಊರು ಸುಟ್ಟು ಸೂರೆಯಾಗುವಾಗ ಆರಿಗಾರೂ ಇಲ್ಲ' ಎನ್ನುವಂತೆ ಈ ಜ್ಞಾನಸಂಪತ್ತನ್ನು, ಅನುಭಾವದ ಅಮೂಲ್ಯ ರತ್ನರಾಶಿಯನ್ನು ರಕ್ಷಿಸುವರಿಲ್ಲದೆ ಅದು ಅನಾಥವಾಯಿತು. ಶರಣರೆಲ್ಲ ತಮತಮಗೆ ಸಾಧ್ಯವಾದಷ್ಟನ್ನು ಕಟ್ಟಿಕೊಂಡು ದಿಕ್ಕುಪಾಲಾದರು. ಒಂದೆಡೆ ಸಂಗ್ರಹವಾದ ವಚನ ಭಂಡಾರ ಒಡೆದು ಹತ್ತೂ ದಿಕ್ಕಿಗೆ ಹಂಚಿಹೋಯಿತು.

ಶಿವಶರಣರ ತರುವಾಯ ಬಂದ ವೀರಶೈವ ಕವಿಗಳು ವಚನರಚನೆಗೆ ತೊಡಗಲಿಲ್ಲ. ಪ್ರತಿಯಾಗಿ ಉನ್ನತ ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬಾಳನ್ನು ನಡೆಸಿಹೋದ ಶರಣರ ಉಜ್ವಲ ಬದುಕನ್ನು, ಅವರು ಬೀರಿದ ದಿವ್ಯ ಸಂದೇಶವನ್ನು, ಮೆರೆದ ಆದರ್ಶ ಜೀವನ ಮೌಲ್ಯಗಳನ್ನು ಹೊಸದೊಂದು ಕಾವ್ಯಮಾರ್ಗದ ಮೂಲಕ ಪ್ರಸಾರಗೊಳಿಸಿದರು. ಅವರ ವಚನಗಳ ಭಾವ ಭಾಷೆ ದೃಷ್ಟಿ ಧೋರಣೆಗಳನ್ನು ಕಾವ್ಯಗಳಲ್ಲಿ ಅಳವಡಿಸಿಕೊಂಡು ಜನಬದುಕಬೇಕೆಂಬ ಅವರ ಘನವಾದ ಉದ್ದೇಶವನ್ನು ಆದರ್ಶವಾಗಿಟ್ಟುಕೊಂಡು ಮುನ್ನಡೆದರು.

ಹರಿಹರ ರಗಳೆರೂಪದಲ್ಲಿ ಶರಣರ ಆದರ್ಶಜೀವನ ಚಿತ್ರಗಳನ್ನು ಬಿಡಿಸಿದರೆ, ರಾಘವಾಂಕ ಷಟ್ಪದಿಯ ಮೂಲಕ ಆ ಕಾರ್ಯ ಮಾಡಿದ. ಮುಂದೆ ಬಂದ ವೀರಶೈವ ಕವಿಗಳೆಲ್ಲ ಇವರು ನಡೆದ ಮಾರ್ಗದಲ್ಲಿಯೇ ಸಾಗಿದರು.

ಶರಣರು ಸೃಷ್ಟಿಸಿದ ವಚನ ಸಾಹಿತ್ಯ ಒಂದು ದೃಷ್ಟಿಯಿಂದ ಕಾವ್ಯಗಳಲ್ಲಿ ಗುಪ್ತವಾಗಿ ಸಾಗಿಬಂದರೆ, ಇನ್ನೊಂದು ದೃಷ್ಟಿಯಿಂದ ಮಠಮಂದಿರಗಳಲ್ಲಿ ಪಠಣ, ಸ್ತುತಿ, ಪೂಜೆಗಳ

ಮೂಲಕ ಬದುಕಿಬಂದಿತು. ಇದಕ್ಕೆ ಗುರುರಾಜನ ಸಂಸ್ಕೃತ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ, ಪದ್ಮಣಾಂಕನ ಪದ್ಮರಾಜಪುರಾಣ, ಲಕ್ಕಣದಂಡೇಶನ ಶಿವತತ್ವಚಿಂತಾಮಣಿ ಮೊದಲಾದ ಕಾವ್ಯಗಳು ಆಧಾರ ಒದಗಿಸುತ್ತವೆ.[೨] ಇದಲ್ಲದೆ ವಚನಗಳನ್ನು ತಮತಮಗೆ ಬೇಕಾದ ರೀತಿಯಲ್ಲಿ ಸಂಗ್ರಹಿಸುವ, ನಕಲು-ಪ್ರತಿನಕಲು ಮಾಡಿಕೊಳ್ಳುವ ಚಟುವಟಿಕೆಗಳೂ ಸಣ್ಣ ಪ್ರಮಾಣದಲ್ಲಿ ನಡೆದಿದ್ದವು ಎಂದು ತಿಳಿದುಬರುತ್ತದೆ. ಆದರೆ ಕಾವ್ಯ-ಪುರಾಣಗಳ ಆಕರ್ಷಣೆಯ ಎದುರು ಅವು ಎದ್ದುಕಾಣದೆ ವಚನಸಾಹಿತ್ಯ ಅವಜ್ಞೆಗೆ ಗುರಿಯಾಯಿತು. ಅಜ್ಞಾತವಾಸ ಅನುಭವಿಸಬೇಕಾಯಿತು. ಹೀಗಿದ್ದೂ ಆ ಸಾಹಿತ್ಯದ ಬಗ್ಗೆ ಜನತೆಯಲ್ಲಿ ಅಭಿರುಚಿ ಆದರಗಳು ಮಾತ್ರ ಹಚ್ಚಹಸಿರಾಗಿಯೇ ಉಳಿದುಕೊಂಡಿದ್ದವು.

೧೫ನೆಯ ಶತಮಾನ ವೀರಶೈವ ಸಾಹಿತ್ಯದ ಇತಿಹಾಸದಲ್ಲಿ ೧೨ನೆಯ ಶತಮಾನದಷ್ಟೇ ಮಹತ್ವದ ಕಾಲ. ವಿಜಯನಗರ ಸಾಮ್ರಾಜ್ಯದ ಸೂತ್ರವನ್ನು ಪ್ರೌಢದೇವರಾಯ ವಹಿಸಿಕೊಂಡೊಡನೆ, ವೀರಶೈವ ಸಾಹಿತ್ಯಕ್ಕೆ ಹೊಸ ಚೈತನ್ಯ ಮೂಡಿತು. ಸ್ವತಂತ್ರ ಕಾವ್ಯರಚನೆಯ ಜೊತೆಗೆ ಚದುರಿ ಹೋಗಿದ್ದ ಶರಣರ ವಚನ ಸಾಹಿತ್ಯವನ್ನು ಒಂದೆಡೆ ಕಲೆಹಾಕುವ, ವಿವಿಧ ಸ್ಥಲಕಟ್ಟಿಗನುಗುಣವಾಗಿ ಜೋಡಿಸುವ, ಟೀಕೆ-ಟಿಪ್ಪಣಿ-ವ್ಯಾಖ್ಯಾನ ಬರೆಯುವ ಕಾರ್ಯವೂ ಭರದಿಂದ ನಡೆಯಿತು. ಈ ಕಾರ್ಯದ ಫಲವೇ 'ವಚನ ಸಂಪಾದನ ಸಾಹಿತ್ಯ'.

ವಚನ ಸಂಪಾದನ ಕಾರ್ಯ ಎಂದು ಆರಂಭವಾಯಿತು? ಯಾರಿಂದ? ಅದಕ್ಕೆ ಪ್ರೇರಣೆ ಯಾವುದು? ಪ್ರೋತ್ಸಾಹಿಸಿದವರು ಯಾರು? ಅವರ ಸ್ವರೂಪವೇನು? ಬೆಳೆದು ಬಂದ ಬಗೆ ಹೇಗೆ? ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಈ ಎಲ್ಲ ಪ್ರಶ್ನೆಗಳಿಗೆ ಆಧಾರಗಳ ಕೊರತೆಯಿಂದಾಗಿ ಉತ್ತರ ಅಷ್ಟು ಸುಲಭವಲ್ಲ. ಆದರೆ ಆ ದಿಸೆಯಲ್ಲಿ ಪ್ರಯತ್ನಿಸುವುದರ ಮೂಲಕ ಅದರ ಹೆಜ್ಜೆ ಗುರುತುಗಳನ್ನು ಕಂಡುಕೊಳ್ಳುವದು ಸಾಧ್ಯ.

'ಸೃಜನ ಕ್ರಿಯೆ ಮತ್ತು ವಿವೇಚನ ಕ್ರಿಯೆಗಳು ಒಂದನ್ನೊಂದು ಹಿಂಬಾಲಿಸುತ್ತವೆ' ಎಂಬ ತತ್ವದ ಹಿನ್ನೆಲೆಯಲ್ಲಿ ವಚನ ಸೃಷ್ಟಿಯ ಜೊತೆಗೆ ಅವುಗಳ ಸಂಗ್ರಹಣ, ಸಂಕಲನ, ಸಂಪಾದನಗಳಂಥ ವಿವೇಚನ ಕಾರ್ಯಗಳೂ ನಡೆದಿದ್ದುವೆಂದು ಹೇಳಬೇಕಾಗುತ್ತದೆ.

೧

ವಚನಗಳು ಆಯಾ ಸಂದರ್ಭದ ಸಂಗತಿಗಳಿಗೆ ಪ್ರತಿಕ್ರಿಯೆ, ಪ್ರತಿಸ್ಪಂದನೆಯಾಗಿ ಮೂಡಿ ಬಂದ ಮುಕ್ತಕಗಳು. ಅಂದರೆ ವಚನಗಳು ಶರಣರು ಒಂದೆಡೆ ಕುಳಿತು ಚಿಂತನೆ ಮಾಡಿ ಬರೆದು ತಿದ್ದಿ-ತೀಡಿ ಶುದ್ಧರೂಪ ಕೊಟ್ಟ ರಚನೆಗಳಲ್ಲ. ಅವು ಅವರ ಅಂತರಂಗದ ಆಶು ಸ್ಫುರಣೆಗಳು. ಒಂದು ಹೊತ್ತಿನ ಭಾವಕ್ಕೆ ಕೊಟ್ಟ ಭಾಷಿಕ ರೂಪಗಳು. ಅನುಭವ ಹರಳುಗಟ್ಟಿ ಅಭಿವ್ಯಕ್ತವಾದ ಅನುಭಾವಗೀತಗಳು. ಅನುಭವ ಮಂಟಪದಲ್ಲಿ ನಡೆದ ಮೌಲಿಕ ಚರ್ಚೆಯಿಂದ ಮನದಲ್ಲಿ ಮಥನಗೊಂಡು ಮೂಡಿ ಬಂದ ಆತ್ಮಸಾಕ್ಷಿ ನುಡಿಗಳು ಎಂದು ಹೇಳಲಾಗುತ್ತದೆ. ಹಾಗಿದ್ದರೆ ಆಯಾ ಸಂದರ್ಭದಲ್ಲಿ ನುಡಿದ ಮೌಲಿಕ ರೂಪದ ಈ

ವಚನಗಳನ್ನು ಲಿಪಿಬದ್ಧಗೊಳಿಸಿದವರು ಯಾರು? ಹೇಳಿದ ವಚನಕಾರರೆ? ಅಥವಾ ಅದಕ್ಕಾಗಿಯೇ ನಿಯೋಜಿತರಾಗಿದ್ದ ಬೇರೊಬ್ಬರೆ? ಇದಕ್ಕೆ ನಿಶ್ಚಿತ ಆಧಾರಗಳಿಲ್ಲ. ಬಹುಶಃ ಚರ್ಚೆಯ ಕಾಲಕ್ಕೆ ವ್ಯಕ್ತವಾದ ಈ ಸಂಭಾಷಣೆಗಳನ್ನು, ಪ್ರಶ್ನೆ-ಉತ್ತರ-ಪ್ರತ್ಯುತ್ತರ ರೂಪದ ಈ ವಚನಗಳನ್ನು[೬] ಬರೆದುಕೊಳ್ಳುವುದಕ್ಕಾಗಿಯೇ ಕೆಲವರನ್ನು ನೇಮಿಸಲಾಗಿತ್ತೆಂದು ತೋರುತ್ತದೆ. ಕೆಲವು ಸಂದರ್ಭಗಳಲ್ಲಿ ಸ್ವತಃ ವಚನಕಾರರೇ ತಮ್ಮ ವಚನಗಳನ್ನು ಬರೆದಿಟ್ಟಿರುವ ಸಂಭವವೂ ಇದೆ.[೭] ಅದೇನಿದ್ದರೂ ಮೌಖಿಕ ರೀತಿಯಲ್ಲಿ ವ್ಯಕ್ತವಾಗುತ್ತಿದ್ದ ಈ ವಚನಗಳನ್ನು ಆಗಲೇ ಬರಹಕ್ಕಿಳಿಸುವ ವ್ಯವಸ್ಥೆಯೂ ಆಗಿತ್ತೆಂಬುದು ಸರಿ. ಹೀಗೆ ಬರಹಕ್ಕಿಳಿದ ವಚನಗಳನ್ನು ಸಂಗ್ರಹಿಸಿಡಲು ಒಂದು ವಚನ ಭಂಡಾರವಿತ್ತು. ಅದನ್ನು ನೋಡಿಕೊಳ್ಳಲು 'ಶಾಂತರಸ' ಎಂಬ ಭಂಡಾರಿ ಇದ್ದ. ಅದರಿಂದ ಆತನಿಗೆ 'ವಚನ ಭಂಡಾರಿ ಶಾಂತರಸ' ಎಂಬ ಅನ್ವರ್ಥಕನಾಮ ಬಂದಿತ್ತು-ಎಂದು ತಿಳಿಯುತ್ತದೆ. ಆದರೆ ಸಂಗ್ರಹಿಸಿದ ಆ ವಚನ ಸಂಗ್ರಹಗಳ ಸ್ವರೂಪವೇನಿತ್ತು? ಒಬ್ಬೊಬ್ಬ ವಚನಕಾರನ ಹೆಸರಿನಡಿಯಲ್ಲಿ ಅವನ ವಚನಗಳೂ ಪ್ರತ್ಯೇಕ ಕಟ್ಟುಗಳಲ್ಲಿ ಸಂಗ್ರಹವಾಗಿದ್ದವೋ ಅಥವಾ ಒಂದೇ ಕಟ್ಟಿನಲ್ಲಿ ಅನೇಕ ವಚನಕಾರರ ವಚನಗಳು ಮಿಶ್ರಣಗೊಂಡಿದ್ದವೊ. ಅವು ಯಾವುದಾದರೊಂದು ವಿಷಯಕ್ಕನುಗುಣವಾಗಿ ಜೋಡಣೆಗೊಂಡಿದ್ದವೊ? ಈ ಪ್ರಶ್ನೆಗಳಿಗೆ ಈಚೆಗೆ ಉಪಲಬ್ಧವಾಗಿ ಪ್ರಕಟವಾದ ಚೆನ್ನಬಸವಣ್ಣನವರ 'ವಚನೈಕೋತ್ತರ ಶತಸ್ಥಲ'[೮] ಷಡಕ್ಷರದೇವನ ವೃಷಭೇಂದ್ರ ವಿಜಯದಲ್ಲಿ ಬರುವ 'ಜಂಗಮ ಪ್ರಾಣ ಪವಾಡ' ಪ್ರಸಂಗದಲ್ಲಿನ 'ಬಸವ ಭಂಡಾರದ ಕವಳಿಗೆಗಳ ತರಿಸಿ' ಎಂಬ ಮಾತು,[೬] ಸಿದ್ಧರಾಮಚಾರಿತ್ರ್ಯದಲ್ಲಿ ಬರುವ "ವಚನಾಧ್ಯಾಯ ಸ್ತೋತ್ರಪಠಣೆ' ಎಂಬ ಹೇಳಿಕೆಗಳು[೭] ಉತ್ತರ ನೀಡುತ್ತವೆ. ಚೆನ್ನಬಸವಣ್ಣನವರ 'ವಚನೈಕೋತ್ತರ ಶತಸ್ಥಲ' ವಚನವನ್ನು ವಿಭಿನ್ನ ಸ್ಥಲಕಟ್ಟಿಗನುಗುಣವಾಗಿ ಜೋಡಿಸಲಾಗುತ್ತಿತ್ತು ಎಂಬುದನ್ನು ತಿಳಿಸಿದರೆ, ವೃಷಭೇಂದ್ರ ವಿಜಯದ ಹೇಳಿಕೆ ಒಬ್ಬೊಬ್ಬ ವಚನಕಾರರ ವಚನಗಳನ್ನು ವಿಭಿನ್ನ ಸ್ಥಳಕಟ್ಟಿಗನುಗುಣವಾಗಿ ಜೋಡಿಸಲಾಗುತ್ತಿತ್ತು ಎಂಬುದನ್ನು ಸೂಚಿಸುತ್ತದೆ. ಸಿದ್ಧರಾಮಚಾರಿತ್ರ್ಯದಲ್ಲಿ ಬರುವ ಮಾತು ವಚನಗಳನ್ನು ಅಧ್ಯಾಯಗಳಾಗಿ ವಿಭಜಿಸಿ ಜೋಡಿಸಲಾಗುತ್ತಿತ್ತು ಎಂದು ಹೇಳುತ್ತದೆ. ಈ ಎಲ್ಲ ನಿದರ್ಶನಗಳಿಂದ ೧೨ನೆಯ ಶತಮಾನದಲ್ಲಿಯೇ ಬೇರೆ ಬೇರೆ ರೀತಿಯ ವಚನಸಂಪಾದನಕಾರ್ಯ ಆರಂಭವಾಗಿತ್ತೆಂದು ಸ್ಪಷ್ಟವಾಗುತ್ತದೆ. ಈಗ ದೊರೆತ ಆಧಾರಗಳ ಮೇಲಿಂದ ಹೇಳುವುದಾದರೆ ಚೆನ್ನಬಸವಣ್ಣನೇ ವಚನ ಸಂಪಾದನ ಕಾರ್ಯದ ಪ್ರಥಮಶಿಲ್ಪಿ; ವಚನೈಕೋತ್ತರ ಶತಸ್ಥಲವೇ ಪ್ರಥಮ ಸಂಕಲನಗ್ರಂಥ. ಇನ್ನೂ ವಿವಿಧ ರೀತಿಯಲ್ಲಿ ಸಂಕಲನಗೊಂಡಿರಬಹುದಾದ ಅಂದಿನ ಹಸ್ತಪ್ರತಿಗಳು ರಾಜಕೀಯ ವಿಪ್ಲವ ಕಾರಣವಾಗಿ ಕಣ್ಮರೆಯಾಗಿ ಇಂದು ಲಭ್ಯವಿಲ್ಲದೇ ಇರುವುದರಿಂದ ಅವುಗಳ ಸ್ವರೂಪ ವೈವಿಧ್ಯವನ್ನು ಸಂಕಲನಕಾರರ ಪ್ರತಿಭಾಶ್ರೀಮಂತಿಕೆಯನ್ನು ಗುರುತಿಸಲು ಸಾಧ್ಯವಾಗಿಲ್ಲ. ಹೀಗೆ ಅಸ್ಪಷ್ಟವಾಗಿದ್ದರೂ ಮುಂದೆ ವ್ಯಾಪಕವಾಗಿ ಹೆಚ್ಚು ವ್ಯವಸ್ಥಿತವಾಗಿ ನಡೆದ ವಚನ ಸಂಪಾದನ ಕಾರ್ಯಕ್ಕೆ ಸ್ಪಷ್ಟವಾದ ದಿಕ್ಸೂಚಿಯನ್ನು ಒದಗಿಸುವ ೧೨ನೆಯ ಶತಮಾನ ಸಂಪಾದನ ಸಾಹಿತ್ಯದ ಪ್ರಥಮ ಘಟ್ಟವೆಂಬ ಖ್ಯಾತಿಗೆ ಪಾತ್ರವಾಗಿದೆ.

ಹದಿಮೂರನೆಯ ಶತಮಾನಕ್ಕೆ ಬಂದರೆ, ಪಾಲ್ಕುರಿಕೆ ಸೋಮನಾಥ ಪ್ರಭುದೇವರ ವಚನಗಳನ್ನು (೩೨) ಆಯ್ದು ಅವುಗಳಿಗೆ ಆಗಮ ಸಾಕ್ಷಿಗಳನ್ನು ಬೆರೆಸಿ 'ಜ್ಯೋತಿರ್ಮಯ ಶಾಂಭವೀ ಜ್ಞಾನದೀಕ್ಷಾಬೋಧೆ'[೮] ಎಂಬ ತಾತ್ತ್ವಿಕ-ಸಂಕಲನವನ್ನೂ ಪುರಾತನರ ಕಾಲಜ್ಞಾನ ವಚನಗಳನ್ನು ಕಲೆಹಾಕಿದ 'ಭೂಲೋಕಚಿಂತಾರತ್ನ'[೯] ಎಂಬ ಕೃತಿಯನ್ನೂ ಸಿದ್ಧಪಡಿಸಿರುವನು. ಇದು ಸಂಪಾದನಾಸಾಹಿತ್ಯದ ಮುಂದುವರಿಕೆಗೆ ನಿದರ್ಶನವೆನಿಸಿದೆ.

೨

ಸಂಪಾದನಾ ಸಾಹಿತ್ಯದ ಎರಡನೆಯ ಘಟ್ಟ ವಿಜಯನಗರದ ವೀರಶೈವ ಅರಸು ಪ್ರೌಢದೇವರಾಯನ (೧೪೧೯-೧೪೪೬)ಕಾಲಕ್ಕೆ ಆರಂಭವಾಗುತ್ತದೆ. ಈ ಅರಸನ ಪ್ರೋತ್ಸಾಹ ಪ್ರೇರಣೆಯಿಂದ ಕಲ್ಯಾಣ ಕ್ರಾಂತಿಯಿಂದಾಗಿ ದಿಕ್ಕು ದಿಕ್ಕಿಗೂ ಚೆಲ್ಲವರಿದು ಹೋಗಿದ್ದ ವಚನಗಳನ್ನು ಒಂದೆಡೆ ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ, ಟೀಕೆ-ಟಿಪ್ಪಣಿ-ವ್ಯಾಖ್ಯಾನ ಬರೆಯುವ ಕಾರ್ಯ ಭರದಿಂದ ನಡೆಯಿತು.[೧೦] ಹೀಗಾಗಿ ವಚನ ಸಾಹಿತ್ಯ ಪುನರುಜ್ಜೀವನ ಪಡೆಯಿತು. ಈತನ ಆಶ್ರಯದಲ್ಲಿದ್ದ ನೂರೊಂದು ವಿರಕ್ತರು, ಕವಿಗಳು, ಮಂತ್ರಿ-ದಂಡನಾಯಕರು ವೀರಶೈವ ಸಾಹಿತ್ಯ ವಿವಿಧ ಮುಖವಾಗಿ ಬೆಳೆಯಲು ಕಾರಣರಾದರು. ೧೨ನೆಯ ಶತಮಾನದಲ್ಲಿ ಆರಂಭವಾದ ವಚನ ಸಂಕಲನ ಕಾರ್ಯ ಈ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ವ್ಯವಸ್ಥಿತವಾಗಿ ನಡೆಯಿತು. ಅದಕ್ಕೊಂದು ನಿಶ್ಚಿತರೂಪ ಕೊಟ್ಟವರು ಮಹಾಲಿಂಗದೇವ (೧೪೨೫), ಜಕ್ಕಣಾರ್ಯ (೧೪೩೦), ಗುಬ್ಬಿಯ ಮಲ್ಲಣ್ಣ (೧೪೩೦), ಕರಸ್ಥಲದ ಮಲ್ಲಿಕಾರ್ಜುನ ಒಡೆಯ (೧೪೩೦), ಶಿವಗಣ ಪ್ರಸಾದಿ ಮಹಾದೇವಯ್ಯ (೧೪೩೦) ಮೊದಲಾದ ಅನುಭಾವಿಗಳು. ಇವರು ತಮ್ಮ ಪ್ರತಿಭೆ-ಪಾಂಡಿತ್ಯ-ಅಧ್ಯಾತ್ಮಬಲದಿಂದ ವಚನಗಳನ್ನು ವಿವಿಧ ದೃಷ್ಟಿಕೋನದ ಹಿನ್ನೆಲೆಯಲ್ಲಿ ಸಂಕಲಿಸುವ, ಸಂಪಾದಿಸುವ, ಟೀಕೆ ಬರೆಯುವ ಕಾರ್ಯವನ್ನೂ ಶ್ರದ್ಧೆ-ನಿಷ್ಠೆ-ಅವಧಾನಗಳಿಂದ ಮಾಡಿದರು. ಮಹಾಲಿಂಗದೇವ ಪ್ರಭುದೇವರ ವಚನಗಳನ್ನು ಷಟ್‌ಸ್ಥಲಕ್ಕನುಸರಿಸಿ ಸಂಕಲಿಸಿ ಅವುಗಳಿಗೆ ತಾನೇ ಟೀಕೆಯನ್ನೂ ರಚಿಸಿದ (೬೯೪ ವಚನಗಳುಳ್ಳ ಇದಕ್ಕೆ ಪ್ರಭುದೇವರ ಷಟ್‌ಸ್ಥಲಜ್ಞಾನಚಾರಿತ್ರ ವಚನದ ಟೀಕೆ, ಷಟ್‌ಸ್ಥಲ ವಿವೇಕ ಎಂಬ ಹೆಸರುಗಳಿವೆ). ವಿವಿಧ ಶರಣರ (೩೮ ಜನ)ವಚನ (೯೩೧), ಸ್ವರವಚನ(೧೦೧)ಗಳನ್ನು ಸೇರಿಸಿ, ಸೂತ್ರವಿಟ್ಟು 'ಏಕೋತ್ತರ ಶತಸ್ಥಲ' ಎಂಬ ೧೦೧ ಸ್ಥಲದ ನೂತನ ಕೃತಿಯನ್ನು ಸಂಕಲಿಸಿದ.[೧೧] ಹಾಗೆಯೇ ವಿವಿಧ ಶರಣರ (೩ ಜನ) ವಚನ (೧೦೮), ಸ್ವರವಚನ (೬), ಸೂತ್ರಗಳನ್ನು ಸೇರಿಸಿ ಮಿಶ್ರ ಷಟ್‌ಸ್ಥಲ ಅಥವಾ ಸೂಕ್ಷ್ಮ ಮಿಶ್ರ ಷಟ್‌ಸ್ಥಲ[೧೨] ಎಂಬ ೩೬ ಸ್ಥಲ ಪರಿಕ್ರಮದ ಕೃತಿಯೊಂದನ್ನು ಸಂಕಲಿಸಿದ. ಹೀಗೆ ಷಟ್‌ಸ್ಥಲ, ಮಿಶ್ರಷಟ್‌ಸ್ಥಲ (೩೬ಸ್ಥಲ) ಮತ್ತು ಏಕೋತ್ತರ ಶತಸ್ಥಲವೆಂಬ ಮೂರು ವಿಧದ ಸಂಕಲನಗಳನ್ನು ಸಿದ್ಧಪಡಿಸಿ ಸ್ಥಲಕಟ್ಟು, ಸಾಹಿತ್ಯಕ್ಕೆ ಒಂದು ಭದ್ರ ಬುನಾದಿಯನ್ನು ಹಾಕಿದ ಕೀರ್ತಿ ಮಹಾಲಿಂಗದೇವನಿಗೆ ಸಲ್ಲುತ್ತದೆ.

ಮಹಾಲಿಂಗದೇವನ ಶಿಷ್ಯ ಜಕ್ಕಣಾರ್ಯ ಗುರುವಿನ ಮಾರ್ಗದಲ್ಲಿಯೇ ನಡೆದು ಸ್ವರವಚನಗಳನ್ನು[೧೩] ಮಾತ್ರ ಆಯ್ದುಕೊಂಡು ಸೂತ್ರವಿಟ್ಟು ನೂರೊಂದು ಸ್ಥಲಕ್ರಮದಲ್ಲಿ ಜೋಡಿಸಿ, ಅವುಗಳಿಗೆ ಟೀಕೆ ಬರೆದು 'ಏಕೋತ್ತರ ಶತಸ್ಥಲ' ಎಂಬ ಕೃತಿಯನ್ನು ಸಿದ್ಧಪಡಿಸಿದ.

ಗುಬ್ಬಿಯ ಮಲ್ಲಣ್ಣ ವೇದ-ಶಾಸ್ತ್ರ-ಪುರಾಣ-ಆಗಮ-ಇತಿಹಾಸಾದಿ ನಾನಾ ಧರ್ಮಶಾಸ್ತ್ರಗಳಿಂದ ಗ್ರಂಥಗಳನ್ನಾಯ್ದು ಪುರಾತನರ ವಚನಗಳಿಗೆ ಪ್ರಮಾಣವಿಟ್ಟು ನೂರೊಂದು ಸ್ಥಲವನ್ನು ಯೋಜಿಸಿ 'ಗಣಭಾಷಿತ ರತ್ನಮಾಲೆ'[೧೪] ಎಂಬ ವಿನೂತನ ಕೃತಿಯನ್ನು ಸಂಯೋಜಿಸಿದ. ಆಚರಣೆ ಮತ್ತು ನೀತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಕಲಿಸಿದ ಇದು ಮಹಾಲಿಂಗದೇವನಿಂದ ಭಿನ್ನವಾದ ೧೦೧ ಸ್ಥಲವನ್ನು ಅಳವಡಿಸಿಕೊಂಡಿರುವದು ವಿಶೇಷವೆನಿಸಿದೆ.

ಕಲ್ಲುಮಠದ ಪ್ರಭುದೇವ 'ಲಿಂಗಲೀಲಾ ವಿಲಾಸ ಚಾರಿತ್ರ' ಎಂಬ ಸಂಕಲನವನ್ನು ಸಿದ್ಧಪಡಿಸಿ, ಅದರಲ್ಲಿ ೧೬ ಸ್ಥಲಗಳನ್ನು ಯೋಜಿಸಿ ಷಟ್‌ಸ್ಥಲದಲ್ಲಿಯೇ ಒಂದು ಹೊಸಕ್ರಮವನ್ನು ಕಲ್ಪಿಸಿದ್ದಾನೆ. ಇದು ಈತನ ಶಾಸ್ತ್ರಪ್ರಜ್ಞೆಗೆ, ಪ್ರಯೋಗಶೀಲ ಪ್ರತಿಭೆಗೆ ನಿದರ್ಶನವೆನಿಸಿದೆ. ಇಲ್ಲಿನ ವಚನಗಳಿಗೆ ತಾನೇ ಟೀಕೆಯನ್ನು ಬರೆದು, ಈತ ಏಕಕಾಲಕ್ಕೆ ಸಂಕಲನಕಾರ ಹಾಗೂ ಟೀಕಾಕಾರ ಎಂಬ ಖ್ಯಾತಿಗೆ ಭಾಜನನಾಗಿದ್ದಾನೆ.

ನೂರೊಂದು ವಿರಕ್ತರಲ್ಲಿ ಪ್ರಮುಖನೆನಿಸಿದ ಕರಸ್ಥಲದ ವೀರಣ್ಣೊಡೆಯ ಸ್ವರವಚನ, ಕಂದ, ಶತಕಗಳನ್ನು ರಚಿಸುವುದರ ಜೊತೆಗೆ ಪ್ರಭುದೇವರ ವಚನಗಳಿಂದ 'ಲಿಂಗಸೂತ್ರದ ವಚನ' ಎಂಬ ಕೃತಿಯನ್ನೂ ಸಂಕಲಿಸಿದ್ದಾನೆ.

ಕರಸ್ಥಲ ಮಲ್ಲಿಕಾರ್ಜುನ ಒಡೆಯ 'ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ'ಎಂಬ ೬೧ ಸ್ಥಲದ (ವಚನ ೬೭೮, ವಚನಕಾರರು ೩೯) ಕೃತಿಯನ್ನು ಸಂಕಲಿಸಿದ್ದಾನೆ. ಷಟ್‌ಸ್ಥಲ ತತ್ವನಿರೂಪಣೆಯಲ್ಲಿ ಇದೊಂದು ಹೊಸ ಸ್ಥಲಕ್ರಮದ ಕೃತಿಯೆನಿಸಿದೆ. ಇದರಲ್ಲಿ ಈತನ ಸ್ವರಚಿತ ವಚನಗಳೂ ಎಡೆ ಪಡೆದಿರುವುದರಿಂದ ಈತ ಏಕಕಾಲಕ್ಕೆ ವಚನಕಾರ ಹಾಗೂ ಸಂಕಲನಕಾರ ಎಂಬ ಖ್ಯಾತಿಗೆ ಪಾತ್ರನಾಗಿದ್ದಾನೆ.

ಶಿವಗಣಪ್ರಸಾದಿ ಮಹಾದೇವಯ್ಯ ಈ ಅವಧಿಯ ಮತ್ತೊಬ್ಬ ಪ್ರತಿಭಾವಂತ ಪ್ರಯೋಗಶೀಲ ಅನುಭಾವಿ. ಈತ 'ಶೂನ್ಯಸಂಪಾದನೆ' ಎಂಬ ಹೊಸದೊಂದು ಅಪೂರ್ವ ಕೃತಿಯ ಸೃಷ್ಟಿಗೆ ಕೈಹಾಕಿದ. ಅನುಭವಮಂಟಪದಲ್ಲಿ ನಡೆದಿರಬಹುದಾದ ಶರಣರ ಮಧ್ಯದ ವಿಚಾರಮಂಥನವನ್ನು ಅವರವರ ವಚನಗಳಿಂದ ನಾಟಕೀಯ ತಂತ್ರದಲ್ಲಿ ಅಳವಡಿಸಿಕೊಟ್ಟಿರುವುದು ಈ ಕೃತಿಯ ಅನನ್ಯತೆಯೆನಿಸಿದೆ. 'ಸಮಗ್ರ ವೀರಶೈವ ಸಿದ್ಧಾಂತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೌಲಿಕ ಸಮಸ್ಯೆಗಳನ್ನು ಚರ್ಚಿಸಿ ನಿಷ್ಕರ್ಷಿಸುವ ದೃಷ್ಟಿಯಿಂದ ರಚಿತವಾದ ಈ 'ಮಹಾಸಂಪಾದನೆ' ಮಹಾದೇವಯ್ಯನ ಅದ್ಭುತ ಕಲ್ಪನಾಶಕ್ತಿಗೆ ಹಾಗೂ ಕಲಾ ದೃಷ್ಟಿಗೆ ನಿದರ್ಶನವೆನಿಸಿದೆ.' ಇದು ಮುಂದೆ ರೂಪಿತವಾದ ಮೂರು

ಶೂನ್ಯಸಂಪಾದನೆಗಳಿಗೆ ಆಧಾರವೆನಿಸಿದೆ; ಶೂನ್ಯಸಂಪಾದನ ಸಾಹಿತ್ಯಕ್ಕೆ ಮೊದಲ ಮಾದರಿಯೆನಿಸಿದೆ. ಹೀಗೆ ನೂತನ ಸ್ಥಲ ಪರಿಕಲ್ಪನೆ, ವ್ಯವಸ್ಥಿತ ಜೋಡಣೆ, ವೈವಿಧ್ಯಮಯ ಸ್ಥಲಕಟ್ಟು ರಚನೆಗಳಿಂದ ಸಂಪಾದನ ಸಾಹಿತ್ಯಕ್ಕೆ ಒಂದು ನಿಶ್ಚಿತ ಸ್ವರೂಪವನ್ನು ಒದಗಿಸಿದ ಈ ಘಟ್ಟ, ಈ ದಿಶೆಯಲ್ಲಿ ಮುಂದೆ ಇನ್ನೂ ವ್ಯಾಪಕವಾದ ಕಾರ್ಯ ನಡೆಯಲು ಪ್ರೇರಕವಾಗಿದೆ.

೩

ಸಂಪಾದನ ಸಾಹಿತ್ಯದ ಮೂರನೆಯ ಘಟ್ಟ ತೋಂಟದ ಸಿದ್ಧಲಿಂಗ ಶಿವಯೋಗಿಗಳ ನೇತೃತ್ವದಲ್ಲಿ ಎಡೆಯೂರಿನಲ್ಲಿ ಆರಂಭವಾಗುತ್ತದೆ. ತೋಂಟದ ಸಿದ್ಧಲಿಂಗರು ಸ್ವತಃ ವಚನಗಳನ್ನು ರಚಿಸಿದುದಲ್ಲದೆ, ಅವುಗಳನ್ನು ತಾವೇ ಷಟ್‌ಸ್ಥಲಾನುಸಾರಿಯಾಗಿ ಜೋಡಿಸಿ 'ಷಟ್‌ಸ್ಥಲ ಜ್ಞಾನಸಾರಾಮೃತ' ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ. ಮುಂದೆ ಏಳುನೂರಾಒಂದು ವಿರಕ್ತರೆಂದು ಖ್ಯಾತನಾಮರಾದ ಇವರ ಶಿಷ್ಯ ಪ್ರಶಿಷ್ಯರನೇಕರು ಈ ಕಾರ್ಯವನ್ನು ತುಂಬ ಮುತುವರ್ಜಿಯಿಂದ ಮುಂದುವರಿಸುತ್ತಾರೆ. ಈ ಅವಧಿಯಲ್ಲಿ 'ಸಂಪಾದನ ಸಮಯ' ಎಂಬುದೊಂದು ಹುಟ್ಟಿಕೊಂಡು ವಚನ ಸಂಪಾದನೆಯನ್ನೇ ತಮ್ಮ ಕಾಯಕವನ್ನಾಗಿ, ತಮ್ಮ ಬದುಕಿನ ಮುಖ್ಯ ಮಣಿಹವನ್ನಾಗಿ ಮಾಡಿಕೊಂಡು, ಅಂತಃಕರಣ ಪೂರ್ವಕವಾಗಿ ಸಮರ್ಪಣಾಭಾವದಿಂದ ಈ ಕಾರ್ಯವನ್ನು ಮುಂದುವರಿಸಿತು. ಅವರವರ ದೃಷ್ಟಿಕೋನ, ಅನುಭಾವದ ಆಳ, ಆಧ್ಯಾತ್ಮಿಕ ನಿಲವು, ತಾತ್ವಿಕ ನಿಷ್ಠೆಗಳಿಗನುಗುಣವಾಗಿ, ಷಟ್‌ಸ್ಥಲ, ಮಿಶ್ರಷಟ್‌ಸ್ಥಲ, ಏಕೋತ್ತರ ಶತಸ್ಥಲ, ಇನ್ನೂರಹದಿನಾರು ಸ್ಥಲ ಹಾಗೂ ಸಂಕೀರ್ಣ ಸ್ಥಲಕಟ್ಟಿನ ಕೃತಿಗಳು ಅಧಿಕ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಸಂಪಾದನಾ ಕಾರ್ಯಕ್ಕೆ ಹೆಚ್ಚಿನ ತೀವ್ರತೆ, ವೈವಿಧ್ಯ, ವ್ಯಾಪ್ತಿಗಳು ಉಂಟಾದವು. ಸಂ. ಚೆನ್ನಂಜೇದೇವ, ಸಂ. ಸಿದ್ಧವೀರಣ್ಣ, ಸಂ. ಬೋಳಬಸವ, ಸಂ. ಪರ್ವತೇಶ್ವರ, ಎಳಮಲೆಯ ಗುರುಶಾಂತದೇವ, ಸಂ. ಗುರುಲಿಂಗದೇವ, ಸಂ. ಮರಿಸಂಗಯ್ಯ ಮೊದಲಾದ ಸಂಕಲನಕಾರರು; ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣೊಡೆಯರಂಥ ಶೂನ್ಯಸಂಪಾದನಾಕಾರರು ಹಾಗೂ ಅನೇಕ ಜನ ಟೀಕಾಕಾರರು ಈ ಅವಧಿಯಲ್ಲಿ ಮೌಲಿಕ ಸಂಕಲನಗಳನ್ನು ಸಿದ್ಧಪಡಿಸಿದರು. ಸಂಪಾದನಾ ಸಾಹಿತ್ಯಕ್ಕೆ ಹಿಂದೆಂದೂ ಕಾಣದ ಮಹಾಪೂರ ಬಂದಿತು. ಈ ಕಾರಣದಿಂದ ಇದು ಸಂಪಾದನಾ ಸಾಹಿತ್ಯದ ಸುವರ್ಣಯುಗವೆನಿಸಿತು.

ಹೀಗೆ ಮೂರು ಘಟ್ಟಗಳಲ್ಲಿ ನಡೆದುಬಂದ ಸಮಗ್ರ ವಚನ ಸಂಪಾದನಾ ಸಾಹಿತ್ಯವನ್ನು ಸ್ವರೂಪದ ದೃಷ್ಟಿಯಿಂದ ಡಾ. ಆರ್.ಸಿ. ಹಿರೇಮಠ ಅವರು ಕೇವಲ ಸಂಕಲನಗಳು, ತಾತ್ವಿಕ ಸಂಕಲನಗಳು ಮತ್ತು ಸಂಪಾದನೆಗಳು ಎಂದು ಮೂರು ಗುಂಪುಗಳಾಗಿ ವಿಂಗಡಿಸಿದರೆ, ಡಾ. ಎಂ.ಎಂ. ಕಲಬುರ್ಗಿ ಅವರು ಸಂಗ್ರಹ-ಸಂಕಲನ -ಸಂಪಾದನೆ-ಎಂದು ವಿಭಜಿಸಿದ್ದಾರೆ. ಈ ವಿಭಜನೆಯನ್ನು ಅಂಗೀಕರಿಸಿ ಇವುಗಳಲ್ಲಿ ಮತ್ತೆ ಕೆಲವು ಉಪವಿಭಾಗಗಳನ್ನು ಕಲ್ಪಿಸಿ, ಒಟ್ಟು ಸಂಪಾದನ ಸಾಹಿತ್ಯವನ್ನು ಕೆಳಗಿನಂತೆ ವರ್ಗೀಕರಿಸಬಹುದು.

- ವಚನ ಸಂಯೋಜನ ಸಾಹಿತ್ಯ
  - ಸಂಗ್ರಹ
    - ಏಕವ್ಯಕ್ತಿ ವಚನ ಸಂಗ್ರಹಗಳು
    - ಅನೇಕವ್ಯಕ್ತಿ ವಚನಗಳಿಂದ ಕೂಡಿದ ಸಂಗ್ರಹಗಳು
  - ಸಂಕಲನ
    - ಸ್ತೋತ್ರದ ವಚನ ಸಂಕಲನಗಳು
      - ಶಿವಸ್ತೋತ್ರ
      - ಶರಣಸ್ತೋತ್ರ
      - ತತ್ವಸ್ತೋತ್ರ
    - ತಾತ್ವಿಕ ವಚನ ಸಂಕಲನಗಳು
      - ೧. ಷಟ್‌ಸ್ಥಲ
        - ಏಕವ್ಯಕ್ತಿ ವಚನಗಳಿಂದ ಕಟ್ಟಿದವು
          - ಅವಾಂತರ ಸ್ಥಲಸಹಿತ
          - ಅವಾಂತರ ಸ್ಥಲರಹಿತ
        - ಅನೇಕ ವ್ಯಕ್ತಿ ವಚನಗಳಿಂದ ಕಟ್ಟಿದವು
      - ೨. ಷೋಡಶಸ್ಥಲ
      - ೩. ಮಿಶ್ರ ಷಟ್‌ಸ್ಥಲ
        - ಏಕವ್ಯಕ್ತಿ ವಚನಗಳಿಂದ ಕಟ್ಟಿದವು
        - ಅನೇಕ ವ್ಯಕ್ತಿ ವಚನಗಳಿಂದ ಕಟ್ಟಿದವು
      - ೪. ಏಕೋತ್ತರ ಶತಸ್ಥಲ
      - ೫. ಇನ್ನೂರ ಹದಿನಾರು ಸ್ಥಲ
      - ೬. ಅಷ್ಟಾವರಣ
      - ೭. ಶಿವಯೋಗ
      - ೮. ಭಕ್ತಿ
      - ೯. ಶೀಲ
      - ೧೦. ಆಚರಣೆ
      - ೧೧. ಇತರ
  - ಸಂಪಾದನ

**ಸಂಗ್ರಹ:**

ಯಾವುದೇ ತಾತ್ವಿಕ ಹಿನ್ನೆಲೆಯಿಲ್ಲದೆ ಒಬ್ಬೊಬ್ಬ ವಚನಕಾರನ ಅಥವಾ ವಚನಕಾರ್ತಿಯ ಹೆಸರಿನಡಿಯಲ್ಲಿ ಅವರವರ ವಚನಗಳನ್ನು ಅಳವಡಿಸಿದ ಕೃತಿಗಳು ಸಂಗ್ರಹಗಳೆನಿಸುತ್ತವೆ. ಇವುಗಳಲ್ಲಿ ಎರಡು ವಿಧ. ಒಂದು ಏಕವ್ಯಕ್ತಿಯ ವಚನಗಳಿಂದ ಕಟ್ಟಿದ

ಪ್ರತ್ಯೇಕ ಕಟ್ಟುಗಳು; ಮತ್ತೊಂದು ಅನೇಕ ವ್ಯಕ್ತಿಗಳ ಹೆಸರಿನಡಿಯಲ್ಲಿ ಒಂದೇ ಕಟ್ಟಿನಲ್ಲಿ ಅವರವರ ವಚನಗಳನ್ನು ಸಂಗ್ರಹಿಸಿದ ಕಟ್ಟುಗಳು.

ಉದಾ: ಮಹಾದೇವಿಯಕ್ಕನ ವಚನಗಳು, ಅಂಬಿಗರ ಚೌಡಯ್ಯನ ವಚನಗಳು, ಮಡಿವಾಳ ಮಾಚಯ್ಯನ ವಚನಗಳು, ನೀಲಮ್ಮನ ವಚನಗಳು ಮುಂತಾದವು ಮೊದಲಗುಂಪಿಗೆ ಸೇರಿದರೆ; ಸಕಲ ಪುರಾತನರ ವಚನಗಳು (ಕೋ-ಗೊ-ಬ ಮೂರು ವಿಧದ ಕಟ್ಟುಗಳು)ಎರಡನೆಯ ಗುಂಪಿಗೆ ಸೇರುತ್ತವೆ.

ವಚನ ಸಂಪಾದನಾ ಕಾರ್ಯ ಮೊದಲು ಆರಂಭವಾದದ್ದು ಒಬ್ಬೊಬ್ಬ ವಚನಕಾರನ ಹೆಸರಿನಡಿಯಲ್ಲಿ ಅವರವರ ವಚನಗಳನ್ನು ಸಂಗ್ರಹಿಸುವುದರ ಮೂಲಕವೆಂದೇ ತೋರುತ್ತದೆ. ೧೫ನೆಯ ಶತಮಾನದಲ್ಲಿಯೇ ಆರಂಭವಾದ ಈ ಕಾರ್ಯ ಮುಂದಿನ ಘಟ್ಟಗಳಲ್ಲಿಯೂ ಮುಂದುವರೆದಿದೆ. ಇವುಗಳನ್ನು 'ಏಕಪುರಾತನರ ಕಟ್ಟುಗಳು' ಎಂದು ಕರೆಯಬಹುದು. ಇಂಥ ಅನೇಕ ಹಸ್ತಪ್ರತಿಗಳು ಇಂದಿಗೂ ದೊರೆಯುತ್ತಿರುವುದು ಇದಕ್ಕೆ ನಿದರ್ಶನವೆನಿಸಿದೆ. ಈ ಸಂಗ್ರಹಗಳಲ್ಲಿ ಸಂಗ್ರಹಿಸಿದವರ ಹೆಸರು ದೊರೆಯದೇ ಇರುವುದರಿಂದ ಇವು ಸಾಂಘಿಕ ಪ್ರಯತ್ನದಿಂದ ಸಿದ್ಧವಾದ ಕೃತಿಗಳೆಂದು ಹೇಳಬೇಕಾಗುತ್ತದೆ.

ಅನೇಕ ಶರಣರ ವಚನಗಳನ್ನು ಒಂದೇ ಕಟ್ಟಿನಲ್ಲಿ ಸಂಗ್ರಹಿಸಿದ ಅಪೂರ್ವ ಕೃತಿಗಳು ಸಕಲ ಪುರಾತನರ ವಚನ ಕಟ್ಟುಗಳು (ಇವಕ್ಕೆ ಎಲ್ಲ ಪುರಾತನರ ವಚನಗಳು, ಸರ್ವಪುರಾತನರ ವಚನಗಳು ಎಂಬ ಹೆಸರೂ ಉಂಟು). ಇವು ವಚನ ಸಂಗ್ರಹ ಕ್ಷೇತ್ರಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆ. ಕೋಲಶಾಂತಯ್ಯ ಬಸವಣ್ಣ ಮತ್ತು ಗೊಗ್ಗವ್ವೆಯಿಂದ ಆರಂಭವಾಗುವ ಮೂರು ವಿಧದ ಕಟ್ಟುಗಳು ಸೇರಿ ಒಟ್ಟು ೧೪೮ ಜನ ವಚನಕಾರರ ೫೦೨೧ ವಚನಗಳು ಸಂಗ್ರಹವಾಗಿವೆ (ಹಸ್ತಪ್ರತಿಗಳಲ್ಲಿ ಈ ಸಂಖ್ಯೆ ಹೆಚ್ಚುಕಡಿಮೆಯಾಗಿದೆ).

ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಕಟ್ಟು ಹೆಚ್ಚಾಗಿ ಆದಯ್ಯನ ವಚನಗಳಿಂದ ಮುಕ್ತಾಯವಾಗುತ್ತದೆ. ಇದರಲ್ಲಿ ೨೭ ಜನ ವಚನಕಾರರ ಸು. ೩೦೦೦ ವಚನಗಳು ಸಮಾವೇಶಗೊಂಡಿದೆ. ಸೇರಿದ ವಚನಗಳ ಸಂಖ್ಯೆಯ ಮೇಲಿಂದ ಇದಕ್ಕೆ 'ಮೂರು ಸಾವಿರದ ಕಟ್ಟು' ಎಂದು ಕರೆಯಲಾಗುತ್ತದೆ. ಇದರಲ್ಲಿ ಹೆಚ್ಚಾಗಿ ಪುರುಷರ ವಚನಗಳನ್ನು ಅಳವಡಿಸಲಾಗಿದೆ. ಇಲ್ಲಿ ಸೇರಿದ ಶರಣರ ವಚನ ಸಂಖ್ಯಾ ದೃಷ್ಟಿಯಿಂದ ಹೇಳುವದಾದರೆ, ಅತಿಕಡಿಮೆಯೆಂದರೆ ೨೯(ಉರಿಲಿಂಗದೇವ), ಅತೀ ಹೆಚ್ಚೆಂದರೆ ೩೮೫(ಮೋಳಿಗೆಯ್ಯ). ಒಬ್ಬೊಬ್ಬ ಶರಣನ ಹೆಚ್ಚೆಚ್ಚು ವಚನಗಳನ್ನು ಆಯ್ದು ಸೇರಿಸಿದ್ದು ಶರಣರ ಸಂಖ್ಯೆ ಕಡಿಮೆಯಿದ್ದು, ವಚನಗಳ ಸಂಖ್ಯೆ ಅಧಿಕವಾಗಿರುವುದು, ಮೂರು ಕಟ್ಟುಗಳಲ್ಲಿಯೇ ಅತಿ ಹೆಚ್ಚು ವಚನಗಳನ್ನು ಸಂಗ್ರಹಿಸಿರುವುದು, 'ಸಂಪಾದನೆಯ ವಚನಗಳು' ಎಂಬ ವಿಭಾಗದಲ್ಲಿ ಸಂಭಾಷಣೆಯಿಂದ ಕೂಡಿದ ವಚನಗಳನ್ನು ಜೋಡಿಸಿರುವುದು, ಕೇವಲ ೧೨ನೆಯ ಶತಮಾನದ ಶರಣರ ವಚನಗಳನ್ನು ಮಾತ್ರ ಸಂಗ್ರಹಿಸಿರುವುದು, ಉಳಿದ ಕಟ್ಟುಗಳಿಗಿಂತ ಹೆಚ್ಚು

ವ್ಯವಸ್ಥಿತವಾಗಿರುವುದು ಈ ಕಟ್ಟಿನ ವೈಶಿಷ್ಟ್ಯ. ಈ ಅಂಶಗಳನ್ನು ಗಮನಿಸಿದರೆ ಇದು ಪ್ರಥಮವಾಗಿ ಕಟ್ಟಿದ ಸಕಲ ಪುರಾತನರ ವಚನಗಳ ಕಟ್ಟೆನಿಸುತ್ತದೆ.

ಬಸವಣ್ಣನ ವಚನಗಳಿಂದ ಆರಂಭವಾಗುವ ಕಟ್ಟು ಕೂಡಾ ಆದಯ್ಯನ ವಚನಗಳಿಂದಲೇ ಕೊನೆಗೊಳ್ಳುತ್ತದೆ. ಇದರಲ್ಲಿ ೮೪ ವಚನಕಾರರ ಸು. ಒಂದು ಸಾವಿರ ವಚನಗಳಿವೆ. ಅದಕ್ಕಾಗಿ 'ಸಾವಿರದಕಟ್ಟು' ಎಂಬ ಪರ್ಯಾಯನಾಮ ಇದಕ್ಕುಂಟು. ಅತಿಕಡಿಮೆಯೆಂದರೆ ೧, ಅತಿಹೆಚ್ಚೆಂದರೆ ೧೯೬ ವಚನಗಳು ಇಲ್ಲಿ ಆಯ್ಕೆಗೊಂಡಿವೆ. ಹಿಂದಿನ ಕಟ್ಟಿನಲ್ಲಿ ಸೇರಿದ ಕೆಲವು ಶರಣರ ವಚನಗಳು ಇಲ್ಲಿ ಪುನರುಕ್ತವಾಗಿವೆ. ಅತಿಕಡಿಮೆ ಸಂಖ್ಯೆಯ ವಚನಗಳನ್ನು ಸಂಗ್ರಹಿಸಿರುವುದು, ಸ್ತ್ರೀ ಪುರುಷರಿಬ್ಬರ ವಚನಗಳು ಸಮಾವೇಶಗೊಳಿಸಿರುವುದು, ೧೨ರಿಂದ ೧೫ನೇ ಶತಮಾನದವರೆಗಿನ ಶರಣರ ವಚನಗಳು ಮಾತ್ರ ಅಳವಟ್ಟಿರುವುದು ಈ ಕಟ್ಟಿನ ವಿಶೇಷತೆ.

ಗೊಗ್ಗವ್ವೆಯ ವಚನಗಳಿಂದ ಆರಂಭವಾಗುವ ಕಟ್ಟು ಉಳಿದೆರಡು ಕಟ್ಟುಗಳಿಗಿಂತ ಹೆಚ್ಚು ವಿಶಿಷ್ಟವಾಗಿದೆ. ಇದು ನೀಲಮ್ಮನ ವಚನಗಳಿಂದ ಪೂರ್ಣಗೊಳ್ಳುತ್ತದೆ. ೧೨೧ ಜನ ವಚನಕಾರರ ಸು. ೧೫೦೦ ವಚನಗಳು ಇಲ್ಲಿ ಸಂಗ್ರಹವಾಗಿವೆ. ಸ್ತ್ರೀಯರ ವಚನಗಳು ಅಧಿಕ ಸಂಖ್ಯೆಯಲ್ಲಿ ಅಳವಟ್ಟಿವೆ. ಎರಡನೆಯ ಕಟ್ಟಿನಂತೆ- ಇಲ್ಲಿಯೂ ಹಿಂದಿನ ಕಟ್ಟುಗಳಲ್ಲಿಯ ಕೆಲವು ವಚನಕಾರರ ವಚನಗಳು ಪುನರುಕ್ತವಾಗಿವೆ.

ಸ್ತ್ರೀಯರ ವಚನಗಳಿಂದ ಆರಂಭವಾಗಿ ಸ್ತ್ರೀಯರ ವಚನಗಳೊಂದಿಗೆ ಮುಕ್ತಾಯಗೊಳ್ಳುವುದು, 'ಶೀಲ ಸಂಪಾದನೆಯ ವಚನಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಸ್ತ್ರೀಯರ ಆಚರಣೆಗೆ ಸಂಬಂಧಿಸಿದ ವಚನಗಳನ್ನು ಸಂಗ್ರಹಿಸಿರುವುದು, ಒಬ್ಬೊಬ್ಬ ವಚನಕಾರರ ಅತಿಕಡಿಮೆ ವಚನಗಳನ್ನಾಯ್ದು ಅಳವಡಿಸಿದುದು, ಅತಿ ಹೆಚ್ಚು ಶರಣರ ವಚನಗಳಿಂದ ಕೂಡಿರುವುದು ಈ ಕಟ್ಟಿನ ಅಪೂರ್ವತೆ.

ಮೂರು ಕಟ್ಟುಗಳನ್ನು ಒಟ್ಟಾಗಿ ಗಮನಿಸಿದಾಗ ಕೆಳಗಿನ ಅಂಶಗಳು ಒಡೆದುಕಾಣುತ್ತವೆ:

೧. ಆಯಾ ಶರಣರ ಹೆಸರಿನ ಅಡಿಯಲ್ಲಿ ವಚನಗಳನ್ನು ಸಂಗ್ರಹಿಸಿರುವುದು.

೨. ಅಧಿಕ ಸಂಖ್ಯೆಯಲ್ಲಿ ವಚನ ರಚಿಸಿದವರ ಹೆಚ್ಚು ವಚನಗಳನ್ನು ಆಯ್ದುಕೊಳ್ಳದೆ, ಕಡಿಮೆ ಸಂಖ್ಯೆಯಲ್ಲಿ ವಚನ ರಚಿಸಿದವರ ಹೆಚ್ಚು ವಚನಗಳನ್ನು ಹೆಚ್ಚಾಗಿ ಎತ್ತಿಕೊಂಡದ್ದು.

೩. ಜೇಡರ ದಾಸಿಮಯ್ಯನಿಂದ ಗುರುಬಸವನವರೆಗೆ ಅಂದರೆ ೧೨ರಿಂದ ೧೫ನೆಯ ಶತಮಾನದವರೆಗಿನ ಶರಣರ ವಚನಗಳನ್ನು ಅಳವಡಿಸಿಕೊಂಡಿರುವುದು.

೪. ಬಸವಾದಿ ಶರಣರಿಗೆ 'ಸಕಲ ಪುರಾತನರು' 'ಎಲ್ಲ ಪುರಾತನರು' 'ಸರ್ವ ಪುರಾತನರು' ಎಂದು ಕರೆದುದು.

೫. ಮೊದಲು ಕೇವಲ ೧೨ನೆಯ ಶತಮಾನದ ಶರಣರ ವಚನಗಳನ್ನು ಮಾತ್ರ ಆಯ್ದು

ಸೇರಿಸಬೇಕೆಂಬ ಉದ್ದೇಶವನ್ನು ಹೊಂದಿ, ಅದನ್ನು ಪ್ರಥಮ ಕಟ್ಟಿನಲ್ಲಿ ಸಾಧಿಸಿ, ೨ ಮತ್ತು ೩ನೆಯ ಕಟ್ಟುಗಳಲ್ಲಿ ಅದನ್ನು ೧೫ನೇ ಶತಮಾನದವರೆಗೂ ವಿಸ್ತರಿಸಿಕೊಂಡುದು.

೬. ಮುಂದೆ ಈ ಕಟ್ಟುಗಳು ನಕಲು-ಪ್ರತಿನಕಲುಗೊಳ್ಳುವಾಗ ಮತ್ತೆ ಹೊಸ ಹೊಸ ವಚನಕಾರರ ವಚನಗಳು ಪ್ರತಿಕಾರರಿಂದ ಸೇರುತ್ತ ನಡೆದುದು. ಹೀಗಾಗಿ ಬೇರೆ ಬೇರೆ ಕಟ್ಟುಗಳಲ್ಲಿ ಶರಣರ ನಾಮವರ್ಗ ಹಾಗೂ ವಚನಗಳ ಸಂಖ್ಯೆ ಹೆಚ್ಚು ಕಡಿಮೆಯಾಗಿರುವುದು.

೭. ಹೆಚ್ಚು ಶರಣರ ಅಧಿಕ ವಚನಗಳನ್ನು ಒಂದೆಡೆ ರಾಶಿಗೊಳಿಸಿರುವುದು-ಈ ಕಟ್ಟುಗಳ ಒಟ್ಟು ವೈಶಿಷ್ಟ್ಯ.

ಮೇಲ್ನೋಟಕ್ಕೆ ಕೇವಲ ಸಂಗ್ರಹಗಳೆನಿಸಿದ ಈ ಕಟ್ಟುಗಳ ಸಂಯೋಜನೆಯಲ್ಲಿ ಯಾವುದಾದರೂ ತಾತ್ವಿಕ ದೃಷ್ಟಿಯನ್ನು ಇಟ್ಟುಕೊಳ್ಳಲಾಗಿದೆಯೆ? ಅಥವಾ ಸುಮ್ಮನೆ ವಚನಗಳನ್ನು ರಾಶಿಗೊಳಿಸಲಾಗಿದೆಯೆ? ಎಂದು ಸೂಕ್ಷ್ಮವಾಗಿ ಅವಲೋಕಿಸಿದರೆ ಇಲ್ಲಿಯೂ ಒಂದು ತಾತ್ವಿಕ ದೃಷ್ಟಿಕೋನ ಕೆಲಸ ಮಾಡಿದುದು ಕಂಡುಬರುತ್ತದೆ. ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ ಕಟ್ಟಿಗೆ ಒಂದು ಹಸ್ತಪ್ರತಿಯಲ್ಲಿ 'ಷಟ್‌ಸ್ಥಲ ಚಿಂತಾಮಣಿ'[೧೫] ಎಂದು ಕರೆಯಲಾಗಿದೆ. ಈ ಹೆಸರಿನ ಹಾದಿ ಹಿಡಿದು ಅದರಲ್ಲಿ ಅಳವಟ್ಟ ವಚನಗಳನ್ನು ಪರೀಕ್ಷಿಸಿದಾಗ ಒಬ್ಬೊಬ್ಬ ವಚನಕಾರನ ವಚನಗಳನ್ನು ಜೋಡಿಸುವಲ್ಲಿ ಷಟ್‌ಸ್ಥಲ ಕ್ರಮವನ್ನು ಅನುಸರಿಸಿದುದು ಕಂಡುಬರುತ್ತದೆ. ಆದರೆ ಸ್ಥಲನಾಮ ನಿರ್ದೇಶನ ಮಾಡಿಲ್ಲ. ಎಲ್ಲ ವಚನಕಾರರೂ ಷಟ್‌ಸ್ಥಲದ ಎಲ್ಲ ಸ್ಥಲಗಳನ್ನೂ ಕುರಿತು ವಚನಗಳನ್ನು ಬರೆದಿಲ್ಲವಾದುದರಿಂದ ಇದ್ದುದರಲ್ಲಿಯೇ ಆಯಾ ಸ್ಥಲಗಳಿಗೆ ಸಂಬಂಧಿಸಿದ ವಚನಗಳನ್ನು ಅಳವಡಿಸಲು ಪ್ರಯತ್ನಿಸಿದುದು ಸ್ಪಷ್ಟವಾಗುತ್ತದೆ. ಕೆಲವರ ವಚನಗಳಲ್ಲಿ ಷಟ್‌ಸ್ಥಲಗಳಲ್ಲಿ ಅಳವಡುವ ಭಿನ್ನ ನಾಮದ ಸ್ಥಲಗಳನ್ನು ಉಪಶೀರ್ಷಿಕೆಯಾಗಿ ಬಳಸಿ ಅವುಗಳಡಿಯಲ್ಲಿ ಆ ಭಾವದ ವಚನಗಳನ್ನು ಹೊಂದಿಸಲಾಗಿದೆ. ಉದಾ: ಕೋಲಶಾಂತಯ್ಯನ ವಚನಗಳಲ್ಲಿ ಆತ್ಮಘಟಸಂಗ ನಿರಿಯಾಣಯೋಗ ಭಾವಸ್ಥಲ, ಸರ್ವೇಂದ್ರಿಯ ಸಂಗ ನಿರ್ಲೇಪಸ್ಥಲ, ಕ್ರಿಯಾ ಭಾವ ಜ್ಞಾನಸಂಗಲೇಪಸ್ಥಲ, ಸಮಯಜ್ಞಾನ ಸಂಪಾದನೆ ಲೇಪಸ್ಥಲ, ಗುರುಭಾವ ಭೇದಸ್ಥಲ ಸಂಬಂಧ, ಭಕ್ತಿ ಸ್ಥಲದ ನಿರ್ದೇಶನ ಭಾವ, ವರ್ತಕ ಕ್ರೀ ಶುದ್ಧಸ್ಥಲ; ಬಿಬ್ಬಿ ಬಾಚಯ್ಯನ ವಚನಗಳಲ್ಲಿ ಕ್ರೀಜ್ಞಾನ ಸಮರ್ಪಣ, ಐಕ್ಯಾನುಭಾವಲಿಂಗಸ್ಥಲ, ಅಂಗಲಿಂಗಸ್ಥಲ ಸಮರ್ಪಣ, ಸರ್ವಭಾವಸ್ಥಲ ಸಮರ್ಪಣ, ಐಕ್ಯಾನುಭಾವ ಸ್ಥಲ, ಅಂಗಭಾವ ಜ್ಞಾನಲೇಪ ಸ್ಥಲ; ಶಿವಲೆಂಕ ಮಂಚಣ್ಣನ ವಚನಗಳಲ್ಲಿ ಗುರುಲಿಂಗ ಜಂಗಮ ಪಾದತೀರ್ಥ ಪ್ರಸಾದ ಅರ್ಪಿತ ಅವಧಾನ ಸಮರ್ಪಣಸ್ಥಲ, ಶೀಲಸಂಪಾದನೆ ಸಮರ್ಪಣ; ಮನುಮುನಿ ಗುಮ್ಮಟದೇವಗಳ ವಚನದಲ್ಲಿ-ಆತ್ಮನರಿವು ಭಾವಸ್ಥಲ, ಆತ್ಮ ಐಕ್ಯಸ್ಥಲ; ಅವಸರದ ರೇಕಣ್ಣನ ವಚನಗಳಲ್ಲಿ ಶಿಷ್ಯನ ವಿಶ್ವಾಸಸ್ಥಲ ಇತ್ಯಾದಿ.

ಬಸವಣ್ಣನವರಿಂದ ಆರಂಭವಾಗುವ ಕಟ್ಟಿನಲ್ಲಿಯೂ ಈ ಕ್ರಮ ಮುಂದುವರಿದಿದೆ. ಗೊಗ್ಗವ್ವೆಯಿಂದ ಆರಂಭವಾಗುವ ಮೂರನೆಯ ಕಟ್ಟು ಹೆಚ್ಚಾಗಿ ಆಚರಣೆಗೆ ಸಂಬಂಧಿಸಿದ ವಚನಗಳನ್ನು ಒಳಗೊಂಡಿದೆ. 'ಶೀಲಸಂಪಾದನೆಯ ವಚನಗಳು' ಎಂಬ ಶೀರ್ಷಿಕೆಯಡಿಯಲ್ಲಿ ಜೋಡಿಸಿದ ಸ್ತ್ರೀಯರ ಎಲ್ಲ ವಚನಗಳು ಹಾಗೂ ಪುರುಷರ ಇತರ ವಚನಗಳು ಈ ದೃಷ್ಟಿಯನ್ನು ಹೊಂದಿದುದು ಇದಕ್ಕೆ ನಿದರ್ಶನ. ಇವೆಲ್ಲ ವ್ರತ ನೇಮ, ಆಚಾರ, ಶೀಲಗಳಿಗೆ ಸಂಬಂಧಿಸಿದುವಾಗಿವೆ.

ಒಟ್ಟಾರೆ ವೀರಶೈವ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಶಿವಯೋಗ, ಲಿಂಗಾಂಗ ಸಾಮರಸ್ಯ ಇತ್ಯಾದಿ ತತ್ವಗಳನ್ನು ಅಳವಡಿಸಿಕೊಂಡ ವಚನಗಳನ್ನು ಒಳಗೊಂಡ ಈ ಕಟ್ಟುಗಳು ತೋರಿಕೆಗೆ ಕೇವಲ ಸಂಗ್ರಹಗಳೆನಿಸಿದರೂ ಒಳಗೆ ಸೂಕ್ಷ್ಮ ತಾತ್ವಿಕ ವ್ಯವಸ್ಥೆ ಕಂಡು ಬರುವುದರಿಂದ ಇವುಗಳನ್ನು ತಾತ್ವಿಕ ಸಂಕಲನಗಳ ಗುಂಪಿಗೆ ಸೇರಿಸುವುದು ಸೂಕ್ತವೆನಿಸುತ್ತದೆ. ಒಂದೊಂದು ಕಟ್ಟಿನಲ್ಲಿ ಅಡಗಿದ ತಾತ್ವಿಕ ಹಿನ್ನೆಲೆಯನ್ನು ಗುರುತಿಸುವ ಕಾರ್ಯ ಇನ್ನೂ ನಡೆಯಬೇಕಾಗಿದೆ. (ಈ ಕಟ್ಟುಗಳ ಸಂಯೋಜಕರ ಹೆಸರು ದೊರಕದೆ ಇರುವುದು ಇವೂ ಕೂಡ ಸಾಂಘಿಕ ಕಾರ್ಯದ ಫಲವೆಂದೇ ಕಾಣುತ್ತದೆ). ಸದ್ಯದ ಮಟ್ಟಿಗೆ ಸಂಗ್ರಹ-ಸಂಕಲನ-ಸಂಪಾದನ ಮೂರೂ, ಕಾರ್ಯಗಳು ಇದರಲ್ಲಿ ಏಕಕಾಲಕ್ಕೆ ನಡೆದಿರುವುದರಿಂದ ಇವುಗಳನ್ನು ಸಂಗ್ರಹಕ್ಕೆ ಸಂಗ್ರಹ, ಸಂಕಲನಕ್ಕೆ ಸಂಕಲನ, ಸಂಪಾದನಕ್ಕೆ ಸಂಪಾದನ ಎಂದು ಕರೆಯಬಹುದು. ಮುಂದೆ ಬಹುಸಂಖ್ಯೆಯಲ್ಲಿ ಹುಟ್ಟಿದ ಸಂಕಲನ ಹಾಗೂ ಸಂಪಾದನ ಗ್ರಂಥಗಳಿಗೆ ಇವು ಪ್ರೇರಕವಾಗಿ ನಿಂತಿರುವುದು ನಿಸ್ಸಂಶಯ.

ಈ ಕಟ್ಟುಗಳನ್ನು ಆಧರಿಸಿ ಸಕಲ ಪುರಾತನರ ವಚನ ಸಾರಾಮೃತ, ಎಲ್ಲ ಪುರಾತನರ ಸ್ತೋತ್ರದ ವಚನ, ಸಕಲಪುರಾತನರ ಬೆಡಗಿನ ವಚನ ಎಂಬ ಸಾರ ರೂಪದ ಮತ್ತು ಸಟೀಕವಾದ ಕೃತಿಗಳು ಕಾಲಾಂತರದಲ್ಲಿ ಹುಟ್ಟಿಕೊಂಡಿವೆ.

**ಸಂಕಲನ:**

ಒಂದು ನಿಶ್ಚಿತ ತಾತ್ವಿಕ ಹಿನ್ನೆಲೆ ಇಟ್ಟುಕೊಂಡು, ಸ್ಥಲಸಹಿತವಾಗಿ ಇಲ್ಲವೆ ಸ್ಥಲ ರಹಿತವಾಗಿ ವಚನಗಳನ್ನು ಅಳವಡಿಸಿದ ಕೃತಿಗಳು ಸಂಕಲನಗಳೆನಿಸುತ್ತವೆ. ಇದು ಸಂಗ್ರಹಕ್ಕಿಂತಲೂ ಹೆಚ್ಚಿನ ಜವಾಬ್ದಾರಿಯ ಕೆಲಸ. ಸಂಗ್ರಹದಲ್ಲಿ ಪರಿಶ್ರಮ ಪ್ರಧಾನವಾಗಿದ್ದರೆ, ಸಂಕಲನದಲ್ಲಿ ಅದರ ಜೊತೆಗೆ ಪಾಂಡಿತ್ಯವೂ ಒಡಗೂಡಬೇಕಾಗುತ್ತದೆ. ಸಂಕಲನಗಳಲ್ಲಿ ಸ್ತೋತ್ರದ ವಚನ ಸಂಕಲನಗಳು ಮತ್ತು ತಾತ್ವಿಕ ವಚನ ಸಂಕಲನಗಳು ಎಂದು ಎರಡು ಉಪವಿಭಾಗಗಳನ್ನು ಕಲ್ಪಿಸಬಹುದು.

ಸ್ತೋತ್ರದ ವಚನಸಂಕಲನಗಳಲ್ಲಿ ಶಿವಸ್ತೋತ್ರ-ಶರಣಸ್ತೋತ್ರ-ತತ್ವಸ್ತೋತ್ರವೆಂದು ಮತ್ತೆ ಮೂರು ವಿಭಾಗಗಳನ್ನು ಮಾಡಬಹುದು. ಶಿವಮಹಿಮಾ ಸ್ತೋತ್ರದ ವಚನಗಳು, ಶಿವನ ಬಿರುದಾವಳಿ ಸ್ತೋತ್ರದ ವಚನಗಳು ಮೊದಲ ವಿಭಾಗಕ್ಕೆ ಉದಾಹರಣೆ ಎನಿಸಿದರೆ;

ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರನ್ನು ಕುರಿತ ಸ್ತೋತ್ರವಚನಗಳು, ಒಟ್ಟಾಗಿ ಶರಣರನ್ನು ಕುರಿತ ಮಿಶ್ರ ಸ್ತೋತ್ರ-ಶರಣ ಸ್ತೋತ್ರದ ವಚನಗಳು ಎರಡನೆಯ ವಿಭಾಗಕ್ಕೆ, ಷಟ್‌ಸ್ಥಲ, ಅಷ್ಟಾವರಣ, ಲಿಂಗ, ಅನುಭಾವಗಳನ್ನು ಕುರಿತ ಸ್ತೋತ್ರದ ವಚನಗಳು ಮೂರನೆಯ ವಿಭಾಗಕ್ಕೆ ಉದಾಹರಣೆಯಾಗಿವೆ. ಇಲ್ಲಿ ಸ್ತುತಿಯೇ ಪ್ರಧಾನ. ಇವುಗಳನ್ನು ಸಂಗ್ರಹಗಳ ಗುಂಪಿಗೆ ಸೇರಿಸಬಹುದೆನಿಸಿದರೂ ವಚನ ಆಯ್ಕೆ ಮಾಡುವಲ್ಲಿ, ಜೋಡಿಸುವಲ್ಲಿ ನಿಶ್ಚಿತ ಉದ್ದೇಶ ಇರುವುದರಿಂದ ಸಂಕಲನಗಳ ಗುಂಪಿಗೆ ಸೇರಿಸಲಾಗಿದೆ.

ಸಂಕಲನಗಳ ಇನ್ನೊಂದು ಬಹುದೊಡ್ಡ ಭಾಗವೆಂದರೆ ತಾತ್ವಿಕ ಸ್ಥಲಕಟ್ಟಿನ ವಚನ ಸಂಕಲನಗಳದು. ಇವುಗಳಲ್ಲಿ ಷಟ್‌ಸ್ಥಲ, ಷೋಡಶಸ್ಥಲ, ಮಿಶ್ರಷಟ್‌ಸ್ಥಲ, ಏಕೋತ್ತರ ಶತಸ್ಥಲ, ಇನ್ನೂರ ಹದಿನಾರು ಸ್ಥಲದ ಕಟ್ಟುಗಳು, ಅಷ್ಟಾವರಣ, ಶಿವಯೋಗ, ಭಕ್ತಿ, ಶೀಲ, ಆಚರಣೆಯ ವಿಷಯಗಳನ್ನು ಪ್ರಧಾನವಾಗಿಟ್ಟುಕೊಂಡ ಸ್ಥಲಕಟ್ಟಿನ ಕೃತಿಗಳು ಮತ್ತು ಇತರ ಸ್ಥಲಕಟ್ಟಿನ ಕೃತಿಗಳು ಎಂದು ಅನೇಕ ಉಪವಿಭಾಗಗಳನ್ನು ಕಲ್ಪಿಸಬಹುದಾಗಿದೆ.

ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣನವರ ಷಟ್‌ಸ್ಥಲ ವಚನಗಳ ಕಟ್ಟುಗಳು ಅದರಲ್ಲಿಯೇ ಏಕವ್ಯಕ್ತಿಯ ವಚನಗಳಿಂದ ಕಟ್ಟಿನ ಷಟ್‌ಸ್ಥಲ ಕೃತಿಗಳೆನಿಸಿದರೆ, ವಿಶೇಷಾನುಭವ ಷಟ್‌ಸ್ಥಲ, ಪರಮೂಲಜ್ಞಾನ ಷಟ್‌ಸ್ಥಲ, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಜ್ಞಾನ ಷಟ್‌ಸ್ಥಲಸಾರ ಮೊದಲಾದವು ಅನೇಕ ವ್ಯಕ್ತಿಗಳ ವಚನಗಳಿಂದ ಮಿಶ್ರಗೊಂಡ ಷಟ್‌ಸ್ಥಲ ಕೃತಿಗಳೆನಿಸುತ್ತವೆ. ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾವಿಲಾಸಚಾರಿತ್ರ' ಷೋಡಶಸ್ಥಲ ಕ್ರಮಕ್ಕೆ ಉದಾಹರಣೆ ಎನಿಸಿದರೆ, ಮಹಾಲಿಂಗದೇವನ ಸೂಕ್ಷ್ಮ ಮಿಶ್ರಷಟ್‌ಸ್ಥಲ, ಚೆನ್ನಬಸವಣ್ಣನವರ ಮಿಶ್ರ ಷಟ್‌ಸ್ಥಲ ೩೬ ಸ್ಥಲಗಳ ಪರಿಕ್ರಮದ ಕೃತಿಗೆ ಉದಾಹರಣೆಯಾಗಿವೆ.

ಮಹಾಲಿಂಗದೇವ, ಜಕ್ಕಣಾರ್ಯ, ಸಿದ್ಧಲಿಂಗರ ಏಕೋತ್ತರ ಶತಸ್ಥಲಗಳು ನೂರೊಂದು ಸ್ಥಲದ ಕೃತಿಗಳಿಗೆ ಉದಾಹರಣೆ. ಇವುಗಳಿಂದ ಏಕೋತ್ತರ ಶತಸ್ಥಲ ಸಾರಾಮೃತ, ಏಕೋತ್ತರ ಶತಸ್ಥಲ ಬೊಲ್ಲಿ ಎಂಬ ಸಾರರೂಪದ ಕೃತಿಗಳು ಟೀಕಾಸಹಿತವಾಗಿ ಹುಟ್ಟಿಕೊಂಡಿವೆ.

ಕೇವಲ ಸ್ವರವಚನಗಳಿಂದ ಕಟ್ಟಿದ ಕಂಬಾಳ ಶಾಂತಮಲ್ಲೇಶನ ಗಣವಚನರತ್ನಾವಳಿ ಇನ್ನೂರ ಹದಿನಾರು ಸ್ಥಲಗಳನ್ನು ಅಳವಡಿಸಿಕೊಂಡ ಈಗ ದೊರೆತ ಏಕೈಕ ಕೃತಿ ಎನಿಸಿದೆ. ಮಹದ್ದೇವನ 'ವೀರಶೈವ ಚಿಂತಾಮಣಿ', ಜಟಾಶಂಕರದೇವನ ಚಿದ್ಭಸ್ಮ ಮಣಿಮಂತ್ರ ಮಹಾತ್ಮೆಯ ವಚನ, ಎಳಮಲೆಯ ಗುರುಶಾಂತದೇವನ ಅಷ್ಟಾವರಣದ ವಚನಗಳು ಅಷ್ಟಾವರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಿದ್ಧಪಡಿಸಿದ ಸಂಕಲನಗಳಿಗೆ ಮಾದರಿ ಎನಿಸಿದೆ. ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿಯ ಶಿವಯೋಗ ಚಿಂತಾಮಣಿ, ಚೆನ್ನವೀರಾರ್ಯನ ಸ್ವರವಚನಗಳಿಂದ ಕೂಡಿದ ಶಿವಯೋಗ ಪ್ರದೀಪಿಕೆ ಶಿವಯೋಗ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಕೃತಿಗಳಿಗೆ, ಭಕ್ತ್ಯಾನಂದ ಸುಧಾರ್ಣವ ಭಕ್ತಿಯನ್ನು, ಶೀಲಸಂಪಾದನೆ ಶೀಲವಿಷಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಸಿದ್ಧಪಡಿಸಿದ ಸಂಕಲನಗಳಿಗೆ ಉದಾಹರಣೆ ಎನಿಸಿವೆ.

ಆಚರಣೆಗೆ ಸಂಬಂಧಿಸಿದ ವಿಷಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಅನೇಕ ಸಂಕಲನಗಳು ರಚಿತವಾಗಿವೆ. ಅವುಗಳಲ್ಲಿ ಚೆನ್ನಂಜೇದೇವ, ಸಿದ್ಧವೀರಣ್ಣರ ಆಚರಣೆ ಸಂಬಂಧದ ವಚನಗಳು, ಶಂಕರದೇವನ ವಿರತಾಚರಣೆ ಶರಣಸಂಬಂಧದ ವಚನಗಳು, ಶಾಂತದೇವರ ಷಟ್ಪ್ರಕಾರ ಸಂಗ್ರಹ, ಗುಬ್ಬಿಮಲ್ಲಣ್ಣನ ಗಣಭಾಷಿತರತ್ನ ಮಾಲೆ, ಗುರುಸಿದ್ಧದೇವನ ಚಿದೈಶ್ವರ್ಯ ಚಿದಾಭರಣ, ಅಜ್ಞಾತ ಕರ್ತೃವಿನ ಸರ್ವಾಚಾರ ಸಾರಾಮೃತ ಸುಧೆ, ಸಣ್ಣಬರಹದ ಗುರುಬಸವರಾಜದೇವರ ಶರಣ ಚಾರಿತ್ರ್ಯದ ವಚನಗಳು, ಬೋಳಬಸವನ ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು ಮೊದಲಾದ ಕೃತಿಗಳು ಪ್ರಮುಖವೆನಿಸಿವೆ.

ಇತರ ಸ್ಥಲಕಟ್ಟಿನ ಕೃತಿಗಳಲ್ಲಿ ಅದ್ವೈತಾನಂದದ ವಚನಗಳು, ಲಿಂಗಚಿದಮೃತಬೋಧೆ, ಶರಣ ಮುಖಮಂಡನ, ಚಿತ್ಕ್ರಿಯಾಸಂಗ್ರಹ, ನಿರಸನದ ವಚನಗಳು, ವಚನಸಾರ, ಲಿಂಗಸಾವಧಾನದ ವಚನಗಳು, ಕ್ರಿಯಾಸಮರಸದ ವಚನಗಳು ಮೊದಲಾದವು ಸಮಾವೇಶಗೊಳ್ಳುತ್ತವೆ. ಇವುಗಳ ಸಂಯೋಜನೆಗಳಿಗೆ ಹಿನ್ನೆಲೆಯಾಗಿರುವ ತಾತ್ವಿಕ ಸಂಗತಿಯನ್ನೂ, ಇಲ್ಲಿನ ಸ್ಥಲಯೋಜನೆಯು ಹೊಂದಿರುವ ಆಶಯವನ್ನೂ ಇನ್ನೂ ಗುರುತಿಸಬೇಕಾಗಿದೆ.

ಈ ಸಂಕಲನ ಕೃತಿಗಳಲ್ಲಿ ಒಂದು ನಿಶ್ಚಿತ ತತ್ವ, ಅದಕ್ಕನುಗುಣವಾದ ಸ್ಥಲಯೋಜನೆ, ಸ್ಥಲಗಳಲ್ಲಿಯೇ ನೂತನ ಪರಿಕ್ರಮ, ಸ್ಥಲದಿಂದ ಸ್ಥಲಕ್ಕೆ ಸಾಗಿ ನಡೆಯುವಾಗ ಆದಿಯಲ್ಲಿ ವಿವರಣೆ ರೂಪದ ಸೂತ್ರ, ಕೃತಿಯ ಆದಿ ಅಂತ್ಯದಲ್ಲಿ ವೃತ್ತ, ಕಂದ, ಗದ್ಯ ಮೊದಲಾದ ಭಾಗಗಳಲ್ಲಿ ಸಂಕಲನಕಾರನ ವೈಯಕ್ತಿಕ ಸಂಗತಿಗಳು ಈ ಎಲ್ಲ ಅಂಶಗಳು ಸಮಾವೇಶಗೊಂಡು ಅವು ಸ್ವತಂತ್ರ ಕೃತಿಯ ಮೌಲ್ಯವನ್ನು ಪಡೆದುಕೊಂಡಿವೆ. ಬಿಡಿ ವಚನಗಳನ್ನು ಸರಳಗೊಳಿಸುವಲ್ಲಿ ಸಂಕಲನಕಾರ ತೋರಿದ ಜಾಣ್ಮೆ, ಮೆರೆದ ತಾತ್ವಿಕ ಪ್ರತಿಭೆ ಗಮನಾರ್ಹವೆನಿಸಿದೆ.

**ಸಂಪಾದನೆ:**

ಸಂಗ್ರಹ, ಸಂಕಲನಗಳಿಗಿಂತ ಭಿನ್ನವಾದ, ಅಷ್ಟೇ ಅಪೂರ್ವವೆನಿಸಿದ ನೂತನ ಪ್ರಯೋಗ ಸಂಪಾದನೆ. ಸಂಭಾಷಣೆ ರೂಪದಲ್ಲಿ ಶರಣರ ವಚನ-ಸ್ವರವಚನಗಳನ್ನು, ಅಲ್ಲಲ್ಲಿ ಕೃತಿಕಾರ ವಿರಚಿತ ವಿವರಣಗದ್ಯ, ವಚನ ಕೊಂಡಿಗಳನ್ನು ಕೂಡಿಸಿ ಹೆಣೆದ ಕೃತಿ ಈ ಸಂಪಾದನೆ. ಸಂಯೋಜಕನ ಶ್ರಮ, ಪಾಂಡಿತ್ಯ, ಪ್ರತಿಭೆ ಮೂರೂ ಇಲ್ಲಿ ಮುಪ್ಪುರಿಗೊಂಡು ಸಮಪ್ರಮಾಣದಲ್ಲಿ ಕೆಲಸ ಮಾಡಿರುವುದರಿಂದ ಇದು ಸೃಜನಕ್ಕೆ ಸೃಜನ, ಸಂಕಲನಕ್ಕೆ ಸಂಕಲನವಾಗಿ ತನ್ನ ವೈಶಿಷ್ಟ್ಯವನ್ನು ಮೆರೆದಿದೆ. ಸಂಕಲನಗಳಲ್ಲಿ ಮಧ್ಯ ಮಧ್ಯ ಸಂಕಲನಕಾರ ಗದ್ಯನಿರೂಪಣೆ, ಸೂತ್ರಗಳ ಮೂಲಕ ಕಾಣಿಸಿಕೊಳ್ಳುತ್ತಿದ್ದರೆ, ಇಲ್ಲಿ ಸಂಕಲನಕಾರನ ಜೊತೆ ಪಾತ್ರಗಳು ಪ್ರವೇಶಿಸಿ ವಚನಗಳ ಮೂಲಕ ಮಾತನಾಡುತ್ತವೆ. ಇದು ಭಾಗವತ ಮತ್ತು

ಪಾತ್ರಗಳನ್ನು ಸಂಯೋಜಿಸಿದ ಯಕ್ಷಗಾನ, ಪಾತ್ರ ಅಥವಾ ಗದ್ಯ ಮತ್ತು ವಚನಗಳನ್ನು ಸಂಯೋಜಿಸಿದ ಚಂಪೂ ತಂತ್ರವೆನಿಸಿದೆ. ತನ್ನ ನಾಟ್ಯ ಗುಣದಿಂದಾಗಿ ಮತ್ತು ಘಟನೆ, ಅವುಗಳ ಸಂಘಟನೆಯಿಂದಾಗಿ ಸಂಪಾದನೆ 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಮಾತನ್ನು ಮನಗಾಣಿಸುತ್ತದೆ. ಇದರ ಇನ್ನೊಂದು ಮುಖ್ಯ ಲಕ್ಷಣವೆಂದರೆ ಪ್ರಭುದೇವರನ್ನು ಕೇಂದ್ರ ವ್ಯಕ್ತಿಯನ್ನಾಗಿಟ್ಟುಕೊಂಡು ತಾತ್ವಿಕ ಚರ್ಚೆ ನಡೆಸಿದುದು. ಈ ಮಾದರಿಯಲ್ಲಿ ಹುಟ್ಟಿದ ಕೃತಿಗಳು ಶೂನ್ಯಸಂಪಾದನೆಗಳು.[೨] 'ಸಂಪಾದನೆ' ಎಂಬುದಕ್ಕೆ ಗಳಿಕೆ ಎಂಬ ಅರ್ಥದ ಜೊತೆಗೆ ಕರ್ತೃವಿನ ಮನಸ್ಸಿನಲ್ಲಿ ಸಂವಾದ ಎಂಬ ಅರ್ಥವೂ ಇದ್ದಂತೆ ತೋರುತ್ತದೆ. ಹೀಗಾಗಿ ಇದಕ್ಕೆ ಶೂನ್ಯದ ಗಳಿಕೆ, ಶೂನ್ಯವನ್ನು ಕುರಿತ ಸಂವಾದ ಎಂಬ ಎರಡು ಅರ್ಥಗಳನ್ನು ಹೇಳಬಹುದಾಗಿದೆ. (ತಮಿಳಿನಲ್ಲಿ ಶೂನ್ಯ 'ಸಂಭಾಷಣೆ' ಹೆಸರಿನ ವೀರಶೈವ ಪರಿಭಾಷಾ ಪದವಿರುವುದನ್ನು ಇಲ್ಲಿ ನೆನೆಯಬಹುದು). ವಚನಗಳ ಒಡಲಲ್ಲಿ (ಸ್ಪಂದಿಸುತ್ತಿದ್ದ ಸಂಬೋಧನೆ ಆತ್ಮಗತ, ಲೋಕಗತ) ಯನ್ನು ಗುರುತಿಸದೆ, ಅದನ್ನು ಸಂವಾದಕ್ಕೆ ತಿರುಗಿಸಲು ಸಾಧ್ಯವಿದೆಯೆಂಬುದನ್ನು ಕಂಡುಹಿಡಿದ ಪ್ರಥಮ ವ್ಯಕ್ತಿ ಶಿವಗಣಪ್ರಸಾದಿ ಮಹಾದೇವಯ್ಯ. ಬಿಡಿವಚನಗಳಿಂದ ಇಡೀ ಕೃತಿಯನ್ನು ಸಂವಾದ ಶೈಲಿಯಲ್ಲಿ ರೂಪಿಸುವ ಸೂಚನೆ ಇವನಿಗೆ ಹೊಳೆದುದೇ ಒಂದು ಶುಭ ಗಳಿಗೆ ಅದನ್ನು ಪ್ರೌಢರೀತಿಯಲ್ಲಿ ಎರಕಹೊಯ್ದುದೇ ಒಂದು ಅದ್ಭುತ ಪ್ರಯೋಗ. ಈತನ ಸಂಯೋಜಕ ಪ್ರತಿಭೆಯೇ ಒಂದು ಆಶ್ಚರ್ಯ.[೭೭]

ಈ ಬಗೆಯ ಸಂಪಾದನೆ ಕೋಲಶಾಂತಯ್ಯನಿಂದ ಆರಂಭವಾಗುವ ಸಕಲ ಪುರಾತನರ ವಚನಕಟ್ಟುಗಳಲ್ಲಿ ಸೃಷ್ಟಿಗೊಂಡು, ಶಿವಗಣ ಪ್ರಸಾದಿ ಮಹಾದೇವಯ್ಯನಿಂದ ಬೆಳವಣಿಗೆ ಹೊಂದಿ, ಹಲಗೆದೇವ ಗುಮ್ಮಳಾಪುರದ ಸಿದ್ಧಲಿಂಗರ ಮೂಲಕ ಪೋಷಣೆಗೊಂಡು ಗೂಳೂರು ಸಿದ್ಧವೀರಣ್ಣನಲ್ಲಿ ಪರಿಪೂರ್ಣತೆಯನ್ನು ಪಡೆದು ನಿಂತಿದೆ. ನೋಡಲಿಕ್ಕೆ ನಾಲ್ಕು ಕೃತಿಗಳೆನಿಸಿದರೂ ಒಂದರ ಮುಂದುವರಿಕೆ ಇನ್ನೊಂದು ಎಂಬಂತೆ ಇವು ಬೆಳೆದುಬಂದಿವೆ. ಮೊದಲ ಮೂರು ಸಂಪಾದನೆಗಳಲ್ಲಿನ ಕೊರತೆಗಳನ್ನು ನೀಗಿಸಿ ಮೊದಲಬಾರಿಗೆ ಪ್ರಕರಣ ವಿಭಜನೆ ಕಲ್ಪಿಸಿ, ಗೂಳೂರು ಸಿದ್ಧವೀರಣ್ಣ ತನ್ನ ಕೃತಿಯನ್ನು ಹೆಚ್ಚು ವ್ಯವಸ್ಥಿತ ಹಾಗೂ ಪರಿಪೂರ್ಣವೆನಿಸಿದ್ದಾನೆ. ಇವುಗಳನ್ನು ಆಧರಿಸಿ ಸುಖಸಂಪಾದನೆಯ ವಚನಗಳು, ಸಂಪಾದನೆಯ ಸಾರಾಮೃತ ಎಂಬ ಉಪಸಂಪಾದನೆಗಳು ಹುಟ್ಟಿಕೊಂಡಿವೆ. ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು, ಅನುಭಾವ ಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರ, ಶೀಲಸಂಪಾದನೆ ಎಂಬ ಕೃತಿಗಳ ಶೀರ್ಷಿಕೆಯಲ್ಲಿ ಸಂಪಾದನೆ ಎಂಬ ಪದ ಬಳಕೆಯಾಗಿದ್ದರೂ ಇವು ಸಂವಾದ ರೂಪದ ಕೃತಿಗಳಲ್ಲ. ಇಲ್ಲಿ 'ಸಂಪಾದನೆ' ಎಂಬ ಪದ 'ಗಳಿಕೆ' ಎಂಬರ್ಥದಲ್ಲಿ ಮಾತ್ರ ಬಳಕೆಯಾಗಿದೆ. ಕಾರಣ ಇವುಗಳನ್ನು ಸಂಪಾದನೆ ಗುಂಪಿಗೆ ಸೇರಿಸಲು ಬರುವಂತಿಲ್ಲ.

ಮೇಲೆ ವಿವರಿಸಿದ ಸಂಗ್ರಹ-ಸಂಕಲನ-ಸಂಪಾದನೆ ಈ ಮೂರು ಪ್ರಕಾರಗಳಿಗೆ ಅವುಗಳ ಮಹತ್ವ ಅವುಗಳಿಗಿದ್ದರೂ 'ಸಂಗ್ರಹ'ವೆಂಬುದು ಸಾಮಗ್ರಿಮುಖಿ, ಸಂಕಲನವೆಂಬುದು

ವಿವರಣಮುಖಿಯಾಗಿದ್ದರೆ,ಕೊನೆಯದಾದ ಸಂಪಾದನೆಯೆಂಬುದು ವಿವೇಚನಮುಖಿಯಾಗಿದೆ.[೧೫] ವೀರಶೈವ ಅನುಭಾವಿಗಳು ತಮ್ಮ ವಚನ ಸಂಕಲನ ಕೃತಿಗಳ ಮೂಲಕ ಈ ಮೂರೂ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿ ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ, ಹಾಗೆಯೇ ಕನ್ನಡ ಸಾಹಿತ್ಯ, ಭಾರತೀಯ ಸಾಹಿತ್ಯ ಚರಿತ್ರೆಗಳಲ್ಲಿ ಸಂಪಾದನ ಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವನ್ನು ದೊರಕಿಸಿಕೊಟ್ಟಿದ್ದಾರೆ. ಈ ಸಾಹಿತ್ಯದ ತಲಸ್ಪರ್ಶಿಯಾದ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

### ಅಡಿಟಿಪ್ಪಣಿಗಳು

೧. ಅಂಥವರಲ್ಲಿ ಡಾ.ಎಲ್. ಬಸವರಾಜು, ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಸ್. ಸುಂಕಾಪುರ, ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ.ಎಂ. ಕಲಬುರ್ಗಿ, ಡಾ. ವಿ. ಶಿವಾನಂದ, ಡಾ. ವೀರಣ್ಣ ರಾಜೂರ, ಡಾ. ಎಸ್. ವಿದ್ಯಾಶಂಕರ, ಶ್ರೀ ವಿ.ರು. ಕೊಪ್ಪಳ, ಶ್ರೀ ಎಸ್. ಶಿವಣ್ಣ, ಪ್ರೊ. ಆರ್. ರಾಚಪ್ಪ, ಡಾ.ವಿ.ಎಸ್. ಕಂಬಿ, ಶ್ರೀ ಪಿ.ಎಂ. ಗಿರಿರಾಜು, ಪ್ರೊ. ಜಿ.ಎ. ಶಿವಲಿಂಗಯ್ಯ ಪ್ರಮುಖರು.

೨. ವಿವರಗಳಿಗೆ ಬಸವಸ್ತೋತ್ರದ ವಚನಗಳು: ಡಾ. ಎಂ.ಎಂ. ಕಲಬುರ್ಗಿ, ಪ್ರಸ್ತಾವನೆ ನೋಡಿರಿ.

೩. ಇದು ಮುಂದೆ ಶೂನ್ಯಸಂಪಾದನೆಕಾರರಿಗೆ ಪ್ರೇರಣೆ ನೀಡಿರಬೇಕು.

೪. ತಾತ್ವಿಕ ವಚನಗಳು ಮತ್ತು ಬೆಡಗಿನ ವಚನಗಳನ್ನು ವಚನಕಾರರೇ ಚಿಂತನೆ ಮಾಡಿ ಬರೆದಿರಬೇಕು.

೫. ಚೆನ್ನಬಸವಣ್ಣನವರ ವಚನೈಕೋತ್ತರ ಶತಸ್ಥಲ: ಪ್ರೊ. ಜಿ.ಎ. ಶಿವಲಿಂಗಯ್ಯ, ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜ. ತೋಂಟದಾರ್ಯ ಮಠ, ಗದಗ.

೬. ಶಿವದಾಸ ಗೀತಾಂಜಲಿ:ಡಾ. ಎಲ್. ಬಸವರಾಜು, ಪೀಠಿಕೆ, ಪು. ೫೦ ಅ.ಟಿ.

೭. ಅದೇ

೮. ಕನ್ನಡ ಅಧ್ಯಯನ ಪೀಠದ ತಾ.ಪ್ರ. ೯೧೮

೯. ಅದೇ ಕಾ.ಪ್ರ. ೩೧೬೦

೧೦. ಇದಕ್ಕೆ ಆ ಕಾಲಕ್ಕೆ ನಡೆದ ವೈದಿಕ ಸಾಹಿತ್ಯ ಸಂಕಲನ-ವ್ಯಾಖ್ಯಾನ ಕಾರ್ಯ ಪ್ರೇರಣೆ ನೀಡಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

೧೧. ಇದಕ್ಕೆ ಚನ್ನಬಸವಣ್ಣನವರ 'ವಚನೈಕೋತ್ತರ ಶತಸ್ಥಲ' ಪ್ರೇರಕವಾಗಿದ್ದರೂ ಅದರಲ್ಲಿ ಕೇವಲ ಕಡಿಮೆ ಸಂಖ್ಯೆಯ ವಚನಗಳಿವೆ. ಇದರಲಿ ಅಧಿಕ ಸಂಖ್ಯೆಯ ವಚನ, ಜೊತೆಗೆ ಸ್ಥಲವೊಂದಕ್ಕೆ ಒಂದರಂತೆ ನೂರೊಂದು ಸ್ವರವಚನ, ಪ್ರತಿ ಸ್ಥಲದ ಆರಂಭದಲ್ಲಿ ಸೂತ್ರ ಇರುವುದು ವಿಶೇಷ.

೧೨. ಇದು ಡಾ. ವೀರಣ್ಣ ರಾಜೂರ ಅವರಿಂದ ಸಂಪಾದಿತವಾಗಿ ಗದುಗಿನ ಜಗದ್ಗುರು ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ.

೧೩. ಈ ಸ್ವರವಚನಗಳೆಲ್ಲ ಮಹಾಲಿಂಗದೇವನ ಕೃತಿಯಲ್ಲಿ ಸೇರಿದುವೇ ಆಗಿವೆ. ಈತನ ವಿಶೇಷತೆಯೆಂದರೆ ಅವುಗಳಿಗೆ ಟೀಕೆ ಬರೆದುದಾಗಿದೆ.

೧೪. ಇದರಲ್ಲಿ ೩೮ ಜನ ವಚನಕಾರರ ೪೮೪ ವಚನ, ೪೮೦ ಶ್ಲೋಕಗಳು ಅಳವಟ್ಟಿವೆ. ಆರಂಭದಲ್ಲಿ ಶ್ಲೋಕ ನಂತರ ವಚನಗಳನ್ನು ಜೋಡಿಸಲಾಗಿದೆ. ಇದಕ್ಕೆ ಪಾಲ್ಕುರಿಕೆ ಸೋಮನಾಥನ ಜ್ಯೋತಿರ್ಮಯ ಶಾಂಭವೀ ಜ್ಞಾನ ದೀಕ್ಷಾಬೋಧೆ' ಪ್ರೇರಣೆ ನೀಡಿರಬೇಕು.

೧೫. ಕನ್ನಡ ಅಧ್ಯಯನ ಪೀಠದ ತಾ. ಪ್ರ. ೨೬೯

೧೬. ಮುಕ್ತಿಕಂಠಾಭರಣ, ಅಲ್ಲಮಪ್ರಭು-ಸಿದ್ಧರಾಮನ ವಾದದ ವಚನಗಳು ಇದೇ ಮಾದರಿಯ ಕೃತಿಗಳು. ಇವು ಕೂಟವಚನಗಳನ್ನು ಸೇರಿಸಿಕೊಂಡವುಗಳಾಗಿವೆ.

೧೭. ಮಾರ್ಗ-೧: ಎಂ.ಎಂ. ಕಲಬುರ್ಗಿ ಪು. ೩೭೦-೭೧

೧೮. ಅದೇ. ೩೭೨*

---

* ಚೆನ್ನವೀರ : ಹಾರಕೂಡ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳವರ ಪಟ್ಟಾಧಿಕಾರ ಸ್ಮರಣ ಸಂಪುಟ-೧೯೯೬.

# ೩. ಸ್ವರವಚನಗಳ ಉಗಮ-ಸ್ವರೂಪ ಲಕ್ಷಣ

'ಸ್ವರವಚನ' ಶರಣರು ಕನ್ನಡ ಹಾಡುಗಬ್ಬ ಪರಂಪರೆಗೆ ಕೊಟ್ಟ ವಿಶಿಷ್ಟ ಕೊಡುಗೆ. ಇದರ ಉಗಮ-ವಿಕಾಸ, ಸ್ವರೂಪ-ಲಕ್ಷಣ-ಪರಂಪರೆ ಕುರಿತು ಈವರೆಗೆ ವ್ಯವಸ್ಥಿತವಾದ ಅಧ್ಯಯನ ನಡೆದಿಲ್ಲ. ತಾತ್ವಿಕ, ಸಾಮಾಜಿಕ, ಸಾಹಿತ್ಯಿಕ ಇತ್ಯಾದಿ ನೆಲೆಗಳಲ್ಲಿ ತಲಸ್ಪರ್ಶಿಯಾದ ವಿಚಾರ ವಿಮರ್ಶೆ ಹಾಗೂ ಮೌಲ್ಯಮಾಪನ ನಡೆದು ಇದರ ನಿಜವಾದ ಸ್ಥಾನಮಾನಗಳನ್ನು ಗುರುತಿಸಲಾಗಿಲ್ಲ. ಆದರೆ ಕೆಲವು ವಿದ್ವಾಂಸರು[೧] ನೇರವಾಗಿ ಮತ್ತೆ ಕೆಲವರು ಪ್ರಾಸಂಗಿಕವಾಗಿ ಈ ಕುರಿತು ಕೆಲವು ಸಂಗತಿಗಳನ್ನು ತಿಳಿಸಿರುವುದು; ಸ್ವಗವಚನಗಳ ಸಂಗ್ರಹ-ಪರಿಷ್ಕರಣ ಪ್ರಕಟಣ ಕಾರ್ಯ ನಡೆದು ಕೆಲವು ಕೃತಿಗಳು ಬೆಳಕಿಗೆ ಬಂದಿರುವುದು[೨] ಆಶಾದಾಯಕ ಸಂಗತಿಯಾಗಿದೆ. ಹೀಗೆ ಈವರೆಗೆ ವ್ಯಕ್ತಪಡಿಸಿದ ವಿದ್ವಾಂಸರ ಅಭಿಪ್ರಾಯಗಳನ್ನು ಹಾಗೂ ಪ್ರಕಟಿತ ಸ್ವರವಚನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಒಟ್ಟು ಸ್ವರವಚನ ಸಾಹಿತ್ಯದ ಉಗಮ-ವಿಕಾಸ, ಸ್ವರೂಪ-ಲಕ್ಷಣಗಳನ್ನು ಸ್ಥೂಲವಾಗಿ ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

**ಹೆಸರು:**

'ಸ್ವರವಚನ'ವು ಪದ, ಪದನು, ಸ್ವರಪದ, ಬೆಡಗಿನ ಸ್ವರಪದ, ಅನುಭಾವಪದ, ಸ್ವರಬೊಲ್ಲಿ, ಗೀತ, ವಚನ, ರಾಗ ಲಲಿತ ವಚನ, ಸ್ವರವಚನ ಎಂದು ವಿವಿಧ ನಾಮಾಂತರಗಳಿಂದ ಗುರುತಿಸಿಕೊಳ್ಳುತ್ತ ಬಂದಿದೆ.

ಮಹಾಲಿಂಗದೇವ (೧೪೩೦) ಮೊದಲಬಾರಿಗೆ ತನ್ನ ಏಕೋತ್ತರಶತಸ್ಥಲ ಮತ್ತು ಸೂಕ್ಷ್ಮ ಮಿಶ್ರಷಟ್‌ಸ್ಥಲ ಕೃತಿಗಳಲ್ಲಿ ಸ್ಥಲವೊಂದಕ್ಕೆ ಒಂದರಂತೆ ಬಳಸಿದ ಸ್ವರವಚನಗಳಿಗೆ 'ಆ ಸ್ಥಲದ ನಿರ್ದೇಶನದ ಪದನು' ಎಂದು ಕರೆಯುತ್ತಾನೆ. ಅದೇ ಕಾಲದ ಶಿವಗಣ ಪ್ರಸಾದಿ ಮಹಾದೇವಯ್ಯ ತನ್ನ ಶೂನ್ಯಸಂಪಾದನೆಯಲ್ಲಿ ವಚನಗಳ ಮಧ್ಯ ಸ್ವರವಚನಗಳನ್ನು ಬಳಸಿಕೊಂಡು ಅವುಗಳಿಗೆ 'ಪದಂಗಳು' ಎಂದು ಕರೆದಿದ್ದಾನೆ. ಅನಂತರ ಬಂದ ಮೂರು ಶೂನ್ಯಸಂಪಾದನೆಗಳಲ್ಲಿಯೂ[೩] 'ಪದಂಗಳು' ಎಂಬ ನಾಮನಿರ್ದೇಶನವೇ ಮುಂದುವರಿದಿದೆ. ಕೇವಲ ಸ್ವರವಚನಗಳಿಂದ ಸಂಕಲಿಸಿದ ಶಿವಯೋಗಪ್ರದೀಪಿಕೆಯಲ್ಲಿ ಗೀತ, ಸ್ವರಬೊಲ್ಲಿ, ಬೆಡಗಿನ ಸ್ವರಬೊಲ್ಲಿ ಎಂದು ಇದನ್ನು ಗುರುತಿಸಿದರೆ, ಗಣವಚನ ರತ್ನಾವಳಿಯಲ್ಲಿ ವಚನ,

ರಾಗ ಲಲಿತ ವಚನ, ಸ್ವರವಚನ ಎಂದು ಮೂರು ವಿಧವಾಗಿ ಹೆಸರಿಸಲಾಗಿದೆ. ಸ್ವರವಚನಗಳನ್ನು ಅಪ್ರಧಾನವಾಗಿ, ವಚನಗಳನ್ನು ಪ್ರಧಾನವಾಗಿ ಅಳವಡಿಸಿಕೊಂಡ ಪರಮಮೂಲ ಜ್ಞಾನ ಷಟ್‌ಸ್ಥಲ, ವೀರಶೈವ ಚಿಂತಾಮಣಿಗಳಲ್ಲಿ 'ವಚನ' ಎಂದು, ಶೀಲಸಂಪಾದನೆ, ಜ್ಞಾನಷಟ್‌ಸ್ಥಲಸಾರ, ಚಿದೈಶ್ವರ್ಯ ಚಿದಾಭರಣಗಳಲ್ಲಿ 'ಸ್ವರವಚನ' ಎಂದು, ಚೆನ್ನಬಸವಣ್ಣನವರ 'ಅನುಭಾವ ಷಟ್‌ಸ್ಥಲದ ವಚನಗಳು' ಕೃತಿಯ ಅಂತ್ಯಸ್ಥಲದ ಅಂತ್ಯದಲ್ಲಿ ಕೊಟ್ಟಿರುವ 'ಶಾಂತಮಲಹರಿ' ರಾಗದಲ್ಲಿರುವ ಒಂದು ಹಾಡಿಗೆ 'ಅನುಭಾವಪದ' ಎಂದು ಕರೆಯಲಾಗಿದೆ. ಮುಂದೆ ಬಂದ ನಿಜಗುಣಾದಿ ತತ್ವಪದಕಾರರ ಹಾಡುಗಳಿಗೆ 'ವಚನ'ಗಳೆಂದೇ ಗುರುತಿಸಲಾಗಿದೆ. ಬಿಡಿಯಾಗಿ ಹಸ್ತಪ್ರತಿಗಳಲ್ಲಿ ದೊರೆಯುವ ಕೆಲವು ಸ್ವರವಚನಗಳಿಗೆ ಹಣೆಯ ಮೇಲೆ 'ಸ್ವರಪದ' ಎಂದು ಬರೆದಿರುವುದು ಕಂಡುಬರುತ್ತದೆ.

ಬಸವಾದಿ ಶರಣರು ರಚಿಸಿದ ಅನುಭಾವ ಸಾಹಿತ್ಯಕ್ಕೆ ಒಟ್ಟಾಗಿ ಮೊದಲು 'ವಚನ' ಎಂದು ಕರೆಯುತ್ತಿದ್ದಂತೆ ಕಂಡುಬರುತ್ತದೆ.[೪] ಡಾ. ಎಂ.ಎಂ. ಕಲಬುರ್ಗಿ ಅವರು ಅಭಿಪ್ರಾಯ ಪಟ್ಟಂತೆ 'ವಚನ' ಎಂಬುದು ನಿರ್ದಿಷ್ಟ ರೂಪ (Form) ಇಲ್ಲವೆ ನಿರ್ದಿಷ್ಟ ವಸ್ತು (Content) ವನ್ನು ನಿರ್ದೇಶಿಸುವುದಿಲ್ಲ. ಅದು ಶುದ್ಧ ಆಚಾರ, ಶುದ್ಧ ವಿಚಾರಗಳಲ್ಲಿ ಅನ್ಯೋನ್ಯತೆಯನ್ನು ಸಾಧಿಸಿದವನ ಅಭಿವ್ಯಕ್ತಿ ಎಂಬುದನ್ನು ನಿರ್ದೇಶಿಸುತ್ತದೆ.[೫] ಹೀಗಾಗಿ ಇಂಥ ವ್ಯಕ್ತಿಗಳ ಅಭಿವ್ಯಕ್ತಿಗಳಾದ ಮುಕ್ತಕರೂಪದ ವಚನ, ರಾಗ ತಾಳ ಸಮನ್ವಿತವಾದ ಹಾಡುಗಳು, ಕಂದ, ತ್ರಿಪದಿ, ಷಟ್ಪದಿ, ಸಾಂಗತ್ಯ, ಕಾಲಜ್ಞಾನ-ಎಲ್ಲವನ್ನು 'ವಚನ' ಎಂದು ಕರೆದಿರುವುದು ವೇದ್ಯವಾಗುತ್ತದೆ. ಕಾಲಕ್ರಮದಲ್ಲಿ ಗದ್ಯಗಂಧಿಯಾದ ಮುಕ್ತಕ ರೂಪದ ವಚನಗಳಿಂದ ರಾಗ-ತಾಳ ಸಮನ್ವಿತವಾದ ರಚನೆಗಳನ್ನು ಬೇರ್ಪಡಿಸಿ, ಹಾಡು, ಗೀತ, ಸ್ವರಪದ, ಸ್ವರವಚನ ಎಂದು ಮುಂತಾಗಿ ಕರೆಯತೊಡಗಿದರೆಂದು ಕಾಣುತ್ತದೆ. ಅದರಲ್ಲಿಯೇ ಗೀತ, ಹಾಡು, ಪದ ಎಂದು ಸಾಮಾನ್ಯವಾಗಿ ಎಲ್ಲ ವಿಧದ ಹಾಡುಗಳಿಗೂ ಕರೆಯುವುದರಿಂದ ವಿಶಿಷ್ಟ ಭಾವ, ಭಾಷೆ, ರೂಪ-ಎಲ್ಲಕ್ಕೂ ಮಿಗಿಲಾಗಿ ಹೇಳಿದ ವ್ಯಕ್ತಿಯ ನಡೆನುಡಿಗಳ ಸಾಮರಸ್ಯದ ಹಿನ್ನೆಲೆಯಲ್ಲಿ ರಚಿತವಾದ ಶರಣರ ಹಾಡುಗಳನ್ನು 'ಸ್ವರವಚನ' ಎಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ. ಇದರಿಂದ 'ವಚನ'ದ ಅರ್ಥವನ್ನೂ, ಅದರಿಂದ ಭಿನ್ನವಾದ ರೂಪವನ್ನೂ ಈ ಹೆಸರಿನಲ್ಲಿ ಏಕಕಾಲಕ್ಕೆ ಸಮರ್ಥವಾಗಿ ಸಮೀಕರಿಸಿದಂತೆ ಆಗುತ್ತದೆ.

'ಸ್ವರವಚನ' ಎಂಬುದು 'ಸ್ವರ' ಮತ್ತು 'ವಚನ' ಎಂಬ ಎರಡು ಪದಗಳು ಸೇರಿ ಆದ ಸಮಸ್ತಪದ. 'ಸ್ವರ' ಎಂದರೆ ನಾದ, ಧ್ವನಿ ಎಂದು ಅರ್ಥ.[೬] ಸಂಗೀತ ಪರಿಭಾಷೆಯಲ್ಲಿ "ಸ್ವಕೀಯವಾಗಿ ರಂಜನೆಯನ್ನುಂಟುಮಾಡುವುದು; ಶ್ರುತಿಗೆ ಸರಿಯಾಗಿ ಹೊಂದತಕ್ಕುದಾಗಿಯೂ ಸ್ನಿಗ್ಧವಾಗಿಯೂ ಅನುರಣನಾತ್ಮಕವಾಗಿಯೂ ಇರುವುದು"[೭] ಎಂದು ಅರ್ಥೈಸಲಾಗುತ್ತದೆ. ಶ್ರುತಿಯಿಂದ ಸ್ವರ, ಸ್ವರದಿಂದ ರಾಗ ರೂಪಿತವಾಗಿವೆ. ಈ ರಾಗಬದ್ಧವಾದ ಶರಣರ ರಚನೆಯೇ 'ಸ್ವರವಚನ'. ಅಂದರೆ ರಾಗ-ತಾಳ ಸಮನ್ವಿತವಾಗಿ ಹಾಡಲು ಯೋಗ್ಯವಾದ ಪದ್ಯಪ್ರಕಾರ 'ಸ್ವರವಚನ' ಎಂಬ ಅರ್ಥವನ್ನು ಈ ಪದ ಪ್ರಕಟಿಸುತ್ತದೆ.

ಇನ್ನು 'ಸ್ವರವಚನ' ಎಂಬ ಈ ಪದವನ್ನು ಮೊದಲು ಟಂಕಿಸಿದವರು ಯಾರು? ಎಂಬ ಜಿಜ್ಞಾಸೆಗೆ ತೊಡಗಿದರೆ, ಸ್ವತಃ ಶರಣರೇ ಈ ಹೆಸರನ್ನು ರೂಪಿಸಿ, ರೂಢಿಗೊಳಿಸಿರಬಹುದಾಗಿದೆ. ಸೋಮೇಕಟ್ಟೆ ಚೆನ್ನವೀರಸ್ವಾಮಿಯ (೧೭೪೦) ಒಂದು ಸ್ವರವಚನದಲ್ಲಿ[೮] "ಸ್ವರವಚನವ ಪಾಡೆ ಸಮರಸವನು ಬೇಡೆ" ಎಂಬ ಮಾತು ಬರುತ್ತದೆ. ಇದು ಸ್ವತಃ ಕರ್ತೃವೇ ತನ್ನ ರಚನೆಗೆ ಸ್ವರವಚನವೆಂದು ಕರೆದುಕೊಂಡ, ಸದ್ಯಕ್ಕೆ ದೊರೆತ ಮೊದಲ ಉದಾಹರಣೆ. ಆದರೆ, ಸಂಕಲನಕಾರರಲ್ಲಿ ಈಪದವನ್ನು ಮೊದಲು ಬಳಸಿದವನು ಸು. ೧೬೦೦ರಲ್ಲಿದ್ದ ಕಂಬಾಳ ಶಾಂತಮಲ್ಲೇಶ.[೯]

ಮುಕ್ತಕ ರೂಪದ ವಚನಗಳಿಗೆ 'ಬೊಲ್ಲಿಯ ವಚನ' ಎಂದು, ಸ್ವರವಚನಗಳಿಗೆ 'ಸ್ವರಬೊಲ್ಲಿ' ಎಂದು ಕರೆಯುವುದರ ಮೂಲಕ ವಚನ ಮತ್ತು ಹಾಡುಗಳ ಭೇದವನ್ನು ಗುರುತಿಸಲು ಪ್ರಯತ್ನಿಸಿದುದೂ ಉಂಟು.[೧೦] ಆದರೆ ವಚನ-ಸ್ವರವಚನ ಎಂಬ ಪದಗಳಿಗಿರುವ ಸಾಮರಸ್ಯ, ಸಾರ್ಥಕತೆಗಳು ಇವುಗಳಿಗಿಲ್ಲ. ಕಾರಣ ಇನ್ನು ಮುಂದೆ ಮುಕ್ತಕರೂಪದ ಶರಣರ ರಚನೆಗಳನ್ನು 'ವಚನ' ಎಂದು, ಸ್ವರಸಹಿತವಾದ ಹಾಡುಗಳನ್ನು 'ಸ್ವರವಚನ' ಎಂದು ಖಚಿತವಾಗಿ ಬಳಸುವುದು ಯಥಾರ್ಥವೆನಿಸುತ್ತದೆ.

**ಉಗಮ-ವಿಕಾಸ:**

ಸ್ವರವಚನಗಳ ಉಗಮ ಎಂದು? ಯಾರಿಂದ? ಎಂಬ ವಿಷಯದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈವರೆಗೆ ಮೂರು ಬಗೆಯ ಅಭಿಪ್ರಾಯಗಳು ಮಂಡಿತವಾಗಿವೆ. ಅವುಗಳನ್ನು ಮೊದಲು ಉಲ್ಲೇಖಿಸಿ, ಈಚೆಗೆ ದೊರೆತ ಹೆಚ್ಚಿನ ಆಧಾರಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ಅಭಿಪ್ರಾಯಗಳ ಸತ್ಯಾಸತ್ಯತೆಯನ್ನು ವಿಮರ್ಶಿಸಿ, ಸ್ವರವಚನಗಳ ಉಗಮದ ಸ್ಪಷ್ಟ ಚಿತ್ರವನ್ನು ಕೊಡಲು ಪ್ರಯತ್ನಿಸುತ್ತೇನೆ.

ಡಾ. ಎಲ್. ಬಸವರಾಜು ಅವರು (೧೯೬೩) "ಇಡೀ ಭಾರತೀಯ ಸಾಹಿತ್ಯಕ್ಕೆ ವಚನವೆಂಬ ಅಭೂತಪೂರ್ವ ಕಾಣಿಕೆಯನ್ನು ಕೊಟ್ಟ ಶಿವದಾಸರು ತಮ್ಮ ಕಾಲಕ್ಕೆ ಅಥವಾ ತತ್ಪೂರ್ವಕ್ಕೆ ಕನ್ನಡದಲ್ಲಿಲ್ಲದಿದ್ದ ಹಾಡುಗಳನ್ನು ಬರೆಯಲೂ ಮೊದಲಿಗರಾದರು. ಶಿವಶರಣರು ಬರೆದ ಈ ಹಾಡುಗಳು ಪಲ್ಲವದಿಂದ ಕೂಡಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಗೇಯಕೃತಿಗಳು. ಮುಂದೆ ೧೫-೧೬ನೆಯ ಶತಮಾನಗಳಲ್ಲಿ ಹರಿದಾಸರು ಯಾವ ಕೀರ್ತನ ಸಾಹಿತ್ಯ ಪ್ರಕಾರದಿಂದ ಇಡೀ ದಕ್ಷಿಣ ಭಾರತದ ಸಂಗೀತ ಮತ್ತು ಸಾಹಿತ್ಯ ಪ್ರಪಂಚಗಳೆರಡರಲ್ಲೂ ಅದ್ವಿತೀಯ ಕೀರ್ತಿಯನ್ನು ಗಳಿಸಿದರೋ ಆ ಕೀರ್ತನ ಪ್ರಕಾರಕ್ಕೆ ೧೨ನೆಯ ಶತಮಾನದ ಬಸವಾದಿ ಶಿವದಾಸರ ಈ ಗೀತಾ (ಹಾಡುಗಳು)ಪ್ರಕಾರವು ಮೂಲವೂ ಮಾದರಿಯೂ ಆಗಿದ್ದವು.[೧೧]

"ಮಹಾಲಿಂಗನಾಗಲಿ, ಜಕ್ಕಣ್ಣನಾಗಲಿ ಬಸವಾದಿ ಪ್ರಮಥರ ವಚನ (ಹಾಡು)ಗಳನ್ನು ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು ಸ್ಥಲದ ಪರಿವಿಡಿಯಲ್ಲಿ ಜೋಡಿಸಿರುವರೇ

ಹೊರತು, ಆ ವಚನಗಳನ್ನಾಗಲಿ, ಆ ಹಾಡುಗಳನ್ನಾಗಲಿ ರಚಿಸಿದವರು ಅವರಲ್ಲ. ವಚನಗಳು ಹೇಗೆ ಬಸವಾದಿ ಶರಣರಿಂದ ರಚಿತವಾದುವೋ ಹಾಗೆಯೇ ಹಾಡುಗಳೂ ಆ ಬಸವಾದಿ ಪ್ರಮಥರಿಂದಲೇ ರಚಿತವಾದವು. ಅವನ್ನು ಸಂಕಲನ ಮಾಡಿ ಒಂದು ಕ್ರಮದಲ್ಲಿ ಜೋಡಿಸಿ ಅವುಗಳ ಅಭಿಪ್ರಾಯವನ್ನೂ ಆಯಾ ಸ್ಥಲದ ಸ್ವರೂಪವನ್ನೂ ಸ್ಪಷ್ಟಪಡಿಸುವುದಕ್ಕಾಗಿ ಪ್ರತಿಯೊಂದು ಸ್ಥಲದ ಮೊದಲಿಗೆ ಕೊಟ್ಟಿರುವ ಸೂತ್ರ (ಗದ್ಯ) ಮಾತ್ರ ಮಹಾಲಿಂಗ ಮತ್ತು ಜಕ್ಕಣ್ಣರು ರಚಿಸಿದುದು" ಎಂದು ಹೇಳಿ, ಏಕೋತ್ತರಶತಸ್ಥಲಕಾರರ ಒಕ್ಕಣೆ ಮತ್ತು ಜಕ್ಕಣ್ಣನ ಏಕೋತ್ತರಶತಸ್ಥಲಕ್ಕೆ ಬರೆದ ವ್ಯಾಖ್ಯಾನಕಾರರ ಹೇಳಿಕೆಗಳ ಆಧಾರದಿಂದ ತಮ್ಮ ಮಾತಿಗೆ ಸಮರ್ಥನೆಯನ್ನೊದಗಿಸಿದ್ದಾರೆ.[೧೨]

ಡಾ. ಎಲ್. ಬಸವರಾಜು ಅವರಿಗಿಂತ ಪೂರ್ವದಲ್ಲಿ (೧೯೪೯) ಪ್ರೊ. ಶಿ.ಶಿ. ಬಸವನಾಳ ಅವರು ಸರ್ಪಭೂಷಣರ 'ಕೈವಲ್ಲ ಕಲ್ಪವಲ್ಲರಿ' ಕೃತಿಯ ಪ್ರಸ್ತಾವನೆಯಲ್ಲಿ "ಹಾಡುಗಬ್ಬಗಳಿಗೆ ಮೊದಲಾದುದು ದಾಸಸಾಹಿತ್ಯದಿಂದಲೇ ಎಂದು (೧೪-೧೫ ಶತಮಾನ) ಸಾಮಾನ್ಯವಾಗಿ ಹೇಳುವುದುಂಟು. ಆದರೆ ಈ ಊಹೆಗೆ ಬಲವಾದ, ನಂಬಲರ್ಹವಾದ ಆಧಾರಗಳಾವವೂ ಇಲ್ಲ.... ಕನ್ನಡ ಸಾಹಿತ್ಯದ ಆರಂಭಕಾಲದಿಂದ ವೀರಶೈವ ಸಾಹಿತ್ಯದ ಉದಯದವರೆಗೆ ನಿಜವಾದ ಹಾಡುಗಬ್ಬಗಳು ನಮ್ಮ ಕಣ್ಣಿಗೆ ಬೀಳುವುದಿಲ್ಲವೆಂದೇ ಹೇಳಬಹುದು... ಹಾಡುಗಳ ರಚನೆಯಲ್ಲಿಯೂ ವೀರಶೈವ ಬರಹಗಾರರಿಗೇ ಅಗ್ರಸ್ಥಾನ ಸಲ್ಲುವುದು. ಅಷ್ಟೇ ಅಲ್ಲ ಈ ಕಾರ್ಯದಲ್ಲಿಯೂ ಬಸವಾದಿಗಳೇ ಪುರಸ್ಕರ್ತರು ಎಂಬುದು ಕರ್ನಾಟಕ ಕವಿಚರಿತೆಯನ್ನು ಅವಲೋಕಿಸುವುದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ." ಎಂದು ಚೆನ್ನಬಸವಣ್ಣ, ಪ್ರಭುದೇವರ ಮಂತ್ರಗೋಪ್ಯ, ಪದಮಂತ್ರಗೋಪ್ಯ, ಸಿದ್ಧರಾಮ, ಅಕ್ಕಮಹಾದೇವಿಯರ ತ್ರಿವಿಧಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಾರೆ.[೧೩]

ಡಾ. ಎಂ. ಚಿದಾನಂದಮೂರ್ತಿ (೧೯೭೫) ಅವರು "ವಚನಕಾರರಾದ ಬಸವ ಅಲ್ಲಮ ಅಕ್ಕಮಹಾದೇವಿ ಮುಂತಾದವರು ಬರೆದ ಹಾಡುಗಳು ಅವರ ಅಂಕಿತದೊಡನೆ ದೊರೆತಿವೆ. ಈ ಹಾಡುಗಳನ್ನು ಅವರೇ ರಚಿಸಿದರೆಂಬುದಕ್ಕೆ ಆಧಾರಗಳಿಲ್ಲ. ಅವರು ಬರೆದ ವಚನಗಳನ್ನು ಈಚಿನವರು ತಮ್ಮ ಅನುಕೂಲಕ್ಕಾಗಿ ಹಾಡುಗಳಿಗೆ ತಿರುಗಿಸಿಕೊಂಡರು ಎಂಬುದಕ್ಕೆ ಆಧಾರಗಳಿವೆ"[೧೪] ಎಂದು ಹೇಳಿ ಚೆನ್ನಬಸವಣ್ಣ ಮತ್ತು ಸಿದ್ಧರಾಮರ ಒಂದೊಂದು ವಚನಗಳನ್ನು ಉದಾಹರಿಸಿ, ಅವು ಹೇಗೆ ಹಾಡುಗಳಾಗಿ ಪರಿವರ್ತನಗೊಂಡವು ಎಂಬುದನ್ನು ತೋರಿಸಿ, "ಮೂಲತಃ ವಚನಗಳಾಗಿದ್ದುವನ್ನು ಈಚಿನವರು ಹಾಡಿಗೆ ತಿರುಗಿಸಿರುವುದು ಸ್ಪಷ್ಟ. ಇಂತಹ ಇನ್ನೂ ಹತ್ತಾರು ಉದಾಹರಣೆಗಳಿವೆ. ಎಂದರೆ ಹಾಡುಗಳು ಒಂದು ದೃಷ್ಟಿಯಿಂದ ಶಿವಶರಣರವೇ; ಇನ್ನೊಂದು ದೃಷ್ಟಿಯಿಂದ ಅವರವಲ್ಲ"[೧೫] ಎಂದು ಅಭಿಪ್ರಾಯಪಡುತ್ತಾರೆ. ಡಾ. ವಿ. ಶಿವಾನಂದ ಅವರು (೧೯೭೮) ಡಾ. ಎಲ್. ಬಸವರಾಜು ಅವರ ಅಭಿಪ್ರಾಯವನ್ನು ಅಲ್ಲಗಳೆದು, ಸ್ವರವಚನಗಳ ಪುನಶ್ಶೋಧನೆಗೆ ತೊಡಗಿ, ಅವು ಬಸವಾದಿ ಶರಣರಿಂದ

ರಚಿತವಾದುವಲ್ಲ, "ಶರಣರ ವಚನಗಳನ್ನು ಸ್ವರವಚನಗಳಲ್ಲಿ ದುಡಿಸಿಕೊಳ್ಳುವ ವಿಶಿಷ್ಟ ಪರಂಪರೆಗೆ ಏಕೋತ್ತರಶತಸ್ಥಲಕಾರರು ಆದ್ಯಪ್ರವರ್ತಕರೆನ್ನಬಹುದು. ಇದನ್ನೇ ಶೂನ್ಯಸಂಪಾದನೆ ಗ್ರಂಥಗಳು ಅನುಸರಿಸಿವೆ"[೧೬] "ಮೂಲತಃ ವಚನಗಳಲ್ಲಿದ್ದ ಲಯ-ಭಾವಗಳಿಗೆ ಸಂಗೀತದ ಲಕ್ಷ್ಯ-ಲಕ್ಷಣಗಳು ಪ್ರಾಪ್ತವಾಗಿ ಸ್ವರವಚನಸಾಹಿತ್ಯವೆಂಬ ಪ್ರಕಾರ ಸ್ವತಂತ್ರವಾಗಿ ೧೫ನೆಯ ಶತಮಾನದಲ್ಲಿ ಬೆಳೆದಿದೆ"[೧೭] ಎಂದು ತಿಳಿಸಿದ್ದಾರೆ.

ಡಾ. ಎಂ.ಎಂ. ಕಲಬುರ್ಗಿ ಅವರು (೧೯೮೬)ಈ ವಾದ-ವಿವಾದಗಳನ್ನು ಗಮನಿಸಿ "೧೨ನೆಯ ಶತಮಾನದ ಶಿವಶರಣರ ಹೆಸರಿನಲ್ಲಿ ಕಂಡುಬರುವ ಸ್ವರವಚನಗಳ ಪ್ರಾಮಾಣಿಕತೆಯ ಬಗ್ಗೆ ಕೆಲವು ವಿದ್ವಾಂಸರು ಸಂದೇಹ ವ್ಯಕ್ತಪಡಿಸುತ್ತಲಿದ್ದಾರೆ. ವಚನಗಳ ಸಾಹಿತ್ಯಗುಣ ಸ್ವರವಚನಗಳಲ್ಲಿ ಇಲ್ಲ. ವಚನಗಳ ಭಾವ-ಭಾಷೆಗಳ ಛಾಯೆ ಒಮ್ಮೊಮ್ಮೆ ಇವುಗಳಲ್ಲಿ ಕಂಡುಬರುವುದರಿಂದ, ಮೂಲ ವಚನಗಳನ್ನು ತರುವಾಯದವರು ಸ್ವರವಚನಗೊಳಿಸಿರಬಹುದು ಎಂಬುದು ಇವರ ವಾದ. ಮೊದಲ ನೋಟಕ್ಕೆ ಇದು ಸರಿ ಎನಿಸಬಹುದಾದರೂ ಇಲ್ಲಿ ಕೆಲವು ಅಂಶಗಳನ್ನು ಅವಶ್ಯ ಗಮನಿಸಬೇಕು" ಎಂದು ಹೇಳಿ ಈ ಕೆಳಗಿನ ಐದು ಅಂಶಗಳನ್ನು ಸೂಚಿಸಿ -ಇವುಗಳ ಹಿನ್ನೆಲೆಯಲ್ಲಿ ವಿದ್ವಾಂಸರು ಇವುಗಳ ಕರ್ತೃತ್ವ ಪ್ರಶ್ನೆಯನ್ನು ಇನ್ನೊಮ್ಮೆ ಪರಿಶೀಲಿಸುವುದು ಅವಶ್ಯ ಎಂದು ತಿಳಿಸುತ್ತಾರೆ.[೧೮]

೧. ಮೂಲತಃ ಸ್ವರವಚನ, ಗೀತಮಾಧ್ಯಮದ ಸಾಹಿತ್ಯ. ಗೀತಮಾಧ್ಯಮವನ್ನು ಬಿಟ್ಟು ಲೇಖನಮಾಧ್ಯಮದ ಮೂಲಕ ನೋಡಿದರೆ ಇವುಗಳ ಸತ್ವ-ಪರಿಣಾಮಗಳಲ್ಲಿ ಕೊರತೆ ಕಾಣುವುದು ಸಹಜ. ಈ ಮಾತು ದಾಸರ ಕೀರ್ತನೆಗಳಿಗೂ, ಜನಪದ ಹಾಡುಗಳಿಗೂ ಅನ್ವಯಿಸುತ್ತದೆ. ಹೀಗಾಗಿ ಇದರ ನಿಜವಾದ ಸ್ವರೂಪ ಕಾಣಬೇಕಾದರೆ ಓದಬಾರದು, ಹಾಡಬೇಕು. 'ನೋಡು ನೋಡು ನೋಡು ನೋಡು ನೋಡು ಲಿಂಗವೆ' ಎಂಬ ನೀಲಲೋಚನೆಯ ಸ್ವರವಚನವನ್ನು ಒಮ್ಮೆ ಓದಿಸಿ, ಒಮ್ಮೆ ಹಾಡಿಸಿ ಕೇಳಿದಾಗ ಈ ಮಾತಿನ ಸತ್ಯ ಹೊಳೆಯುತ್ತದೆ. ಅಂದರೆ ಒಂದು ಮಾಧ್ಯಮದ ಸಾಹಿತ್ಯವನ್ನು ಇನ್ನೊಂದು ಮಾಧ್ಯಮದಲ್ಲಿಟ್ಟು ನೋಡುವುದು ಸರಿಯಾದ ತೀರ್ಪು ಎನಿಸುವುದಿಲ್ಲ.

೨. ವಚನ ಸ್ವರವಚನಗಳ ವಸ್ತು ವೀರಶೈವ ತತ್ವ. ಕರ್ತೃ ವೀರಶೈವ ಶರಣರು. ಹೀಗಾಗಿ ಇವುಗಳ ಭಾವ ಭಾಷೆಗಳಲ್ಲಿ ಸಮಾನ ಅಂಶಗಳು ಕಂಡುಬರುವುದು ಸಹಜ.

೩. ಹರಿಹರನ ರಗಳೆಗಳಲ್ಲಿ ಬರುವ 'ಆಗಳಾಗಳಿನ ಸಂಗತಿಗಳಿಗೆ ಗೀತಂಗಳಂ ಪಾಡುತ್ತಂ' ಮೊದಲಾದ ಮಾತುಗಳು ವಚನಗಳಂತೆ ಸ್ವರವಚನಗಳಿಗೂ ಅನ್ವಯಿಸುತ್ತದೆ. ಇಲ್ಲಿಯ 'ಗೀತ' ಎಂಬ ಶಬ್ದ ವಚನಕ್ಕಿಂತ ಸ್ವರವಚನಕ್ಕೆ ಹೆಚ್ಚು ಒಪ್ಪುತ್ತದೆ. ಸಿದ್ಧರಾಮನು ಗೀತಗಳನ್ನು ಶುದ್ಧ ಭೈರವಿಯಲ್ಲಿ ಹಾಡಿದ ಉಲ್ಲೇಖಗಳು ಸಿದ್ಧರಾಮ ಪುರಾಣದಲ್ಲಿ ಬರುತ್ತವೆ.

೪. ಒಂದು ವೇಳೆ ಉತ್ತರಕಾಲೀನರು ವಚನಗಳನ್ನು ಸ್ವರವಚನಗಳನ್ನಾಗಿ ಮಾರ್ಪಡಿಸಿದ್ದರೆ ಪ್ರಮುಖ ಶರಣರ ವಚನಗಳನ್ನು ಮಾತ್ರ ಸ್ವರವಚನಗಳನ್ನಾಗಿಸುವುದು

ಸಹಜ. ಆದರೆ 'ಅಪ್ರಮುಖ' ಶರಣರ ಸ್ವರವಚನಗಳೂ ಸಿಗುತ್ತವೆ.

೫. ಕೆಲವರ ಹೆಸರಿನಲ್ಲಿ ವಚನಗಳು ಸಿಗುತ್ತಿಲ್ಲ; ಸ್ವರವಚನಗಳು ಮಾತ್ರ ಸಿಗುತ್ತವೆ.

ಮೇಲೆ ಉಲ್ಲೇಖಿಸಿದ ಐದು ಜನ ವಿದ್ವಾಂಸರಲ್ಲಿ ಪ್ರೊ. ಶಿ.ಶಿ. ಬಸವನಾಳ ಮತ್ತು ಡಾ. ಎಲ್. ಬಸವರಾಜು ಅವರು ೧೨ನೆಯ ಶತಮಾನದ ಬಸವಾದಿ ಶರಣರಿಂದಲೇ ಸ್ವರವಚನ ಹುಟ್ಟುಪಡೆಯಿತೆಂದು ಹೇಳಿದರೆ,[೧೯] ಡಾ. ಎಂ. ಚಿದಾನಂದಮೂರ್ತಿ ಮತ್ತು ಡಾ. ವಿ. ಶಿವಾನಂದ ಅವರು ನಂತರದವರು (ಏಕೋತ್ತರಶತಸ್ಥಲಕಾರರು) ವಚನಗಳನ್ನು ಸ್ವರವಚನಗಳನ್ನಾಗಿ ಪರಿವರ್ತಿಸಿದರು ಎಂದು ಹೇಳುವ ಮೂಲಕ ೧೨ನೆಯ ಶತಮಾನದ ಅದರ ಹುಟ್ಟನ್ನು ಅಲ್ಲಗಳೆದು ೧೫ನೆಯ ಶತಮಾನಕ್ಕೆ ಒಯ್ದು ನಿಲ್ಲಿಸುತ್ತಾರೆ. ಡಾ. ಎಂ.ಎಂ. ಕಲಬುರ್ಗಿ ಅವರು ಐದು ಅಂಶಗಳ ಹಿನ್ನೆಲೆಯಲ್ಲಿ ಅವರ ಅಭಿಪ್ರಾಯಗಳನ್ನು ಪುನರ್ ಪರಿಶೀಲಿಸಬೇಕೆಂದು ಸೂಚಿಸುತ್ತ, ೧೨ನೆಯ ಶತಮಾನದಲ್ಲಿ ಅದರ ಉಗಮ ಆಗಿರಬಹುದೆಂಬುದರತ್ತ ತಮ್ಮ ಒಲವನ್ನು ತೋರುತ್ತಾರೆ.

೧೯೮೧ರಲ್ಲಿ ಪ್ರಕಟವಾದ ಚೆನ್ನವೀರಾರ್ಯನ ಶಿವಯೋಗ ಪ್ರದೀಪಿಕೆಯ ಪ್ರಸ್ತಾವನೆಯಲ್ಲಿ ನಾನು ಡಾ. ಎಲ್. ಬಸವರಾಜು, ಡಾ. ಚಿದಾನಂದಮೂರ್ತಿ ಮತ್ತು ಡಾ.ವಿ. ಶಿವಾನಂದ ಅವರ ಈ ಅಭಿಪ್ರಾಯಗಳನ್ನು ವಿಮರ್ಶಿಸುತ್ತ ಸ್ವರವಚನಗಳ ಉಗಮ ೧೨ನೆಯ ಶತಮಾನದಿಂದಲೇ ಎಂಬ ನನ್ನ ಸ್ಪಷ್ಟ ಅಭಿಪ್ರಾಯವನ್ನು ಸಾಧಾರಪೂರ್ವಕ ತಿಳಿಸಿದ್ದೆ. ಈಗಲೂ ಅದೇ ನಿಲವಿಗೆ ನಾನು ಬದ್ಧನಾಗಿ, ಈಚೆಗೆ ದೊರೆತ ಇನ್ನಷ್ಟು ಆಧಾರಗಳನ್ನು ಸೇರಿಸಿಕೊಂಡು ಅದನ್ನು ಮತ್ತಷ್ಟು ಗಟ್ಟಿಗೊಳಿಸಲು ಪ್ರಯತ್ನಿಸುತ್ತೇನೆ.

ಚೆನ್ನವೀರಾರ್ಯನ (೧೬ಶ.) 'ಶಿವಯೋಗ ಪ್ರದೀಪಿಕೆ' ಮತ್ತು ಕಂಬಾಳ ಶಾಂತಮಲ್ಲೇಶ(೧೬೦೦)ನ 'ಗಣವಚನ ರತ್ನಾವಳಿ' ಕೇವಲ ಸ್ವರವಚನಗಳಿಂದ ಸಂಯೋಜಿಸಿದ ಎರಡು ಮಹತ್ವದ ಕೃತಿಗಳು. ಅವುಗಳಲ್ಲಿ ಬಸವಾದಿ ಶರಣರ ಸ್ವರವಚನಗಳು ಸಮಾವೇಶಗೊಂಡಿದ್ದು, ಅವುಗಳ ಕರ್ತೃಗಳು ಸಕಲ ಪುರಾತನರು ಎಂದು ತಿಳಿಸಲಾಗಿದೆ.

ಶಿವಯೋಗ ಪ್ರದೀಪಿಕೆಯ ಆದಿಯ ಪೀಠಿಕಾ ಸ್ವರಬೊಲ್ಲಿ ಎಂಬ ಷಟ್ಪದಿಯಲ್ಲಿ ಹೀಗೆ ಹೇಳಲಾಗಿದೆ:

ಶ್ರೀ ಮದ್ದೇಶಿಕ ಚೆನ್ನವೀರಾರ್ಯಂ
ಆ ಮಹಾ ಸಕಲಪುರಾತನರ ಗೀತನೆ
ನೇಮಿಸಿಯು ಸೂಚನಾರ್ಥ ಪದಂಗಳವಱಿಂ ಸ್ಥಲವಿಟ್ಟು।
ಈ ಮಹಿಯೊಳು ಪೊಸತೆನೆ ಸಂಗ್ರಹಿಸಿಯು
ಪ್ರೇಮದಿ ಶಿವಲಿಂಗದೇವಂಗೊಚಿದನು
ನಾಮವಿದರ ಶಿವಯೋಗಪ್ರದೀಪಿಕೆ ಶರಣರು ಅವಧರಿಸಿ॥

ಈ ಕೃತಿಯಲ್ಲಿ ೧೮ ಜನ ಶರಣರ ಒಟ್ಟು ೭೩ ಸ್ವರವಚನಗಳು ಸಂಗ್ರಹವಾಗಿವೆ.

ಅವರಲ್ಲಿ ೧೧ ಜನ ೧೨ನೆಯ ಶತಮಾನದ ಬಸವಾದಿ ಶರಣರಾದರೆ, ಉಳಿದ ೭ ಜನ ೧೫ನೆಯ ಶತಮಾನಕ್ಕೆ ಸೇರಿದ ಕರಸ್ಥಲ ನಾಗಿದೇವಾದಿ ನೂರೊಂದು ವಿರಕ್ತರು.

ಗಣವಚನ ರತ್ನಾವಳಿಯ ಆದಿ ಮತ್ತು ಅಂತ್ಯದ ಕಂದ, ಷಟ್ಪದಿಗಳಲ್ಲಿ ಹೀಗೆ ಹೇಳಲಾಗಿದೆ:

ಇಳೆಗೆ ಗಣವಚನ ರತ್ನಾ-
ವಳಿಯೆಂಬುದು ಪೆಸರಿದರ್ಕೆ ಗುಣ ವಾಗ್ಮಣಿ ಸಂ
ಕುಳದೊಳಗಾಯ್ದೊಂದೊಂದಂ
ವಿಳಸತ್ ಸೂತ್ರಂಗಳಿಂದೆ ಪವಣಿಸಿದುದರಿಂ (ಆದಿ -೩)

ಸ್ಥಳಮೊಂದೊಂದಕ್ಕೊಂದೊಂ
ದಳವಡೆ ಕಿಱಿದಱೊಳೆ ಸತ್ಪುರಾತರ ವಚನಾ
ವಳಿಯಿಂದೆ ಷೋಡಶೋತ್ತರ
ವಿಳಸ ದ್ವಿಶತ ಸ್ಥಳಂಗಳಿಂ ವಿರಚಿಸುವೆಂ (ಆದಿ -೭)

ಷೋಡಶಾಂತ ದ್ವಿಶತ ಸುಸ್ಥಲಂಗಳನೊಲ್ದು
ರೂಢಿಯ ಪುರಾತನರ ವಚನಂಗಳಿಂದರ್ಥ
ಗೂಡಿ ರಂಜಿಸುವಂತೆ ಸಂಗ್ರಹಂಗೈದು ಮಾಡುವೆ.... (ಆದಿ-೧೬)

ಬಸವೇಶ ನೀಲಾಂಬೆ ಸಿದ್ಧರಾಮಂ ಚನ್ನ
ಬಸವನಲ್ಲಮ ಕರಸ್ಥಲವೀರ ನಾಗಾರ್ಯ
ರಸಮ ಮಾಯಿದೇವಪ್ಪಣ್ಣ ಮಹದೇವಿ ದಾಸಯ್ಯ ಬಹುರೂಪಿ ಚೌಡಂ
ಮಿಸುಪ ಶಾಂತಯ್ಯನಾದಯ್ಯ ಬೋಳೇಶ ಗುರು
ಬಸವ ಶಂಕರದೇವ ನಾಗಾಂಬೆ ಮೊದಲಾದ
ರುಸುರ್ದ ನಾನಾ ರಾಗ ಲಲಿತ ವಚನಂಗಳಿಂ ರಚಿತಮಾಯ್ತೀ ಶಾಸ್ತ್ರವು (ಅಂತ್ಯ)

ಈ ಕೃತಿಯಲ್ಲಿ ಸು. ೬೨ ಜನ ಶರಣರ ೨೧೬ ಸ್ವರವಚನಗಳು ಸಂಗ್ರಹವಾಗಿವೆ. ಸು. ೧೫ ಜನ ಶರಣರು ೧೨ನೆಯ ಶತಮಾನದವರಾಗಿದ್ದಾರೆ.

ಈ ಎರಡೂ ಕೃತಿಗಳು, ಮೇಲಿನ ಹೇಳಿಕೆಗಳಿಂದ ತಮ್ಮಲ್ಲಿ ಅಳವಡಿಸಿಕೊಂಡ ಸ್ವರವಚನಗಳು ಬಸವಾದಿ ಶರಣರಿಂದ ರಚಿತವಾದುವೆಂದು ಸ್ಪಷ್ಟಪಡಿಸುತ್ತವೆ. ಅಲ್ಲದೆ, ಕೃತಿಕರ್ತೃಗಳೇ ಅವುಗಳನ್ನು ರಚಿಸಿದ್ದಾರೆಂದು ತಿಳಿಸುವುದಿಲ್ಲ.

ವಚನಗಳ ಜೊತೆಗೆ ಸ್ವರವಚನಗಳನ್ನೂ ಸಮ್ಮಿಶ್ರಗೊಳಿಸಿ ಸಂಯೋಜಿಸಲಾದ ಮಹಲಿಂಗದೇವನ ಏಕೋತ್ತರಶತಸ್ಥಲ, ಸೂಕ್ಷ್ಮಮಿಶ್ರಷಟ್‌ಸ್ಥಲ, ಶಿವಗಣಪ್ರಸಾದಿ ಮಹಾದೇವಯ್ಯಾದಿಯಾದ ನಾಲ್ಕು ಜನರ ಶೂನ್ಯಸಂಪಾದನೆಗಳು, ಚಿಕ್ಕವೀರಣ್ಣೊಡೆಯನ

ಪರಮಮೂಲಜ್ಞಾನಷಟ್‌ಸ್ಥಲ, ಮಹದ್ದೇವಯೋಗಿಯ ವೀರಶೈವ ಚಿಂತಾಮಣಿ, ಗುರುಶಂಕರಸ್ವಾಮಿಯ ಜ್ಞಾನಷಟ್‌ಸ್ಥಲಸಾರ ಮೊದಲಾದ ಕೃತಿಗಳಲ್ಲಿ ಮತ್ತು ಜಕ್ಕಣಾರ್ಯನ ಪದ ಏಕೋತ್ತರ ಶತಸ್ಥಲ ಕೃತಿಗೆ ಬರೆದ ಟೀಕೆಯಲ್ಲಿ ಸ್ವರವಚನಗಳನ್ನು ರಚಿಸಿದವರು ಬಸವಾದಿ ಶರಣರೆಂದು ಹೇಳಿದೆಯಲ್ಲದೆ, ಸಂಯೋಜಕರೇ ವಚನಗಳನ್ನು ಸ್ವರವಚನಗಳನ್ನಾಗಿ ಪರಿವರ್ತಿಸಿ ಸೇರಿಸಿಕೊಂಡಿದ್ದಾರೆ ಎಂದು ತಿಳಿಸಿಲ್ಲ.

ಡಾ. ಚಿದಾನಂದಮೂರ್ತಿ ಅವರು ಹೇಳುವಂತೆ ವಚನ ಭಾವವನ್ನೊಳಗೊಂಡ ಕೆಲವು ಸ್ವರವಚನಗಳು ದೊರಕಬಹುದು. ಆದರೆ ಈವರೆಗೆ ದೊರೆತ ಎಲ್ಲ ಸ್ವರವಚನಗಳಿಗೂ ಹಾಗೆ ಮೂಲವನ್ನು ಹುಡುಕಿಕೊಡುವುದು ಸಾಧ್ಯವಿಲ್ಲ. ವಚನಗಳನ್ನು ಬರೆದ ಪ್ರಯೋಗಶೀಲರಾದ ಶರಣರು ಅದೇ ಭಾವವನ್ನು ಹಾಡಿನ ರೂಪದಲ್ಲಿಯೂ ಅಳವಡಿಸಿ ಹೇಳಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ತನ್ನ ಒಂದು ವಿಚಾರವನ್ನು ಹಲವು ಮಾಧ್ಯಮಗಳಲ್ಲಿ ಒಬ್ಬನೇ ವ್ಯಕ್ತಿ ಹೇಳಿದ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಹಾಗೆಯೆ ಶರಣರು ವಚನಗಳಲ್ಲಿ ಹೇಳಿದ ತಮ್ಮ ವಿಚಾರಗಳನ್ನು ಇನ್ನಷ್ಟು ಪ್ರಚುರಗೊಳಿಸಲು, ಜನಪ್ರಿಯಗೊಳಿಸಲು ರಾಗ-ತಾಳಗಳಿಂದ ಕೂಡಿದ ಹಾಡಿನ ರೂಪದಲ್ಲಿ ಹೇಳಿರಬೇಕು.

ಇನ್ನು ವಚನಗಳ ಸಾಹಿತ್ಯಗುಣ ಸ್ವರವಚನಗಳಲ್ಲಿಲ್ಲ; ಕಾರಣ ಅವು ಬಸವಾದಿ ಶರಣರ ರಚನೆಗಳಲ್ಲ ಎಂಬ ವಾದ: ವಚನಗಳು ಮುಕ್ತಕ ರೂಪದ ಆಶುರಚನೆಗಳು. ಅವು ಒಂದು ಹೊತ್ತಿನ ಭಾವಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ಪ್ರತಿಭಾಸ್ಫುರಣಗಳು. ಹೀಗಾಗಿ ಕಾವ್ಯಸತ್ವ ಸಹಜವಾಗಿ ಅಲ್ಲಿ ಮೈದಳೆದು ನಿಂತಿದೆ. ಆದರೆ ಸ್ವರವಚನಗಳು ಗೀತಮಾಧ್ಯಮದಲ್ಲಿ ಅಭಿವ್ಯಕ್ತವಾದ, ತತ್ವಪ್ರಧಾನವಾದ ಉದ್ದೇಶಿತ ರಚನೆಗಳು. ಹೀಗಾಗಿ ಇಲ್ಲಿ ಕಾವ್ಯಸತ್ವ ಗೌಣವಾಗಿ ತೋರುತ್ತದೆ. ಆದರೆ ಅವನ್ನು ರಾಗಬದ್ಧವಾಗಿ ಹಾಡಿದರೆ ನಿಶ್ಚಿತ ಪರಿಣಾಮ ತಾನಾಗಿಯೇ ಸಾಧ್ಯವಾಗುತ್ತದೆ.

ಇನ್ನು ವಚನಗಳಂತೆ ಸ್ವರವಚನಗಳು ಆಯಾ ಶರಣರ ಹೆಸರಿನಡಿಯಲ್ಲಿ ಒಂದೆಡೆ ದೊರಕುವುದಿಲ್ಲ. ಅದಕ್ಕಾಗಿ ಅವು ಅವರವಲ್ಲ ಎಂಬ ವಾದ:ಹಾಗೆ ನೋಡಿದರೆ ಯಾರ ವಚನಗಳು ತಾನೆ ಮೊದಲು ಒಂದೆಡೆ ದೊರಕುತ್ತವೆ? ಶರಣರು ತಾವೇ ಬರೆದಿಟ್ಟ ಹಸ್ತಪ್ರತಿಗಳು ಸಿಕ್ಕುತ್ತವೆಯೆ? ಈ ಪ್ರಶ್ನೆಗಳಿಗೆ ಉತ್ತರ ಅಷ್ಟು ಸುಲಭವಲ್ಲ. ಶರಣರು ಮೊದಲು ತಮ್ಮ ಅನುಭವವನ್ನು ಬಿಡಿಬಿಡಿಯಾಗಿಯೇ ಅಭಿವ್ಯಕ್ತಪಡಿಸಿದರು; ಬಿಡಿ ಬಿಡಿಯಾಗಿಯೇ ಬರೆದಿಟ್ಟರು. ಅನಂತರ ನೂರೊಂದು ವಿರಕ್ತರ ಕಾಲದಿಂದೀಚೆಗೆ ಆ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಸಂಕಲಿಸಿ, ಸಂಪಾದಿಸಿ, ಟೀಕೆ-ಟಿಪ್ಪಣಿ, ವ್ಯಾಖ್ಯಾನ ಬರೆಯುವ ಕಾರ್ಯ ಆರಂಭವಾಯಿತು. ಹಾಗೆ ಸಂಕಲಿಸಿದ ಕಟ್ಟುಗಳು ಕೂಡ ಕೇವಲ ಹೆಚ್ಚು ವಚನಗಳನ್ನು ಬರೆದ ಹಿರಿಯ ವಚನಕಾರರವು ಮಾತ್ರ. ಕಡಿಮೆ ಸಂಖ್ಯೆಯ ವಚನಗಳನ್ನು ಬರೆದ ಶರಣರ ವಚನಗಳ ಇಂಥ ಕಟ್ಟುಗಳು ಸಿಕ್ಕುವುದಿಲ್ಲ. ಅವು ಬೇರೆ ಬೇರೆ ಸ್ಥಲಕಟ್ಟಿನ

ಕೃತಿಗಳಲ್ಲಿ ಹಿರಿಯ ವಚನಕಾರರ ವಚನಗಳ ಜತೆ ಸೇರಿಕೊಂಡವು. ಅವುಗಳನ್ನಾಯ್ದು ಒಂದೆಡೆ ಸೇರಿಸುವ ಕಾರ್ಯವನ್ನು 'ಸಕಲಪುರಾತನರ ವಚನಗಳು' ಕಟ್ಟುಗಳ ಕರ್ತೃಗಳು ಮಾಡಿದರು. ಅದರಂತೆ ಸಂಖ್ಯೆಯಲ್ಲಿ ಕಡಿಮೆಯಿದ್ದ, ಬಿಡಿಬಿಡಿಯಾಗಿ ದೊರೆತ ಈ ಸ್ವರವಚನಗಳನ್ನು ಒಬ್ಬೊಬ್ಬ ಶರಣರ ಹೆಸರಿನಡಿಯಲ್ಲಿ ಜೋಡಿಸುವ ಸಾಹಸ ಮಾಡದೆ, ಏಕೋತ್ತರಶತಸ್ಥಲ, ಸೂಕ್ಷ್ಮಮಿಶ್ರಷಟ್‌ಸ್ಥಲ, ವೀರಶೈವಚಿಂತಾಮಣಿ, ಪರಮಮೂಲ ಜ್ಞಾನಷಟ್‌ಸ್ಥಲ, ಶೂನ್ಯಸಂಪಾದನೆ, ಶಿವಯೋಗ ಪ್ರದೀಪಿಕೆ, ಗಣವಚನ ರತ್ನಾವಳಿ ಮೊದಲಾದ ಕರ್ತೃಗಳು ತಮ್ಮ ಆಶಯಕ್ಕನುಗುಣವಾಗಿ ಶರಣರ ವಚನಗಳ ಜೊತೆಗೆ, ಇಲ್ಲವೆ ಕೇವಲ ಸ್ವರವಚನಗಳನ್ನೇ ಅಳವಡಿಸಿಕೊಂಡು ಸ್ಥಲಕಟ್ಟಿನ ಕೃತಿಗಳನ್ನು ಸಿದ್ಧಪಡಿಸಿದರು. ಮುಂದೆ ನಿಜಗುಣ ಶಿವಯೋಗಿ ಮೊದಲಾದ ಅನುಭಾವಿಗಳು ಸ್ವರವಚನಗಳನ್ನೇ ಅಧಿಕ ಸಂಖ್ಯೆಯಲ್ಲಿ ಬರೆದು ಏಕವ್ಯಕ್ತಿ ಸ್ವತಂತ್ರ ಕೃತಿಗಳನ್ನು ನಿರ್ಮಿಸಿದರು.

ಈ ಎಲ್ಲ ಕಾರಣಗಳಿಂದ ಅವರವರ ಅಂಕಿತಗಳನ್ನು ಧರಿಸಿ, ಅವರ ಭಾವ-ಭಾಷೆ-ಆಶಯಗಳನ್ನು ಅಳವಡಿಸಿಕೊಂಡ ಈ ಸ್ವರವಚನಗಳ ಕರ್ತೃತ್ವವನ್ನು ಬೇರೆಯವರಿಗೆ ಆರೋಪಿಸದೆ, ಶರಣರಿಗೆ ಒಪ್ಪಿಸಿ, ವಚನಗಳಂತೆ ಸ್ವರವಚನಗಳೂ ೧೨ನೆಯ ಶತಮಾನದ ಶರಣರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ನೂತನ ಕೊಡುಗೆ ಎಂದು ಹೇಳುವುದು ಹೆಚ್ಚು ಸೂಕ್ತವೆನಿಸುತ್ತದೆ.

ಹಾಡು ಅಥವಾ ಗೀತ ಎಂಬ ಸಾಹಿತ್ಯ ಪ್ರಕಾರ ಅತಿ ಪ್ರಾಚೀನವಾದುದು. ಕನ್ನಡ ಸಾಹಿತ್ಯ ಗ್ರಂಥಸ್ಥರೂಪ ಪಡೆಯುವುದಕ್ಕಿಂತ ಪೂರ್ವದಲ್ಲಿಯೇ ಅದು ಜನಪದದಲ್ಲಿ ಹುಟ್ಟಿ ಕಂಠಸ್ಥವಾಗಿ ಬೆಳೆದುಬಂದಿದೆ. ಹೀಗಾಗಿ ಒಂದರ್ಥದಲ್ಲಿ ನಮ್ಮ ಜನಪದರ ಹುಟ್ಟಿನೊಂದಿಗೆ ಈ ಪ್ರಕಾರವು ಹುಟ್ಟುಪಡೆಯಿತೆಂದು ಸ್ಥೂಲವಾಗಿ ಹೇಳಬೇಕಾಗುತ್ತದೆ. ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖವಾದ ಪಾಡು, ಪಾಡುಗಬ್ಬ, ಒನಕೆವಾಡು, ಪಾಡುಗವಿತೆ, ಬೀದಿವಾಡು ಎಂಬ ಹೆಸರುಗಳು ಈ ಪ್ರಕಾರದ ಹಿಂದಿನ ಇರುವಿಕೆಯನ್ನು ಸೂಚಿಸುತ್ತವೆ. ಆದರೆ ಹಾಡುಗಳು ಲಿಖಿತರೂಪದಲ್ಲಿ ಪ್ರತ್ಯಕ್ಷವಾಗುವುದು ೧೨ನೆಯ ಶತಮಾನದಲ್ಲಿ. ಶಿವಶರಣರು ಗೈದ ಬಹುಮುಖ ಕ್ರಾಂತಿಗಳಲ್ಲಿ ಸಾಹಿತ್ಯಕ್ರಾಂತಿಯೂ ಒಂದು. ಆ ಕಾಲಕ್ಕೆ ಅನೇಕ ಹೊಸ ಪ್ರಕಾರಗಳು ಪ್ರಕಾಶಕ್ಕೆ ಬಂದವು. ಹಿಂದಿದ್ದ ಕೆಲವು ಹಳೆಯ ರೂಪಗಳು ಹೊಸಕಳೆಯನ್ನು ಪಡೆದವು. ಹಾಗೆ ತನ್ನ ಹಳೆಯ ಪರೆಯನ್ನು ಕಳಚಿ ಹೊಸ ಮೈಯನ್ನು ಪಡೆದುಕೊಂಡ ಪ್ರಕಾರಗಳಲ್ಲಿ ಹಿಂದೆ ಜನಪದದಲ್ಲಿ ಇದ್ದಿರಬಹುದಾದ - ಈ ಗೀತಪ್ರಕಾರವೂ ಒಂದು. ಮೊದಲು ಹಗುರಾದ ಶೃಂಗಾರ, ಅತಿಯಾದ ಅಶ್ಲೀಲಭಾವಗಳನ್ನು ಪ್ರಕಟಿಸಲು ತನ್ನನ್ನು ಒಡ್ಡಿಕೊಂಡ ಇದನ್ನು ಶರಣರು ತಮ್ಮ ಶಿವಾನುಭವ, ಶಿವತತ್ವ, ಶಿವಸ್ತುತಿಗಳಿಗೆ ಮಾಧ್ಯಮವನ್ನಾಗಿ ಮಾಡಿಕೊಂಡು ಅದಕ್ಕೊಂದು ಗಂಭೀರತೆಯನ್ನು, ಸಾತ್ವಿಕತೆಯನ್ನು ತಂದುಕೊಟ್ಟರು. ಅವರ ಶುದ್ಧ ಚಾರಿತ್ರ್ಯ, ನಡೆ-ನುಡಿ, ಆಚಾರ-ವಿಚಾರಗಳಿಗನುಗುಣವಾಗಿ

ಭಕ್ತಿ-ತತ್ತ್ವ-ಆಧ್ಯಾತ್ಮಾನುಭಾವಗಳನ್ನು ಅಳವಡಿಸಿಕೊಂಡು 'ಸ್ವರವಚನ' ಎಂಬ ಹೊಸ ಹೆಸರನ್ನು ಧರಿಸಿ ಅದು ತನ್ನ ಘನತೆ-ಗೌರವಗಳನ್ನು ಹೆಚ್ಚಿಸಿಕೊಂಡಿತು.

ಈಗ ಉಪಲಬ್ಧವಾದ ಸ್ವರವಚನ ಸಾಹಿತ್ಯವನ್ನು ಗಮನಿಸಿ ಹೇಳುವುದಾದರೆ - ಈಚೆಗೆ ಪ್ರಕಟವಾದ ಗಣವಚನರತ್ನಾವಳಿಯಲ್ಲಿ ಎಡೆಪಡೆದ -ಜೇಡರ ದಾಸಿಮಯ್ಯನಿಂದ ರಚಿತವಾದ ಒಂದು ಹಾಡೇ ಅತ್ಯಂತ ಪ್ರಾಚೀನವಾದುದೆಂದು ತಿಳಿದುಬರುತ್ತದೆ.[೨೦] ತರುವಾಯ ಸಕಲೇಶ ಮಾದರಸ, ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ, ಮಹಾದೇವಿಯಕ್ಕ, ನೀಲಮ್ಮ, ಆದಯ್ಯ, ಮಡಿವಳ ಮಾಚಿದೇವ ಮೊದಲಾದ ಸು. ೨೫ ಜನ ಹನ್ನೆರಡನೆಯ ಶತಮಾನದ ಶರಣರಿಂದ ೩೫೦ಕ್ಕೂ ಹೆಚ್ಚು ಸ್ವರವಚನಗಳು ಸೃಷ್ಟಿಯಾದುದು ಕಂಡುಬರುತ್ತದೆ.

ಹೀಗೆ ೧೨ನೆಯ ಶತಮಾನದ ಬಸವಾದಿ ಶರಣರಿಂದ ಕಿರುದೊರೆಯಾಗಿ ಆರಂಭವಾದ ಈ ಸ್ವರವಚನವಾಹಿನಿ, ಮುಂದೆ ನೂರೊಂದು ವಿರಕ್ತರ ಕಾಲದಲ್ಲಿ ಹೆದ್ದೊರೆಯಾಗಿ, ನಿಜಗುಣಾದಿ ತತ್ತ್ವಪದಕಾರರ ಕಾಲಕ್ಕೆ ಮಹಾಪೂರವಾಗಿ ಮುಂದುವರಿದು ಇಂದಿನವರೆಗೂ ಹರಿದುಬಂದಿದೆ. ಅದು ನಡೆದುಬಂದ ದಾರಿಯನ್ನು ಬಸವಯುಗ, ನೂರೊಂದು ವಿರಕ್ತರ ಯುಗ, ತೋಂಟದ ಸಿದ್ಧಲಿಂಗರ ಯುಗ, ನಿಜಗುಣರಾದಿ ತತ್ತ್ವಪದಕಾರರ ಯುಗ ಎಂದು ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು.

**ಸ್ವರೂಪ-ಲಕ್ಷಣ:**

ಆರಂಭದಲ್ಲಿ 'ಪಲ್ಲ' ಇರುವುದು ಸ್ವರವಚನದ ಪ್ರಥಮ ಲಕ್ಷಣ. ಇಡೀ ಪದ್ಯದ ಸಾರಸಂಗ್ರಹವೆನಿಸಿದ ಇದು ಪಲ್ಲ, ಪಲ್ಲವಿ, ಪಲ್ಲವ ಎಂದು ಬಳಕೆಯಾಗಿದೆ. ಇದು ಒಂದು ಪಾದದಿಂದ ೪ ಪಾದದ ವರೆಗಿನ ವ್ಯಾಪ್ತಿಯನ್ನು ಪಡೆದಿದೆ. ಎರಡು ಪಾದದ ನುಡಿಗಳಿದ್ದರೆ ಒಂದು ಪಾದದ ಪಲ್ಲ, ನಾಲ್ಕು ಪಾದದ ನುಡಿಗಳಿದ್ದರೆ ಹೆಚ್ಚಾಗಿ ಎರಡು ಪಾದದ ಪಲ್ಲ, ಕ್ವಚಿತ್ತಾಗಿ ನಾಲ್ಕು ಪಾದಗಳ ಪಲ್ಲ, ಷಟ್ಪದಿಯಾಗಿದ್ದರೆ ಅದರ ಅರ್ಧದಷ್ಟು ಅಂದರೆ ಮೂರು ಪಾದದ ಪಲ್ಲ ಇರುವುದುಂಟು. ಇದು ಹಾಡುವಾಗ ಪ್ರತಿಯೊಂದು ನುಡಿಯ ಅಂತ್ಯಕ್ಕೆ ಪುನರುಕ್ತಗೊಳ್ಳುತ್ತ ನಡೆಯುತ್ತದೆ. ಅನುಪಲ್ಲವಿ ಕಂಡುಬರುವುದಿಲ್ಲ.

ಪಲ್ಲದ ನಂತರ ನುಡಿಗಳಿರುತ್ತವೆ.[೨೧] ಅವುಗಳಿಗೆ 'ಪದ' ಎಂದು ಕರೆಯಲಾಗಿದೆ. ಅವುಗಳ ಸಂಖ್ಯೆ ಇಷ್ಟೇ ಇರಬೇಕೆಂಬ ಕಡ್ಡಾಯವಿಲ್ಲ. ಆದರೆ ಅತಿ ಕಡಿಮೆಯೆಂದರೆ ಮೂರು, ಅತಿ ಹೆಚ್ಚೆಂದರೆ-ಹಿರಿಯ ಮಂತ್ರಗೋಪ್ಯವನ್ನೂ ಸ್ವರವಚನವೆಂದು ಅಂಗೀಕರಿಸುವುದಾದರೆ- ೨೭ ನುಡಿಗಳಿರುತ್ತವೆ. ನುಡಿಗಳು ೩,೫,೭,೯,೧೧,೧೩,೧೫,೧೭,೧೯,೨೧,೨೩,೨೫,೨೭ ಹೀಗೆ ಬೆಸಸಂಖ್ಯೆಯಲ್ಲಿರುವುದು ಒಂದು ವಿಶೇಷ. ಒಂದು ಸ್ವರವಚನದಲ್ಲಿರುವ ಪ್ರತಿ ನುಡಿಯೂ ಒಂದೇ ಪ್ರಮಾಣದ ಚರಣ ಸಂಖ್ಯೆಯನ್ನು ಹೊಂದಿರುತ್ತದೆ. ಅವು ೨,೩,೪,೬ ಪಾದದ ವರೆಗೆ ಕಂಡುಬರುತ್ತವೆ. ಆದರೆ ನಾಲ್ಕು ಪಾದಗಳ ನುಡಿಗಳೇ ಅಧಿಕ. ನುಡಿಗಳಲ್ಲಿ ಆದಿಪ್ರಾಸ

ಕಡ್ಡಾಯ. ಅಂತ್ಯ ಪ್ರಾಸ ಕ್ವಚಿತ್ತಾಗಿ ಬರಬಹುದು. ಕೊನೆಯ ನುಡಿಯಲ್ಲಿ ಅಂಕಿತ ನಿತ್ಯ. ಕೆಲವು ಸಲ ಅದು ಪಲ್ಲವಿಯಲ್ಲಿಯೂ ಕಾಣಿಸಿಕೊಳ್ಳಬಹುದು.[೨೨] ಇದು ಆಯಾ ಸ್ವರವಚನಕಾರನು ಹೇಳುವ ಮಾತಿಗೆ ಸಾಕ್ಷೀಭೂತ ಇಷ್ಟದೈವವೆನಿಸಿದೆ. ಒಬ್ಬನೇ ವ್ಯಕ್ತಿಯ ಅಂಕಿತದಲ್ಲಿ ಕೆಲವು ಸಲ ವೈವಿಧ್ಯ ತೋರಬಹುದು.[೨೩]

ಸಾಮಾನ್ಯವಾಗಿ ಪ್ರತಿಯೊಂದು ಸ್ವರವಚನದ ಹಣೆಯ ಮೇಲೆ ರಾಗ-ತಾಳ ಸೂಚನೆ ಇರುತ್ತದೆ. ರಾಗ ಕಡ್ಡಾಯ. ತಾಳ ಸೂಚನೆ ಕೆಲವಕ್ಕೆ ಇರದೆ ಇರಬಹುದು. ಅಂಶಗಣ ಘಟಿತ ಛಂದೋಬಂಧಗಳಲ್ಲಿ ಕೇವಲ ರಾಗಸೂಚನೆ ಮಾತ್ರ ಇದ್ದು, ಮಾತ್ರಾಗಣ ಘಟಿತ ಛಂದೋಬಂಧಗಳಲ್ಲಿ ರಾಗ-ತಾಳ ಎರಡೂ ಕಡ್ಡಾಯವಾಗಿರುವುದು ಕಂಡುಬರುತ್ತದೆ. ಕೆಲವು ಸ್ವರವಚನಗಳಿಗೆ ರಾಗ-ತಾಳ ಸೂಚನೆ ಇಲ್ಲದೆಯೂ ಇರಬಹುದು. ಹೀಗೆಂದ ಮಾತ್ರಕ್ಕೆ ಅವು ರಾಗ-ತಾಳ ರಹಿತವಾದುವೆಂದು ಅರ್ಥವಲ್ಲ; ಹಸ್ತಪ್ರತಿಕಾರರು ಸೂಚಿಸದೆ ಬಿಟ್ಟಿರಬಹುದು; ಇಲ್ಲವೆ ಕರ್ತೃವೇ ಹಾಡುಗಾರರು ತಮಗೆ ಸರಿಕಂಡ ರಾಗ-ತಾಳಗಳಲ್ಲಿ ಹಾಡಿಕೊಳ್ಳಲಿ ಎಂದು ಬಿಟ್ಟಿರಬಹುದು.[೨೪] ಒಂದೇ ಹಾಡಿಗೆ ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಅಥವಾ ಸಂಕಲನಗಳಲ್ಲಿ ಬೇರೆ ಬೇರೆ ರಾಗ-ತಾಳಗಳ ಸೂಚನೆ ಕಂಡುಬರುವುದು ಈ ಮಾತಿಗೆ ನಿದರ್ಶನವೆನಿಸಿದೆ.

ಪರಮಮೂಲಜ್ಞಾನ ಷಟ್‌ಸ್ಥಲ, ಜ್ಞಾನಷಟ್‌ಸ್ಥಲಸಾರ ಕೃತಿಗಳಲ್ಲಿನ ಸ್ವರವಚನಗಳಿಗೆ ರಾಗ-ತಾಳ ಸೂಚನೆಯಿಲ್ಲ. ಶಿವಯೋಗ ಪ್ರದೀಪಿಕೆ, ಏಕೋತ್ತರ ಶತಸ್ಥಲ, ವೀರಶೈವ ಚಿಂತಾಮಣಿ ಕೃತಿಗಳಲ್ಲಿನ ಸ್ವರವಚನಗಳು ಹೆಚ್ಚಾಗಿ ರಾಗ-ತಾಳ ಎರಡನ್ನೂ ಹೊಂದಿವೆ. ಈಗ ದೊರೆತ ಸಂಕಲನಾಂತರ್ಗತ ಸು. ೩೫೦ ಸ್ವರವಚನಗಳಿಗೆ ಸು. ಒಂದು ನೂರು ರಾಗಗಳು ಬಳಕೆಯಾಗಿವೆ. ತಾಳಗಳ ಸಂಖ್ಯೆ ಸು. ೧೫. ಸ್ವರವಚನಗಳು ಹೆಚ್ಚಾಗಿ ಅಂಶಗಣಘಟಿತ ಮಟ್ಟುಗಳಾಗಿದ್ದು ಕರ್ನಾಟಕ ಸಂಗೀತದ ರಾಗ-ತಾಳಗಳನ್ನು ಅಳವಡಿಸಿಕೊಂಡಿವೆ.

ಸ್ವರವಚನಗಳ ವಸ್ತು ಹೆಚ್ಚಾಗಿ ವೀರಶೈವತತ್ತ್ವ. ಅಂದರೆ ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣ, ಶಿವಯೋಗಗಳಿಗೆ ಸಂಬಂಧಿಸಿದ್ದು. ಜೊತೆಗೆ ಲೋಕನೀತಿ, ಶಿವಸ್ತುತಿ, ಶರಣಸ್ತೋತ್ರ, ಸಮಾಜ ವಿಮರ್ಶೆಯೂ ಕಂಡುಬರುತ್ತದೆ. ೧೨ನೆಯ ಶತಮಾನದ ಶರಣರ ರಚನೆಗಳಲ್ಲಿ ತತ್ವಪ್ರತಿಪಾದನೆ ಪ್ರಧಾನವಾಗಿದ್ದರೆ, ಮುಂದೆ ಬಂದ ಅನುಭಾವಿಗಳ ರಚನೆಗಳಲ್ಲಿ ಹೆಚ್ಚಿನದಾಗಿ ಲೋಕನೀತಿ ಕಾಣಿಸುತ್ತದೆ.

ಭಾಷೆಯ ದೃಷ್ಟಿಯಿಂದ ಸ್ವರವಚನಗಳಲ್ಲಿ ನಡುಗನ್ನಡದ ಬಳಕೆ ಸಾಮಾನ್ಯವಾಗಿ ಕಂಡುಬಂದರೂ ಹನ್ನೆರಡನೆಯ ಶತಮಾನದ ಶರಣರ ರಚನೆಗಳ ಭಾಷೆಯಲ್ಲಿ ಬೆಡಗು, ಸಾಂಕೇತಿಕತೆ ಹೆಚ್ಚು; ಸರಳತೆ ಕಡಿಮೆ. ನೂರೊಂದು ವಿರಕ್ತರು, ನಿಜಗುಣಾದಿಗಳ ಕಾಲಕ್ಕೆ ಅದು ಶಿಷ್ಟ, ಸರಳವೆನಿಸುತ್ತದೆ. ಕೆಲವರಲ್ಲಿ ಇತ್ತ ಶಿಷ್ಟವೂ ಅಲ್ಲದ, ಅತ್ತ ದೇಶಿಯೂ ಅಲ್ಲದ ಎರಡರ ಮಿಶ್ರಭಾಷೆ ಕಂಡುಬರುತ್ತದೆ. ಕಡಕೋಳ ಮಡಿವಾಳಪ್ಪ, ಕೂಡಲೂರ

ಬಸವಲಿಂಗ ಶರಣರು ಮೊದಲಾದವರ ರಚನೆಗಳಲ್ಲಿ ಅಚ್ಚದೇಶೀ ಭಾಷೆಯ ಸೊಗಡು ಅಧಿಕವಾಗಿ ತೋರುತ್ತದೆ.

ರೂಪದದೃಷ್ಟಿಯಿಂದ ಷಟ್ಪದಿ, ಸಾಂಗತ್ಯ, ಅಕ್ಕರ, ಏಳೆ, ಚೌಪದಗಳಂಥ ಪರಿಚಿತ ದೇಶೀಮಟ್ಟುಗಳು, ಜೊತೆಗೆ ಇನ್ನೂ ಗುರುತಿಸಲಾಗದ ಅನೇಕ ನಾಲ್ಕು ಪಾದಗಳ -ಜಾನಪದ ಮಟ್ಟುಗಳು ಬಳಕೆಯಾಗಿರುವುದು ಕಂಡುಬರುತ್ತದೆ. ಹಾಗೆಯೇ ಕಣಿ, ಚಂದಮಾಮ ಪದ, ಕೋಲುಪದ, ಉಯ್ಯಾಲೆ, ಗೊಂದಲ, ಜೋಗುಳ, ಮಂಗಳಾರತಿಪದ ಧಾಟಿಗಳು ಸಮಾವೇಶಗೊಂಡಿವೆ.

ಛಂದಸ್ಸಿನ ಹಿನ್ನೆಲೆಯಲ್ಲಿ ನೋಡಿದರೆ, ಅಂಶಛಂದಸ್ಸು ಪ್ರಥಮ, ಮಾತ್ರಾಛಂದಸ್ಸು ದ್ವಿತೀಯ ಸ್ಥಾನದಲ್ಲಿ ನಿಂತರೆ, ಇವೆರಡರ ಮಿಶ್ರಣದಿಂದ ಕೂಡಿದ ವಿಶಿಷ್ಟ ಛಂದೋಲಯಗಳು, ಆಧುನಿಕ ಭಾವಗೀತದ ಲಯ-ಮಟ್ಟುಗಳನ್ನು ಹೋಲುವ ಅನೇಕ ಉದಾಹರಣೆಗಳು ಇಲ್ಲಿ ಕಂಡುಬರುತ್ತವೆ. ಬುದ್ಧಿ-ಭಾವಗಳ ಸಮನ್ವಯದಿಂದಾಗಿ ಸ್ವರವಚನಗಳಲ್ಲಿ ರಾಗರಮ್ಯತೆ, ತಾಳಗಮ್ಯತೆಗಳೆರಡೂ ಎದ್ದು ಕಾಣುತ್ತವೆ.

ಸಾಹಿತ್ಯ ದೃಷ್ಟಿಯಿಂದ ಮುಕ್ತಕರೂಪದ ವಚನಗಳಷ್ಟು ಸ್ವರವಚನಗಳು ಶ್ರೀಮಂತವೆನಿಸದಿದ್ದರೂ ಬೆಡಗು, ಸಾಂಕೇತಿಕತೆ, ಸರಳತೆ, ವಾಚ್ಯತೆಯಿಂದ ಕೂಡಿದ ಅವು ರಾಗ-ತಾಳಗಳ ರಮ್ಯತೆಯ ಮೂಲಕ ತಮ್ಮಲ್ಲಿದ್ದ ಕೊರತೆಯನ್ನು ತುಂಬಿಕೊಂಡು ಮನಸ್ಸನ್ನು ಹಿಡಿದು ನಿಲ್ಲಿಸುವ ಶಕ್ತಿಯನ್ನು ಪಡೆದಿವೆ. ಶಿವಸ್ತುತಿ, ಶರಣಸ್ತುತಿಪರವಾದ ರಚನೆಗಳು, ಶರಣಸತಿ-ಲಿಂಗಪತಿ ಭಾವವನ್ನು ಅಳವಡಿಸಿಕೊಂಡ ಸ್ವರವಚನಗಳು ಮಧುರ ಭಾವ-ಭಾಷೆ, ನೂತನ ಅಲಂಕಾರ, ಉಚಿತ ರಾಗ ರಸಗಳನ್ನು ಮೈಗೂಡಿಸಿಕೊಂಡು ಭಾವಗೀತಗಳಂತೆ ತೋರುತ್ತವೆ.

ಸಾಹಿತ್ಯ-ಸಂಗೀತಗಳ ಸಂಬಂಧದ ಹಿನ್ನೆಲೆಯಲ್ಲಿ ನೋಡಿದರೆ, ಸ್ವರವಚನಗಳಲ್ಲಿ ಸಾಹಿತ್ಯಕ್ಕೆ ಮುಖ್ಯವಾದ ಅರ್ಥಸ್ವಾರಸ್ಯ, ಸಂಗೀತಕ್ಕೆ ಮುಖ್ಯವಾದ ಸ್ವರಲಾಲಿತ್ಯ ಎರಡೂ ಮೇಳವಿಸಿ ನಡೆದಿರುವುದು ಕಂಡುಬರುತ್ತದೆ. ಸಾಹಿತ್ಯ ಸಂಗೀತಗಳ ಈ ಸಾಮರಸ್ಯ ಸ್ವರವಚನಗಳ ಒಂದು ಪ್ರಧಾನ ಲಕ್ಷಣವಾಗಿ ಪರಿಣಮಿಸಿದೆ.

ಈ ಪ್ರಬಂಧದ ಒಟ್ಟು ಫಲಿತಗಳನ್ನು ಕ್ರೋಢೀಕರಿಸಿ ಹೀಗೆ ಹಿಡಿದಿಡಬಹುದು:

೧. ಮುಕ್ತಕ ರೂಪದ ವಚನಗಳಿಂದ ಭಿನ್ನವಾದ, ಈ ರಾಗ-ತಾಳ ಸಮನ್ವಿತ ಹಾಡುಗಳನ್ನು 'ಸ್ವರವಚನ'ಗಳೆಂದು ಕರೆಯಲಾಗುತ್ತದೆ.

೨. ಸ್ವರವಚನಗಳ ಉಗಮ ೧೨ನೆಯ ಶತಮಾನದಲ್ಲಿ ಆಗಿದೆ. ಜೇಡರ ದಾಸಿಮಯ್ಯ ಮೊದಲ ವಚನಕಾರನಾದಂತೆ, ಮೊದಲ ಸ್ವರವಚನಕಾರನೂ ಆಗಿದ್ದಾನೆ.

೩. ಏಕೋತ್ತರಶತಸ್ಥಲಾದಿ ಸಂಕಲನಗ್ರಂಥಗಳಲ್ಲಿ ಸೇರಿದ ಸ್ವರವಚನಗಳು, ಕೆಲವು ವಿದ್ವಾಂಸರು ಊಹಿಸಿದಂತೆ ಸಂಕಲನಕಾರರು ಸೃಷ್ಟಿಸಿದುವಲ್ಲ; ವಚನಗಳನ್ನು ಅವರು ಸ್ವರವಚನಗಳನ್ನಾಗಿ

ಪರಿವರ್ತಿಸಲಿಲ್ಲ; ಅವು ಬಸವಾದಿ ಶರಣರ ಸ್ವತಂತ್ರ ರಚನೆಗಳು.

೪. ಹೀಗಾಗಿ ಬಸವಾದಿ ಶರಣರೇ ಹಾಡುಗಬ್ಬದ ಮೊದಲ ಪ್ರವರ್ತಕರು.

೫. ಸ್ವರವಚನ ಪರಂಪರೆ ೧೨ನೆಯ ಶತಮಾನದಿಂದ ಇಂದಿನವರೆಗೂ ನಿರಂತರವಾಗಿ ಸಾಗಿ ಬಂದಿದೆ. ಅದರಲ್ಲಿ ಬಸವಯುಗ, ನೂರೊಂದು ವಿರಕ್ತರಯುಗ, ತೋಂಟದ ಸಿದ್ಧಲಿಂಗರಯುಗ, ನಿಜಗುಣಾದಿ ತತ್ವಪದಕಾರರಯುಗ ಎಂದು ನಾಲ್ಕು ಪ್ರಮುಖ ಘಟ್ಟಗಳನ್ನು ಗುರುತಿಸಬಹುದು.

೬. ಪಲ್ಲ, ನುಡಿಗಳು, ಕೊನೆಯ ನುಡಿಯಲ್ಲಿ ಅಂಕಿತ, ಆದಿಯಲ್ಲಿ ರಾಗ-ತಾಳ ಸೂಚನೆ, ಬೆಡಗಿನ ಹಾಗೂ ಸರಳ ಭಾಷೆಯ ಬಳಕೆ, ಆದಿಪ್ರಾಸ, ದೇಶೀ ಛಂದೋಬಂಧ, ವೀರಶೈವ ತತ್ವ, ಲೋಕನೀತಿಪರವಾದ ವಸ್ತು, ಸಂಗೀತ ಸಾಹಿತ್ಯ ಸಾಮರಸ್ಯ ಇದು ಸ್ವರವಚನಗಳ ಸ್ಥೂಲ ಸ್ವರೂಪ-ಲಕ್ಷಣ. .

೭. ಈ ಸಾಹಿತ್ಯ ರಚಿಸುವುದರ ಮೂಲಕ ಕನ್ನಡ ಹಾಡುಗಬ್ಬ, ಕರ್ನಾಟಕ ಸಂಗೀತ, ದೇಶೀ ಛಂದಸ್ಸು, ತಾತ್ವಿಕ, ಆಧ್ಯಾತ್ಮಿಕ, ನೈತಿಕ ಬದುಕು- ಒಟ್ಟಾರೆ ನಮ್ಮ ಸಂಸ್ಕೃತಿ ಸಂವರ್ಧನೆ, ಶ್ರೀಮಂತಿಕೆಗಳಿಗೆ ಶರಣರು ನೆರವಾಗಿದ್ದಾರೆ.

ಹೀಗೆ ಕನ್ನಡದ ಒಂದು ಅಪೂರ್ವ ಸಾಹಿತ್ಯ ಪ್ರಕಾರವಾಗಿ ವಿಪುಲವಾಗಿ ಬೆಳೆದು ನಿಂತ ಸ್ವರವಚನ ಸಾಹಿತ್ಯ ಈಗ ಬೆಳಕು ಕಂಡದ್ದು ಕಾಲುಭಾಗ ಮಾತ್ರ. ಇನ್ನೂ ಮುಕ್ಕಾಲು ಭಾಗ ಹಸ್ತಪ್ರತಿಗಳಲ್ಲಿ, ಜನರ ಬಾಯಲ್ಲಿ ಉಳಿದಿದೆ. ಅದನ್ನು ಸಂಗ್ರಹಿಸಿ ಪರಿಷ್ಕರಿಸಿ ಪ್ರಕಟಿಸುವ, ಸಭೆ-ಸಮಾರಂಭ, ಭಜನೆಗಳಲ್ಲಿ ಹಾಡಿ, ಖ್ಯಾತ ಸಂಗೀತಗಾರರಿಂದ ಸ್ವರಜೋಡಣೆ ಮಾಡಿಸಿ, ಉತ್ತಮ ಗಾಯಕರಿಂದ ಹಾಡಿಸಿ, ಕ್ಯಾಸೆಟ್ ಮಾಡಿಸಿ ಪ್ರಚಾರಗೊಳಿಸುವ ಕಾರ್ಯ ತ್ವರಿತಗತಿಯಲ್ಲಿ ನಡೆಯಬೇಕಾಗಿದೆ.*

## ಅಡಿ ಟಿಪ್ಪಣಿಗಳು

೧. ಡಾ. ಎಲ್. ಬಸವರಾಜು, ಡಾ. ಚಿದಾನಂದಮೂರ್ತಿ, ಡಾ. ವಿ. ಶಿವಾನಂದ, ಡಾ. ಎಂ.ಎಂ. ಕಲಬುರ್ಗಿ, ಡಾ. ವೀರಣ್ಣ ರಾಜೂರ ಮುಂ.

೨. ಈ ದಿಸೆಯಲ್ಲಿ ಗದುಗಿನ ತೋಂಟದಾರ್ಯಮಠ, ಮೈಸೂರಿನ ಸುತ್ತೂರುಮಠ ಮಾಡುತ್ತಿರುವ ಕಾರ್ಯ ಗಮನಾರ್ಹವೆನಿಸಿದೆ.

೩. ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯರು ರಚಿಸಿದವು.

೪. ನೋಡಿ 'ವಚನ ಅಧ್ಯಯನ'- ವೀರಣ್ಣ ರಾಜೂರ ಪು. ೧೮ ಅ.ಟಿ. ೪.

೫. ಸ್ವರವಚನ ಸಾಹಿತ್ಯ: ಡಾ. ಎಂ.ಎಂ. ಕಲಬುರ್ಗಿ. (ಗೌರವ ಪು. ೨೦೬)

೬. ಸಂಕ್ಷಿಪ್ತ ಕನ್ನಡ ನಿಘಂಟು (ಕಸಾಪ) ಪು. ೯೦೮

೭. ಕರ್ನಾಟಕ ಸಂಗೀತ ಸುಧಾ : ವಿ. ರಾಮರತ್ನಂ ಮತ್ತು ವಿ.ಎಸ್. ಸಂಪತ್ಕುಮಾರಾಚಾರ್ಯ (ಮೈವಿವಿ ಪು. ೧೧)

೮. ಇತ್ತೀಚೆಗೆ ದೊರೆತ ಹತ್ತು ಸ್ವರವಚನಗಳು : ವೀರಾ (ಬ.ಪ. ೧-೧;೧೯೭೯) ಸ್ವವ. ೮ ನುಡಿ. ೩

* ಸ್ವರವಚನ ವಿಚಾರಸಂಕಿರಣ ಸಂಪುಟ(೧೯೯೭)

೯. ಗಣವಚನರತ್ನಾವಳಿ: ಸಂ. ಎಸ್. ಉಮಾಪತಿ, ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ ಗದಗ, ಇದಕ್ಕೂ ಪೂರ್ವದಲ್ಲಿ ರಚಿತವಾದ ಜಕ್ಕಣಾರ್ಯನ 'ಏಕೋತ್ತರ ಶತಸ್ಥಲ'ಕ್ಕೆ ಕೆಲವು ಹಸ್ತಪ್ರತಿಗಳಲ್ಲಿ 'ಏಕೋತ್ತರ ಶತಸ್ಥಲ ಸ್ವರವಚನ' ಎಂದು ಬರೆದುದು ಕಂಡುಬರುತ್ತದೆ. (ಪ್ರೌ. ದೇ. ಕಾ.ಕ.ಸಾ. ಪು. ೨೪೯)

೧೦. 'ನಂಜುಂಡ ಶಿವಾ' ಅಂಕಿತದ ರಚನೆಗಳಲ್ಲಿ ವಚನಗಳಿಗೆ 'ಬೊಲ್ಲಿಯ ವಚನ',ಹಾಡುಗಳಿಗೆ 'ಸ್ವರವಚನ' ಎಂದು ಕರೆಯಲಾಗಿದೆ. (ನಂಜುಂಡ ಶಿವಾ ಅಂಕಿತದಲ್ಲಿ ಹೊಸದಾಗಿ ದೊರೆತ ಕೆಲವು ವಚನಗಳು, ಬಸವ ಜರ್ನಲ್ ೩-೨); ಚೆನ್ನಬಸವಣ್ಣನವರ ೧೦ ವಚನಗಳನ್ನು ಆಯ್ದು ಸಂಗ್ರಹಿಸಿ ಅವುಗಳಿಗೆ 'ಬೊಲ್ಲಿಯ ವಚನ' ಎಂದು ಕರೆಯಲಾಗಿದೆ. (ಚೆನ್ನಬಸವಣ್ಣನವರ ಬೊಲ್ಲಿಯ ವಚನಗಳು - ಬ.ಪ. ೧೨-೫); ಶಿವಯೋಗ ಪ್ರದೀಪಿಕೆಯ ಆರಂಭದ ಷಟ್ಪದಿಗೆ 'ಪೀಠಿಕಾ ಸ್ವರಬೊಲ್ಲಿ' ಎಂದೂ ಅಂತ್ಯ ಗದ್ಯದಲ್ಲಿ 'ಬೆಡಗಿನ ಸ್ವರಪದಗಳು' ಎಂದೂ ಕರೆಯಲಾಗಿದೆ.

೧೧. ಶಿವದಾಸ ಗೀತಾಂಜಲಿ :ಪೀಠಿಕೆ ಪು. ೭೭

೧೨. ಅದೇ

೧೩. ಕೈವಲ್ಯ ಕಲ್ಪವಲ್ಲರಿ : ಪ್ರಸ್ತಾವನೆ ಪು. xviii-xx

೧೪. ವಚನ ಸಾಹಿತ್ಯ: ಪು. ೨೪೩

೧೫. ಅದೇ ಪು. ೨೪೬

೧೬. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ:ಪು. ೨೨೮

೧೭. ಶಿವದೀಪ್ತಿ: ಪು. ೧೨೮

೧೮. ಸ್ವರವಚನ ಸಾಹಿತ್ಯ:ಗೌರವ ಪು. ೨೦೬-೨೦೮

೧೯. ಪ್ರೊ. ತೀ.ನಂ. ಶ್ರೀಕಂಠಯ್ಯ ಅವರು ಮಹಾದೇವಿಯಕ್ಕನ ಹಾಡುಗಳನ್ನು ಗುರುತಿಸುತ್ತ ಸ್ವರವಚನಸೃಷ್ಟಿ ೧೨ನೆಯ ಶತಮಾನದಲ್ಲಿಯೇ ಆರಂಭವಾಯಿತು ಎಂಬ ಅರ್ಥ ಬರುವ ಅಭಿಪ್ರಾಯವನ್ನು ಡಾ. ಎಲ್. ಬಸವರಾಜು ಅವರಿಗಿಂತ ಪೂರ್ವದಲ್ಲಿಯೇ ವ್ಯಕ್ತಪಡಿಸಿದ್ದಾರೆ. (ಕಾವ್ಯ ಸಮೀಕ್ಷೆ:ಪು. ೧೧೯)

೨೦. ಇದು ದೊರಕುವುದಕ್ಕಿಂತ ಪೂರ್ವದಲ್ಲಿ ಸಕಲೇಶ ಮಾದರಸರ ಒಂದು ಸ್ವರವಚನವೇ ಮೊದಲನೆಯದೆಂಬ ಖ್ಯಾತಿಗೆ ಭಾಜನವಾಗಿತ್ತು.

೨೧. ಜಕ್ಕಣಾರ್ಯರ ಏಕೋತ್ತರಶತಸ್ಥಲದ ಹಾಡುಗಳಿಗೆ ಟೀಕೆಯನ್ನು ಬರೆದ ಶ್ರೀಗಿರೀಂದ್ರ ಸ್ವರವಚನವೆಂದರೇನು? ಎಂಬುದಕ್ಕೆ 'ನಾಲ್ಕಡಿಗಳಿಂದ ಒಪ್ಪಲ್ಪಟ್ಟ ವಚನಂಗಳು' ಎಂದು ಅರ್ಥ ಕೊಡುತ್ತಾನೆ. (ಪ್ರೌ.ಕಾ.ಕ. ಸಾ. ಪು. ೨೭೯)

೨೨. ಚನ್ನಬಸವಣ್ಣನ 'ಮಂಗಳ ಪಾಡುವೆ ಚನ್ನಸಂಗಮದೇವಂಗೆ' ಎಂಬ ಸ್ವರವಚನ ಹಾಗೂ ಮುದ್ವೀರ ಸ್ವಾಮಿಯ ಕೆಲವು ಸ್ವರವಚನಗಳನ್ನು ನೋಡಬಹುದು.

೨೩. ಉದಾ:ಕೂಡಲಸಂಗಮದೇವ, ಕೂಡಲಸಂಗ, ಕೂಡಲಸಂಗಮೇಶ, ಕೂಡಲಸಂಗಮನಾಥ ಇತ್ಯಾದಿ.

೨೪. ಹಾಡುಗಬ್ಬಗಳೆನಿಸಿದ ಷಟ್ಪದಿ, ಸಾಂಗತ್ಯ ಕಾವ್ಯಗಳ ಹಸ್ತಪ್ರತಿಗಳಲ್ಲಿ, ಕಾವ್ಯದ ಆರಂಭದಲ್ಲಿ 'ರಾಗ ತಮ್ಮಿಚ್ಛೆ', 'ರಾಗ ತನ್ನಿಚ್ಛೆ' ಎಂದು ಬರೆದುದು ಕಂಡುಬರುತ್ತದೆ. ಇದು ಹಾಡುಗಾರ ಯಾವುದೇ ರಾಗದಲ್ಲಿ ಹಾಡಬಹುದು ಎಂಬುದನ್ನು ಸೂಚಿಸುತ್ತದೆ. ಕೆಲವು ಸ್ವರವಚನಗಳಿಗೆ ರಾಗ ತಾಳ ಹಾಕದೆ ಬಿಟ್ಟಿರುವುದು ಇದೇ ಭಾವದಿಂದ ಎಂದು ಹೇಳಬಹುದು.

# ೪. ಗುರುಬಸವಾರ್ಯನ ಕೈವಲ್ಯ ಪದ್ಧತಿ

**ಕೈವಲ್ಯ:**

'ಕೈವಲ್ಯ' ಎಂಬುದು 'ಕೇವಲ' ಶಬ್ದದಿಂದ ನಿಷ್ಪನ್ನವಾದ ಸಂಸ್ಕೃತಪದ.[೧] ಇದಕ್ಕೆ ಕೈವಲ್ಯ, ನಿರ್ವಾಣ, ನಿಃಶ್ರೇಯಸ, ಅಮೃತ, ಅಕ್ಷರ, ಬ್ರಹ್ಮ ಅಪುನರ್ಭವ, ಅಪವರ್ಗ, ಮುಕ್ತಿ, ಮೋಕ್ಷ, ಮಹಾನಂದ ಎಂಬ ಹನ್ನೊಂದು ಪರ್ಯಾಯ ನಾಮಗಳಿವೆಯೆಂದು ಕೋಶಗಳು ತಿಳಿಸುತ್ತವೆ.[೨] ಸಂಸ್ಕೃತ ಹಾಗೂ ಕನ್ನಡ ನಿಘಂಟುಗಳಲ್ಲಿ ಈ ಪದಕ್ಕೆ ಸಂಪೂರ್ಣ ಏಕಾಂತ, ಮುಖ್ಯವಾದ ಸ್ಥಾನ, ನಿರ್ಮಲತೆ,[೩] ಶಾಶ್ವತಸುಖ,[೪] ನಿಸ್ಸಂಗತ್ವ, ಅದ್ವಿತೀಯತ್ವ, ಪೃಥಃ ಕರಣ, ವಿಂಗಡಿಸುವದು,[೫] ಆತ್ಯಂತಿಕ ದುಃಖನಾಶ ರೂಪವಾದ ಮೋಕ್ಷ, ಸಂಸಾರ ಬಂಧವಿಮೋಚನೆ,[೬] isolation, absalute unity,[೭] Final liberation of the soul from the body[೮] ಎಂದು ಮುಂತಾಗಿ ಅನೇಕ ಅರ್ಥಗಳನ್ನು ಕೊಡಲಾಗಿದೆ.

ಶರಣರು ಇದಕ್ಕೆ ಸಮರಸ, ಸಮರಸಭಾವ, ಸಾಮರಸ್ಯ, ಲಿಂಗಾಂಗ ಸಾಮರಸ್ಯ, ಬಯಲು, ಶೂನ್ಯ-ಎಂದು ಕರೆದಿದ್ದಾರೆ.

ಜೀವಾತ್ಮ-ಪರಮಾತ್ಮರ ಸ್ವರೂಪ-ಸಂಬಂಧಗಳ ಬಗೆಗೆ ನಮ್ಮಲ್ಲಿ ತುಂಬ ಪ್ರಾಚೀನ ಕಾಲದಿಂದಲೂ ಜಿಜ್ಞಾಸೆ ನಡೆಯುತ್ತ ಬಂದಿದೆ. ಇವೆರಡೂ ಭಿನ್ನ ಎಂದು ಕೆಲವು ದರ್ಶನಗಳು (ದ್ವೈತ) ತಿಳಿಸಿದರೆ, ಒಂದೇ ಪರವಸ್ತುವಿನ ಭಿನ್ನರೂಪಗಳು ಎಂದು ಮತ್ತೆ ಕೆಲವು ದರ್ಶನಗಳು (ಅದ್ವೈತ) ಪ್ರತಿಪಾದಿಸುತ್ತವೆ. ಭಿನ್ನ ಎಂದು ನಂಬಿದವರು ಜೀವಾತ್ಮನ ಅಂತಿಮ ಗುರಿ, ಆರಾಧನೆಯ ಮೂಲಕ ಪರಮಾತ್ಮನ ಸಾನಿಧ್ಯಸುಖವನ್ನು ಪಡೆಯುವುದು ಎಂದು ಹೇಳುತ್ತಾರೆ; ಆದರೆ ಅಭಿನ್ನ ಎಂದು ಭಾವಿಸಿದವರು, ಪರವಸ್ತುವಿನ ಒಂದು ಅಂಶವೇ ಆಗಿರುವ ಜೀವಾತ್ಮ ಸತ್‌ಸಾಧನೆಯ ಮೂಲಕ ಮತ್ತೆ ಅದರಲ್ಲಿ ಒಂದಾಗುವುದು ಎಂದು ತಿಳಿಸುತ್ತಾರೆ. ಇದನ್ನೇ ಶರಣರು 'ಲಿಂಗದಿಂದ ಬೇರೆಯಾದ ಅಂಗ ಷಟ್‌ಸ್ಥಲ ಸಾಧನೆಯ ಮೂಲಕ ಮತ್ತೆ ಲಿಂಗದಲ್ಲಿ ಒಂದಾಗುವುದು' ಎಂದು ಹೇಳುತ್ತಾರೆ. ಇದಕ್ಕೆ ಅವರು 'ಲಿಂಗಾಂಗ ಸಾಮರಸ್ಯ' ಎಂದು ಕರೆಯುತ್ತಾರೆ.

ಹೀಗೆ ಮೋಕ್ಷದ ಪರಿಕಲ್ಪನೆಯಲ್ಲಿ ಮತಭೇದಗಳಿದ್ದರೂ 'ಕೈವಲ್ಯ' ಎಂಬ ಪದ

ಬಳಕೆಯಲ್ಲಿ ಭಿನ್ನತೆ ತೋರದೆ, ಎಲ್ಲ ಧರ್ಮ-ದರ್ಶನಗಳಲ್ಲಿ ಅದು ಸಾರ್ವತ್ರಿಕ ಮನ್ನಣೆಯನ್ನು ಪಡೆದಿದೆ. ಹೀಗಾಗಿ "ಲೌಕಿಕ ಸಂಗದಿಂದ ದೂರನಿಲ್ಲುವ 'ನಿರ್ಲಿಪ್ತಸ್ಥಿತಿ' ಎನ್ನುವುದರಿಂದ ಹಿಡಿದು, ಆತ್ಮ-ಪರಮಾತ್ಮರುಗಳ ಸಮರಸದಿಂದ ಲಭಿಸುವ 'ನಿರ್ವಿಕಲ್ಪ ಸ್ಥಿತಿ' ಎನ್ನುವವರೆಗೂ ಇದರ ಅರ್ಥ ಬೆಳೆದಿದೆ. ಲಿಂಗಾಂಗ ಸಾಮರಸ್ಯದಿಂದ ಬರುವ ಆತ್ಯಂತಿಕ ಆನಂದ ಎಂದು ವೀರಶೈವ ಪರಿಭಾಷೆಯಲ್ಲಿ ಇದನ್ನು ಹೇಳಬಹುದು. ವಿಶಾಲವಾದ ಅರ್ಥದಲ್ಲಿ ಇದು ಆತ್ಮಾನುಭವ. ಈ ಅನುಭವಕ್ಕೆ ಕಾರಣವಾದ ಆತ್ಮಸಂಗಾತಿಯಾದ ಸಾಹಿತ್ಯ, "ಕೈವಲ್ಯ ಸಾಹಿತ್ಯ"[೯]

**ಕನ್ನಡದಲ್ಲಿ ಕೈವಲ್ಯ ಸಾಹಿತ್ಯ:**

ಕೈವಲ್ಯ ಪದದ ಬಳಕೆ ವೇದಕಾಲದಷ್ಟು ಪ್ರಾಚೀನ. ಶತ ಉಪನಿಷತ್ತುಗಳಲ್ಲಿ 'ಕೈವಲ್ಯೋಪನಿಷತ್ತು' ಎಂಬುದೂ ಒಂದೆಂದು ಹೇಳಲಾಗುತ್ತದೆ.[೧೦] ಸಂಸ್ಕೃತದಲ್ಲಿ ಕೈವಲ್ಯ ಕಲ್ಪಧ್ರುಮ, ಕೈವಲ್ಯತಂತ್ರ, ಕೈವಲ್ಯದೀಪಿಕಾ ಎಂಬ ಗ್ರಂಥಗಳು ಹುಟ್ಟಿಕೊಂಡಿವೆ.[೧೧]

ಕನ್ನಡದಲ್ಲಿ ಈ ಪದ ಮಂಗರಾಜ ನಿಘಂಟು, ಶ್ರಾವಕಾಚಾರ, ಕೌಶಿಕರಾಮಾಯಣ, ಬಸವಪುರಾಣ, ವಿವೇಕ ಚಿಂತಾಮಣಿ, ನಾನಾರ್ಥರತ್ನಾಕರ ಮೊದಲಾದ ಕೃತಿಗಳಲ್ಲಿ ಕಂಡುಬರುತ್ತದೆ.[೧೨] ವೀರಶೈವ ಸಾಹಿತ್ಯದಲ್ಲಿ ಇದು ಮೊದಲು ಕಾಣಿಸಿಕೊಳ್ಳುವುದು ಸ್ವರವಚನಗಳಲ್ಲಿ. ೧೨ನೆಯ ಶತಮಾನದ ವಚನಕಾರರಲ್ಲಿ ಮೋಳಿಗೆಯ ಮಹಾದೇವಿಯನ್ನು[೧೩] ಬಿಟ್ಟರೆ ಮತ್ತೆ ಬೇರಾರ ವಚನಗಳಲ್ಲಿಯೂ ಈ ಪದ ಬಳಕೆಯಾದುದು ಕಂಡುಬರುವುದಿಲ್ಲ. ಅಲ್ಲೆಲ್ಲ 'ಲಿಂಗಾಂಗ ಸಾಮರಸ್ಯ' ಎಂಬ ಪದವೇ ಹೆಚ್ಚು ಬಳಕೆಯಾಗಿದೆ. ಆದರೆ ಅದೇ ಕಾಲದ ಸಕಲೇಶ ಮಾದರಸ,[೧೪] ಹಾವಿನಾಳ ಕಲ್ಲಯ್ಯ[೧೫] ತಮ್ಮ ಸ್ವರವಚನಗಳಲ್ಲಿ, ಸಿದ್ಧರಾಮ ತನ್ನ ಅಷ್ಟಾವರಣ ತ್ರಿವಿಧಿಯಲ್ಲಿ[೧೬] ಮೊದಲ ಬಾರಿಗೆ 'ಕೈವಲ್ಯ' ಪದವನ್ನು 'ಲಿಂಗಾಂಗ ಸಾಮರಸ್ಯ' ಎಂಬ ಪದಕ್ಕೆ ಸಂವಾದಿಯಾಗಿ ಬಳಸಿದುದು ಕಂಡುಬರುತ್ತದೆ. ಈ ಪದದ ಬಳಕೆಗೆ ಹೆಚ್ಚು ವ್ಯಾಪ್ತಿ ಮತ್ತು ಜನಪ್ರಿಯತೆಯನ್ನು ತಂದುಕೊಟ್ಟು, 'ಕೈವಲ್ಯ ಸಾಹಿತ್ಯ' ಎಂಬುದು ಕನ್ನಡದ, ಹಾಗೆಯೇ ವೀರಶೈವದ ಒಂದು ವಿಶಿಷ್ಟ ಭಾಗವಾಗಿ ಗುರುತಿಸಿಕೊಳ್ಳುವಂತೆ ಮಾಡಿದವರು ನಿಜಗುಣ ಶಿವಯೋಗಿಗಳು. ಅವರ 'ಕೈವಲ್ಯ ಪದ್ಧತಿ' ಎಂಬ ಸ್ವರವಚನಗಳ (ತತ್ವಪದಗಳ) ಗ್ರಂಥದ ಮಾದರಿಯಲ್ಲಿ ಮುಂದೆ ಅನೇಕ ಕೃತಿಗಳು ಹುಟ್ಟಿಕೊಂಡವು. ಅವುಗಳನ್ನು ಕೆಳಗಿನಂತೆ ಹೆಸರಿಸಬಹುದು.

ಕೈವಲ್ಯ ಪದ್ಧತಿ: ನಿಜಗುಣ ಶಿವಯೋಗಿ (ಸ್ವರವಚನಗಳು)
ಕೈವಲ್ಯ ಕಲ್ಪವಲ್ಲರಿ: ಸರ್ಪಭೂಷಣ ಶಿವಯೋಗಿ (ಸ್ವರವಚನಗಳು)
ಕೈವಲ್ಯ ದರ್ಪಣ: ಬಾಲಲೀಲಾಮಹಾಂತ ಶಿವಯೋಗಿ (ಸ್ವರವಚನಗಳು)
ಕೈವಲ್ಯ ಪದ್ಧತಿ: ಷಡಕ್ಷರದೇವ (ಯಕ್ಷಗಾನ)[೧೭]

ಕೈವಲ್ಯ ಸೋಪಾನ: (?)[೧೮]
ಕೈವಲ್ಯ ನವನೀತ: ಅಮಾತೆಪ್ಪ ದೇವದುರ್ಗ[೧೯]
ಕೈವಲ್ಯ ಪದಗಳು: ಸೋಮೇಕಟ್ಟೆ ಕರಿವೃಷಭೇಂದ್ರಸ್ವಾಮಿ,
ಕೈವಲ್ಯ ಸೋಪಾನ ನಾಮ್ಯೆಕೋತ್ತರ ಶತಸ್ಥಲ; ಇಮ್ಮಡಿ ಮುರಿಗಾ ಗುರುಸಿದ್ಧ
ಕೈವಲ್ಯಸಾರ (ಮಗ್ಗೆಮಾಯಿದೇವ)ದ ಟೀಕೆ; ವಿರಕ್ತತೋಂಟದಾರ್ಯ
ಕೈವಲ್ಯಾನ್ವಯಸಾರ: ಅವಧೂತ ಶಿವಯೋಗಿ[೨೦]

ಇವು 'ಕೈವಲ್ಯ' ಎಂಬ ಪದವನ್ನು ಶೀರ್ಷಿಕೆಯಲ್ಲಿಯೇ ವಿಶೇಷಣ ರೂಪದಲ್ಲಿ ಸೇರಿಸಿಕೊಂಡು ಹುಟ್ಟಿಕೊಂಡ ಕೃತಿಗಳಾದರೆ, ಇನ್ನೂ ಅನೇಕ ಕೃತಿಗಳು ಹೆಸರಿನಲ್ಲಿ 'ಕೈವಲ್ಯ' ಎಂಬ ಪದವಿಲ್ಲದಿದ್ದರೂ ಆಶಯದಲ್ಲಿ ಇದೇ ಭಾವವನ್ನು ತುಂಬಿಕೊಂಡು ರಚನೆಗೊಂಡಿವೆ. ಅವುಗಳನ್ನು ಹೀಗೆ ಹೆಸರಿಸಬಹುದು.

ಮುಪ್ಪಿನ ಷಡಕ್ಷರಿಯ ಸುಬೋಧಸಾರ, ಘನಮಠ ಶಿವಯೋಗಿಯ ಭಕ್ತಿಸುಧಾಸಾರ, ಮೈಲಾರ ಬಸವಲಿಂಗ ಶರಣನ ಶಿವಾನುಭವದರ್ಪಣ, ಕೆಸ್ತೂರ ದೇವರ ಸ್ವರವಚನಗಳು, ಕೂಡಲೂರ ಬಸವಲಿಂಗ ಶರಣರ ಸ್ವರವಚನಗಳು, ಜಿಗುನಿ ಮರುಳದೇವರ ಸ್ವರವಚನಗಳು, ಶಂಕರದೇವರ ಸ್ವರವಚನಗಳು, ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು, ಮರಿ ಶಾಂತ ಬಸವೇಶ್ವರನ ಸ್ವರವಚನಗಳು, ಕಡಕೋಳ ಮಡಿವಾಳಪ್ಪನ ಸ್ವರವಚನಗಳು, ಗುರುಬಸವಾರ್ಯನ ಸ್ವರವಚನಗಳು, ಇಮ್ಮಡಿ ಮುರಿಗಾಗುರುಸಿದ್ಧಸ್ವಾಮಿಗಳ ಸ್ವರವಚನಗಳು, ಮೊಗೆಯ ಪ್ರಭುದೇವನ ಸ್ವರವಚನಗಳು, ರಾಮಪುರದ ಬಕ್ಕಪ್ಪಯ್ಯನ ಸ್ವರವಚನಗಳು, ಇತ್ಯಾದಿ.[೨೧]

ಇವುಗಳಲ್ಲಿ ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮತ್ತು ಬಾಲಲೀಲಾ ಮಹಾಂತ ಶಿವಯೋಗಿಗಳ ಕೃತಿಗಳ ಮಾದರಿಯಲ್ಲಿ ರಚನೆಗೊಂಡ ಮತ್ತೊಂದು ನೂತನ ಕೃತಿ ಗುರುಬಸವಾರ್ಯನ 'ಕೈವಲ್ಯ ಪದ್ಧತಿ'.

**ಕರ್ತೃ:**

ಕೈವಲ್ಯ ಪದ್ಧತಿಯ ಕರ್ತೃ ಗುರುಬಸವಾರ್ಯ. ಇದು ಆತನ ಕೃತಿಯ ಆದಿ ಮತ್ತು ಅಂತ್ಯದ ಷಟ್ಪದಿ, ಕಂದ ಹಾಗೂ ಗದ್ಯದಿಂದ ತಿಳಿದುಬರುತ್ತದೆ.

"ಗುರುಬಸವಾರ್ಯನು ವರಸಿದ್ಧೇಶ್ವರನ ಕೃಪೆಯಲಿ ವಿರಚಿಸಿದನು ಕೈವಲ್ಯವಿದ"
- ಆದಿ ಪರಿವರ್ಧಿನಿ ಷಟ್ಪದಿ

"ಗುರುಬಸವಾರ್ಯ ಸಿದ್ಧೇಶ ವಿರಚಿತ ಕೈವಲ್ಯ ಪದ್ಧತಿ" - ಆದಿ ಕಂದ

"ಗುರುಬಸವಾರ್ಯರಾ ಪರಮ
ಗುರುಸಿದ್ಧೇಶ್ವರನೆಂಬ ಇಷ್ಟದೈವದ ವರ ಕೃಪೆಯಿಂ

ವಿರಚಿಸಿದ ಕೈವಲ್ಯಪದ್ಧತಿ" - ಅಂತ್ಯ ಕಂದ

"ಶ್ರೀ ಲಿಂಗಾಂಗ ಸಮರಸ ಸಚ್ಚಿತ್ಸುಖ ನಿಜಾನಂದ ಶಿವಯೋಗಿ

ಷಟ್‌ಸ್ಥಲಬ್ರಹ್ಮಿ ಗುರುಬಸವಾರ್ಯರು ನಿರೂಪಿಸಿದ ಕೈವಲ್ಯಪದ್ಧತಿ"

- ಆದಿ ಮತ್ತು ಅಂತ್ಯ ಗದ್ಯ

ಗ್ರಂಥಾರಂಭದ 'ಗುರುಪೀಠಿಕೆ'ಯ ಷಟ್ಪದಿಯಲ್ಲಿ ಈತ ತನ್ನ ಗುರುಪರಂಪರೆಯನ್ನು ಕೆಳಗಿನಂತೆ ಹೇಳಿಕೊಂಡಿದ್ದಾನೆ:

ಗುರು ತೋಂಟದ ಸಿದ್ಧೇಶ್ವರ

↓

ಶಿಷ್ಯ ಶಿವಬಸವ

↓

ಶಿಷ್ಯ ಚೆನ್ನಬಸವ

↓

ಶಿಷ್ಯ ಸಂಗನಬಸವೇಶ್ವರ

↓

ಮಗ ಗುರುಬಸವಾರ್ಯ

ಇದರಿಂದ ಗುರುಬಸವಾರ್ಯ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ ಪರಂಪರೆಗೆ ಸೇರಿದವನೆಂಬುದು ಸ್ಪಷ್ಟವಾಗುತ್ತದೆ. ಈ ಗುರು ಶಿಷ್ಯ ಪರಂಪರೆಯು ಈಗಾಗಲೇ ಪ್ರಸಿದ್ಧವಾಗಿರುವ ತೋಂಟದ ಸಿದ್ಧಲಿಂಗೇಶ್ವರರ ಗುರುಶಿಷ್ಯ ಪರಂಪರೆಯಿಂದ ಭಿನ್ನವಾಗಿದೆ. ಇಲ್ಲಿ ಬರುವ ವ್ಯಕ್ತಿಗಳ ಬಗೆಗೆ ಸದ್ಯ ಹೆಚ್ಚಿನ ಸಂಗತಿಗಳು ಲಭ್ಯವಿಲ್ಲ.[೨೨]

'ಸಿದ್ಧೇಶ್ವರ' ಗುರುಬಸವಾರ್ಯನ ಇಷ್ಟದೈವ, ಇದನ್ನು ಆತ "ಗುರುಬಸವಾರ್ಯರಾ ಪರಮಗುರು ಸಿದ್ಧೇಶ್ವರನೆಂಬ ಇಷ್ಟದೈವದ ಕೃಪೆಯಿಂ" ಎಂಬ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾನೆ. ಈ ಇಷ್ಟದೈವವನ್ನೇ ಆತ ತನ್ನ ಸ್ವರವಚನಗಳ ಅಂಕಿತವನ್ನಾಗಿ ಇಟ್ಟುಕೊಂಡಿದ್ದಾನೆ. ಅಲ್ಲದೆ 'ಗುರುಬಸವನೇ ಸಿದ್ಧೇಶ್ವರ',[೨೩] 'ಗುರುಬಸವಾರ್ಯ ತಾನೆ ಸಿದ್ಧೇಶ್ವರನೆಯಾಗಿ ಸುಳಿವ',[೨೪] 'ಗುರುಬಸವನೆ ಸಿದ್ಧೇಶ್ವರನಾಗಿ ನಟಿಸುವ'[೨೫] ' ಗುರುಬಸವನೆ ತಾನೆ ಸಿದ್ಧೇಶ್ವರನೆಯಾಗಿಹ'[೨೬] 'ಗುರುಬಸವನೇ ಸಿದ್ಧೇಶ್ವರನಾಗಿ ಬಂದಿಹ'[೨೭] ಎಂದು ಅನೇಕ ಸ್ವರವಚನಗಳಲ್ಲಿ ಹೇಳಿಕೊಳ್ಳುತ್ತ, ತಾನೇ ಗುರುವಾಗಿ ಪರಿಣಮಿಸಿದುದನ್ನು, ತನಗೂ ಇಷ್ಟದೈವಕ್ಕೂ ಇರುವ ಅವಿನಾಭಾವ ಸಂಬಂಧವನ್ನು ತಿಳಿಸುತ್ತಾನೆ.

"ಗುರುಬಸವನೆ ತಾನೆ ಸಿದ್ಧೇಶ್ವರನೆಯಾಗಿಹ
ಪರಮದೇಶಿಕೇಂದ್ರನಿಂದ
ಕರುಣಬೋಧಾಮೃತವ ಪಡಿಯೆ

ವಿರತಿ ಜ್ಞಾನ ಭಕ್ತಿಭರಿತ ವಿರತನಾತನು"[೨೮]

ಎಂಬ ಸ್ವರವಚನದಲ್ಲಿ ಗುರುಬಸವಾರ್ಯ ತನ್ನನ್ನು 'ಪರಮದೇಶಿಕೇಂದ್ರ' ಎಂದು ಕರೆದುಕೊಂಡಿದ್ದಾನೆ. ಇದರಿಂದ ಈತ ವಿರಕ್ತ ಸಂಪ್ರದಾಯಕ್ಕೆ ಸೇರಿದ ದೇಶಿಕ, ಉನ್ನತ ಆಧ್ಯಾತ್ಮ ಸಿದ್ಧಿಯನ್ನು ಸಾಧಿಸಿಕೊಂಡ ಶಿವಯೋಗಿ, ಭಕ್ತಿ ಜ್ಞಾನ ವೈರಾಗ್ಯವನ್ನು ಬೋಧಿಸುವ ಗುರು ಆಗಿದ್ದನೆಂದು ತಿಳಿದುಬರುತ್ತದೆ. ಕೈವಲ್ಯ ಪದ್ಧತಿಯ ಆದಿ-ಅಂತ್ಯ ಗದ್ಯದಲ್ಲಿ ಬರುವ "ಲಿಂಗಾಂಗ ಸಂಗಸಮರಸ ಚಿತ್ಸುಖ ನಿಜಾನಂದ ಶಿವಯೋಗಿ ಷಟ್‌ಸ್ಥಲಬ್ರಹ್ಮ" ಎಂಬ ವಿಶೇಷಣಗಳು ಗುರುಬಸವಾರ್ಯನ ಆಧ್ಯಾತ್ಮ ಸಿದ್ಧಿಯ ಸ್ವರೂಪವನ್ನು ತಿಳಿಸುತ್ತವೆ.

"ಬಂಧ ಮುಕ್ತಿಯ ಬಿಟ್ಟು ಅಣಿಮಾದಿ ಸಿದ್ಧಿ
ಗೆಂದೆಂದು ಹೋಗದೆ ಸುಟ್ಟು ಸಂತೃಪ್ತಿಬಟ್ಟು
ಸಂದ ಶರಣರ ವೃಂದಕಿಷ್ಟವ
ನಂದು ಪಾಲಿಸಿ ಇಂದು ಮರ್ತ್ಯಕೆ
ಬಂದ ಗುರುಬಸವಾರ್ಯಸಿದ್ಧನ
ಹೊಂದಿದವರೊಳು ನಿಂದು ನಟಿಸುವ"[೨೯]

ಎನ್ನುವಲ್ಲಿ ಗುರುಬಸವಾರ್ಯ ತಾನು ಹನ್ನೆರಡನೆಯ ಶತಮಾನದ ಬಸವಣ್ಣನವರ ಅವತಾರವೇ ಆಗಿದ್ದೇನೆ ಎಂದು ಹೇಳಿಕೊಂಡಂತಿದೆ.

**ಕಾಲ:**

ಗುರುಬಸವಾರ್ಯನ ಜೀವಿತ ಕಾಲದ ಬಗೆಗೆ ಸ್ವತಃ ಆತನ ಕೃತಿಯಲ್ಲಾಗಲಿ, ಇತರ ಆಕರಗಳಲ್ಲಾಗಲಿ ಉಲ್ಲೇಖವಿಲ್ಲ. ಈತನ ಕಾಲ ನಿರ್ಧಾರದ ಬಗ್ಗೆ ಸದ್ಯ ಇರುವ ಆಧಾರಗಳೆಂದರೆ, ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿಯ ಪ್ರಭಾವ ಮತ್ತು ಗುರುಪರಂಪರೆಯಲ್ಲಿ ಹೇಳಿಕೊಂಡ ತೋಂಟದ ಸಿದ್ಧಲಿಂಗರ ಹೆಸರು.

ಗುರುಬಸವಾರ್ಯ ನಿಜಗುಣರ 'ಕೈವಲ್ಯ ಪದ್ಧತಿ'ಯ ಮಾದರಿಯಲ್ಲಿಯೇ ತನ್ನ ಕೃತಿ 'ಕೈವಲ್ಯಪದ್ಧತಿ'ಯನ್ನು ರೂಪಿಸಿದ್ದಾನೆ. ಈತನ ೮೩ ಮತ್ತು ೧೩೧ನೆಯ ಸ್ವರವಚನಗಳು ನಿಜಗುಣರ ಕೈವಲ್ಯಪದ್ಧತಿಯ ಆದಿ ಮತ್ತು ಅಂತ್ಯದ ಹಾಡುಗಳ ಪಡಿಯಚ್ಚಾಗಿವೆ. ಸ್ಥಲಯೋಜನೆಯಲ್ಲಿ ಹಾಗೂ ಇಡೀ ಕೃತಿಯ ತಾತ್ವಿಕ ನಿಲುವಿನಲ್ಲಿ ನಿಜಗುಣರ ಪ್ರಭಾವವೇ ಎದ್ದು ಕಾಣುತ್ತದೆ. ನಿರಾಲಂಬಸೃಷ್ಟಿವಾರ್ಧಿಕ, ಬ್ರಹ್ಮಾಂಡ ಸೃಷ್ಟಿವಾರ್ಧಿಕ ಮತ್ತು ಪಂಚೀಕರಣವಾರ್ಧಿಕಗಳಿಗೆ ನಿಜಗುಣರ ವಿವೇಕಚಿಂತಾಮಣಿಯ ಮೂರರಿಂದ ಎಂಟರವರೆಗಿನ ಪರಿಚ್ಛೇದಗಳು ಆಕರವಾಗಿವೆ. ಕೃತಿಗೆ ಇಟ್ಟ 'ಕೈವಲ್ಯಪದ್ಧತಿ' ಎಂಬ ಹೆಸರೂ ನಿಜಗುಣರಿಂದ ಪ್ರೇರಿತವಾದುದಾಗಿದೆ. ಹೀಗಾಗಿ ಗುರುಬಸವಾರ್ಯ ನಿಜಗುಣರ ಕಾಲವಾದ ಕ್ರಿ.ಶ. ಸು. ೧೫೦೦ ರಿಂದ ಈಚಿನವನು ಎಂದು ಸ್ಪಷ್ಟವಾಗುತ್ತದೆ.

ಗುರುಬಸವಾರ್ಯ ತನ್ನ ಗುರುಪರಂಪರೆಯನ್ನು ತೋಂಟದ ಸಿದ್ಧಲಿಂಗೇಶ್ವರರಿಂದ ಆರಂಭಿಸುತ್ತಾನೆ. ಈಚಿನ ಹೊಸ ಆಧಾರಗಳ ಹಿನ್ನೆಲೆಯಲ್ಲಿ ತೋಂಟದ ಸಿದ್ಧಲಿಂಗೇಶ್ವರರ

ಕಾಲವನ್ನು ಕ್ರಿ.ಶ. ಸು. ೧೫೬೧ ಎಂದು ನಿರ್ಧರಿಸಲಾಗಿದೆ.[೩೦] ಗುರುಬಸವಾರ್ಯ ಈ ಗುರುಪರಂಪರೆಯಲ್ಲಿ ನಾಲ್ಕನೆಯ ತಲೆಮಾರಿಗೆ ಸೇರಿದವನಾಗಿದ್ದಾನೆ. ಒಂದೊಂದು ತಲೆಮಾರಿಗೆ ೩೦ ವರ್ಷದಂತೆ ಲೆಕ್ಕ ಹಾಕಿದರೆ ಕ್ರಿ.ಶ.ಸು. ೧೬೮೧ ಈತನ ಕಾಲವೆಂದು ಹೇಳಬೇಕಾಗುತ್ತದೆ. ಸದ್ಯಕ್ಕೆ ೧೭ನೆಯ ಶತಮಾನದ ಉತ್ತರಾರ್ಧದಲ್ಲಿ ಗುರುಬಸವಾರ್ಯನು ಜೀವಿಸಿದ್ದನೆಂದು ಇಟ್ಟುಕೊಳ್ಳಬಹುದಾಗಿದೆ.

**ಸ್ಥಳ:**

ಗುರುಬಸವಾರ್ಯನ ಸ್ಥಳದ ಬಗೆಗೂ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಈತನ ಮೂರು ಸ್ವರವಚನಗಳಲ್ಲಿ[೩೧] 'ಬಾಗುಳಿ' ಎಂಬ ಊರಿನ ಉಲ್ಲೇಖ ಬರುತ್ತದೆ. ಇದು ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲೂಕಿಗೆ ಸೇರಿದ ಇತಿಹಾಸ ಪ್ರಸಿದ್ಧವಾದ ಸ್ಥಳ. ಹರಪನಹಳ್ಳಿಯ ಪಾಳೆಯಗಾರರು ಮೂಲತಃ ಈ ಊರಿಗೆ ಸೇರಿದವರಾಗಿದ್ದರೆಂದು, ಅವರನ್ನು 'ಬಾಗುಳಿ ವಂಶಜರು' ಎಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.[೩೨] ಗುರುಬಸವಾರ್ಯ ತನ್ನ ಸ್ವರವಚನಗಳಲ್ಲಿ 'ಬಾಗಳೆ' 'ಮುದ್ದುಚಲುವಲಿಂಗವೆ ಬಾಗುಳಿಯ' 'ಬಾಗುಳಿ ಲಿಂಗದೇವ' ಎಂದು ಕರೆದುದು ಆ ಊರಿನ ಶಿವಲಿಂಗವನ್ನು ಅಥವಾ ಅಲ್ಲಿನ ಪ್ರಸಿದ್ಧ ದೈವವನ್ನು ಕುರಿತುದಾಗಿರಬೇಕು. ಈಗ ಬಾಗುಳಿಯಲ್ಲಿರುವ 'ಕಲ್ಮೇಶ್ವರ' ಎಂಬುದು ಇತಿಹಾಸ ಪ್ರಸಿದ್ಧ ದೇವಾಲಯವಾಗಿದೆ ಎಂದು ತಿಳಿದುಬರುತ್ತದೆ. ಈ ಕಲ್ಮೇಶ್ವರನಿಗೇ ಗುರುಬಸವಾರ್ಯ 'ಬಾಗುಳೆ' 'ಬಾಗುಳಿಯ' 'ಬಾಗುಳಿ ಲಿಂಗದೇವ' ಎಂದು ಸಂಬೋಧಿಸಿದಂತೆ ತೋರುತ್ತದೆ.[೩೩] ಇದರಿಂದ ಈತ 'ಬಾಗಳಿ' ಎಂಬ ಸ್ಥಳಕ್ಕೆ ಸೇರಿದವನಾಗಿರಬೇಕೆಂದು ಊಹಿಸಬಹುದಾಗಿದೆ.

**ಕೈವಲ್ಯಪದ್ಧತಿ:**

**ಸ್ವರೂಪ:** 'ಕೈವಲ್ಯ ಪದ್ಧತಿ' ೧೧ ಸ್ಥಲ,[೩೪] ೧೩೧ ಸ್ವರವಚನಗಳಿಂದ ಸಂಯೋಜಿಸಿದ ಒಂದು ಸಂಕಲನಗ್ರಂಥ. ಆದಿಯಲ್ಲಿ ಒಂದು ಪರಿವರ್ಧಿನಿ ಷಟ್ಪದಿ, ಒಂದು ಕಂದ ಇದ್ದರೆ, ಅಂತ್ಯದಲ್ಲಿ ೨ ವೃತ್ತ, ೧ ಕಂದ ಹಾಗೂ ಗದ್ಯ ಇವೆ. ಆದಿಯ ಪರಿವರ್ಧಿನಿ ಷಟ್ಪದಿಯಲ್ಲಿ ಕೃತಿಯ ಹೆಸರು, ಗುರುಪರಂಪರೆ, ಕೃತಿರಚನೆಗೆ ಕೃಪೆಮಾಡಿದ ಅಧಿದೈವ ಸಿದ್ಧೇಶನ ಹೆಸರನ್ನು ಉಲ್ಲೇಖಿಸಿದರೆ, ಕಂದದಲ್ಲಿ ಕೃತಿಯನ್ನು ಬರೆದು ಓದಿ ಕೇಳಿದವರಿಗೆ ದೊರಕುವ ಫಲವನ್ನು ಕುರಿತು ತಿಳಿಸಲಾಗಿದೆ. ಅಂತ್ಯದ ವೃತ್ತಗಳಲ್ಲಿ ಕೃತಿಯ ತತ್ತ್ವಾರ್ಥವನ್ನು ಸುಜನರು, ಸದ್ಭಕ್ತರು ಕೇಳಿ ಆನಂದಿಸುತ್ತಾರೆ, ಭವಿಗಳು, ಮೂರ್ಖರು ಕುಂದಿಟ್ಟು ಜರಿಯುತ್ತಾರೆ ಎಂದು ಹೇಳುತ್ತ ಸುಜನ ಸ್ತುತಿ, ಕುಜನ ನಿಂದೆ ಮಾಡಲಾಗಿದೆ. ಕಂದದಲ್ಲಿ ಕವಿ ತನ್ನ ಕೃತಿಯಲ್ಲಿ ತಪ್ಪಿದ್ದರೆ ಹರಶರಣರು ತಮ್ಮ ಮಗನೆಂದು ತಿಳಿದು ತಿದ್ದಬೇಕೆಂದು ವಿನಂತಿಸಿಕೊಳ್ಳುತ್ತ ವಿನಯವನ್ನು ತೋರುತ್ತಾನೆ.[೩೫]

ಈ ಕೃತಿಯಲ್ಲಿ ಅಳವಟ್ಟ ಸ್ಥಲಗಳ ಹೆಸರು, ಸ್ವರವಚನಗಳ ಸಂಖ್ಯಾ ವಿವರ ಹೀಗಿದೆ:

೧. ಗುರುಪೀಠಿಕೆ-೧೦, ೨. ನೀತಿಪದ್ಧತಿ-೧೬. ೩. ಜ್ಞಾನಪದ್ಧತಿ-೯, ೪. ವೈರಾಗ್ಯ ಪದ್ಧತಿ-೧೪, ೫. ಉಪದೇಶ ಪದ್ಧತಿ-೧೭, ೬. ಭಕ್ತಸ್ಥಲ-೧೫, ೭. ಮಾಹೇಶ್ವರಸ್ಥಲ-೯, ೮. ಪ್ರಸಾದಿಸ್ಥಲ-೫, ೯. ಪ್ರಾಣಲಿಂಗಿಸ್ಥಲ-೧೫, ೧೦. ಶರಣಸ್ಥಲ-೧೪, ೧೧. ಐಕ್ಯಸ್ಥಲ-೭ ಒಟ್ಟು ೧೩೧.

ಆರಂಭದ 'ಗುರುಪೀಠಿಕೆ'ಯಲ್ಲಿ ಶಿವಸ್ತುತಿ, ಶಿವನ ಮಹಿಮಾತಿಶಯಗಳ ವರ್ಣನೆ, ನಂದೀಶ್ವರನ ವರ್ಣನೆ, ಮಾತೃಕಾಕ್ಷರದ ರುದ್ರ ಮತ್ತು ಶಕ್ತಿಯರ ನೂರೆಂಟು ನಾಮಸ್ತುತಿ, ಶರಣರ ನೂರೆಂಟು ನಾಮಸ್ಮರಣೆ, ಬಸವಣ್ಣನ ಮಹತ್ಕಾರ್ಯಗಳ ವಿವರ, ಚೆನ್ನಬಸವಣ್ಣನ ವ್ಯಕ್ತಿವೈಶಿಷ್ಟ್ಯದ ವರ್ಣನೆ ಮಾಡಲಾಗಿದೆ.

'ನೀತಿಪದ್ಧತಿ' ಎಂಬ ಎರಡನೆಯ ಭಾಗ ನೀತಿನಿರೂಪಣೆಗೆ ಮೀಸಲಾಗಿದೆ. ಇಲ್ಲಿ ಮುಖ್ಯವಾಗಿ ಗುರುವಿನ ಮಹತ್ವ, ಗುರುಕರಸಂಜಾತರಾಗಿ, ಇಷ್ಟಲಿಂಗ ಪೂಜಕರಾದ ಹರ ಶರಣರ ಸ್ವರೂಪ, ಇಷ್ಟಲಿಂಗದಲ್ಲಿ ನಿಷ್ಠೆ ಇಡದೆ ಸ್ಥಾವರಲಿಂಗದತ್ತ ಮನಸ್ಸನ್ನು ಹರಿಸುವವರ ನಿಂದೆ, ಡಾಂಭಿಕ ವಿರಕ್ತರ ಟೀಕೆ, ಜಂಗಮದ ಲೀಲೆ, ದುರುಳ ಶಿಷ್ಯರ ರೀತಿ-ನೀತಿ, ಶರಣರನ್ನು, ಶರಣತತ್ವವನ್ನು ಅರಿಯದೆ, ಮಾಯಾಭ್ರಾಂತಿಯಲ್ಲಿ ಮುಳುಗಿ ಅವರನ್ನು ನಿಂದಿಸುತ್ತ, ಭವಬಂಧನಕ್ಕೆ ಒಳಗಾಗುವ ಮೂಢಮಾನವರ ಸ್ಥಿತಿ ಗತಿಗಳನ್ನು ಎತ್ತಿ ಹೇಳುತ್ತ, ಅವರಿಗೆ ಮಾನವಜನ್ಮದ ಮಹತಿಯನ್ನು, ಗುರುಲಿಂಗಜಂಗಮದ ಶ್ರೇಷ್ಠತೆಯನ್ನು, ಉತ್ತಮ ನಡೆನುಡಿಗಳನ್ನು ಅಳವಡಿಸಿಕೊಳ್ಳುವ ವಿಧಾನವನ್ನು ತಿಳಿಸಿಕೊಡಲಾಗಿದೆ.

'ಜ್ಞಾನಪದ್ಧತಿ'ಯಲ್ಲಿ ಪರಬ್ರಹ್ಮದ ಸ್ವರೂಪ, ನಿರ್ಗುಣ-ಸಗುಣ ನಿರಾಲಂಬ ಸೃಷ್ಟಿಯ ವಿವರ, ಬ್ರಹ್ಮಾಂಡಸೃಷ್ಟಿಯ ವರ್ಣನೆ, ಪರಶಿವನಿರೂಪದಿಂದಾದ ದೇಹದ ಪಂಚೀಕರಣ ವಿವರ, ಗುರುಭೇದ, ಗುರುವಿನ ಗುಣ-ಸ್ವಭಾವ, ಶಿಷ್ಯನ ಗುಣ-ಲಕ್ಷಣ, ಗುರುಪಾದ ಸೇವೆಯಲ್ಲಿ ನಿರತನಾದ ಶಿಷ್ಯನ ಇರವಿನ ರೀತಿಯನ್ನು ಬಣ್ಣಿಸಲಾಗಿದೆ.

'ವೈರಾಗ್ಯಪದ್ಧತಿ' ಜೀವಿಯ ಹುಟ್ಟು-ಬೆಳವಣಿಗೆ, ಸಂಸಾರಸಂಗದಿಂದ ಅದು ಅನುಭವಿಸುವ ಕಷ್ಟಕೋಟಲೆ, ಹೆಣ್ಣು-ಹೊನ್ನು-ಮಣ್ಣಿನಾಸೆ, ಅರಿಷಡ್ವರ್ಗಗಳ ಬಾಧೆ, ದೇಹಮೋಹ, ಅಜ್ಞಾನದಿಂದಾದ ಮರವೆ, ಇವುಗಳಿಂದಾಗುವ ಹಾನಿಯನ್ನು ತಿಳಿಸುತ್ತ, ತನು-ಮನ-ಧನಗಳನ್ನು ಗುರು-ಲಿಂಗ-ಜಂಗಮಗಳಿಗೆ ಅರ್ಪಿಸಿ, ಕೆಡುವ ಕಾಯದಾಸೆಯನ್ನು ಬಿಟ್ಟು, ತನ್ನೊಳಗಿನ ನಿಜವನ್ನು ತಿಳಿದು ಸದ್ಭಕ್ತಿ, ಸದಾಚಾರದಿಂದ ನಡೆದು ಸದ್ಗತಿಯನ್ನು ಪಡೆಯಲು ಬೋಧಿಸುತ್ತದೆ.

ಕರ-ಮನ-ಭಾವಗಳಲ್ಲಿ ಗುರುವು ಇಷ್ಟ-ಪ್ರಾಣ-ಭಾವಲಿಂಗವಾಗಿ ತೋರುವ ರೀತಿ, ಆರು ಮುದ್ರೆಗಳ ವಿವರ, ಶರಣರ ಆಚರಣೆಯ ವಿಧಾನ, ಮೂರು ತಾರೆಗಳು, ನಾಲ್ಕು ಆಸನಗಳ ಸ್ವರೂಪ, ವಾಯುಧಾರಣ ಛಾಯಪುರುಷನ ಲಕ್ಷಣ, ಸಗುಣಯೋಗ, ಅಷ್ಟಾಂಗಯೋಗಗಳ ವಿವರ, ಕರ್ಮಯೋಗ ಬಿಟ್ಟು ಶಿವಯೋಗ ಮಾರ್ಗದಲ್ಲಿ ನಡೆದು

ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭವಿಸುವ ಮಾರ್ಗವನ್ನು 'ಉಪದೇಶ ಪದ್ಧತಿ' ತೆರೆದುತೋರಿಸುತ್ತದೆ.

ಅನಂತರದ ಭಕ್ತಾದಿ ಐಕ್ಯಾಂತ ಆರು ಸ್ಥಲಗಳಲ್ಲಿ ಸಾಧಕ ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸ ಭಕ್ತಿಗಳಿಂದ ಹಂತಹಂತವಾಗಿ ಏರುತ್ತ ನಡೆದು ಲಿಂಗಾಂಗ ಸಾಮರಸ್ಯಸುಖವನ್ನು ಅನುಭವಿಸುವ ರೀತಿಯನ್ನು ತಿಳಿಸಲಾಗಿದೆ.

ಭಕ್ತಸ್ಥಲದಲ್ಲಿ ಭಕ್ತನ ಇರವು, ಇಷ್ಟಲಿಂಗದ ವರ್ಣನೆ, ಲಿಂಗದೇವನ ಲೀಲೆ, ಅಷ್ಟಾವರಣಗಳ ವಿವರ, ಕರಪೀಠಕ್ಕೆ ಇಷ್ಟಲಿಂಗದ ಆಹ್ವಾನ ಮೊದಲಾದ ವಿವರಗಳು ಬಂದರೆ, ಮಾಹೇಶ್ವರಸ್ಥಲದಲ್ಲಿ ದುರ್ಗುಣಗಳನ್ನು ನೀಗಿ, ತನುವಿನ ಆಶೆಯನ್ನು ತೊರೆದು, ಅನ್ಯದೈವಗಳ ಯೋಚನೆಯನ್ನು ಬಿಟ್ಟು ಮನವನ್ನು ಇಷ್ಟಲಿಂಗದಲ್ಲಿ ಲೀನಗೊಳಿಸಲು ಪ್ರಯತ್ನಿಸುವ ಭಕ್ತನ ನಿಷ್ಠೆಯ ನಿಬ್ಬೆರಗಿನ ವರ್ಣನೆ ಬರುತ್ತದೆ. ಪ್ರಸಾದಿಸ್ಥಲದಲ್ಲಿ ಪ್ರಸಾದದ ಮಹತ್ವ, ಪ್ರಾಣಲಿಂಗಿಸ್ಥಲದಲ್ಲಿ ಲಿಂಗದ ಮಹಿಮೆ, ಯೋಗಿಗಳ ಇರವು, ಪರಬ್ರಹ್ಮದ ಜಪ, ಶರಣಸ್ಥಲದಲ್ಲಿ ಅಂಗಗುಣ ಹಿಂಗಿ ಲಿಂಗದೊಡನೆ ಕೂಡಿದ ಶರಣಸತಿ, ಲಿಂಗಪತಿಯೊಂದಿಗೆ ಆನಂದಿಸುವ ಸುಖಾನುಭವದ ವರ್ಣನೆ, ಐಕ್ಯಸ್ಥಲದಲ್ಲಿ, ಬೆರೆತು ಬೇರಿಲ್ಲದಂತಾದ ಲಿಂಗಾಂಗ ಸಾಮರಸ್ಯದ ಆತ್ಯಂತಿಕ ಆತ್ಮಾನುಭವದ ಬಣ್ಣನೆ ಬರುತ್ತದೆ. ಇದು ಈ ಕೃತಿಯ ಸ್ಥಲಾನುಗುಣವಾದ ಸ್ಥೂಲ ಪರಿಚಯ.

**ವಿವೇಚನೆ:**

'ಕೈವಲ್ಯ ಪದ್ಧತಿ' ಲಿಂಗಾಂಗ ಸಾಮರಸ್ಯದ ರಹಸ್ಯವನ್ನು ಹಾಡಿನ ಮೂಲಕ ತಿಳಿಸುವ ಒಂದು ತಾತ್ವಿಕ ಕೃತಿ. 'ಕೈವಲ್ಯ' ಎಂದರೆ ಮೋಕ್ಷ. 'ಪದ್ಧತಿ' ಎಂದರೆ ಮಾರ್ಗ. ಮೋಕ್ಷದ ಮಾರ್ಗವನ್ನು ತೋರಿಸುವ ಕೃತಿ ಅಥವಾ ಮೋಕ್ಷದ ಅನುಭವಕ್ಕೆ ಕಾರಣವಾದ ಮಾರ್ಗ ಎಂದು ಇದನ್ನು ಅರ್ಥೈಸಬಹುದು.

ಈ ಕೃತಿ ನಿಜಗುಣಾದಿ ತತ್ವಪದಕಾರರ ಮಾರ್ಗವನ್ನು ಅನುಸರಿಸಿ ರಚಿತವಾಗಿದ್ದರೂ ಸ್ಥಲಯೋಜನೆಯಲ್ಲಿ, ಒಟ್ಟು ತಾತ್ವಿಕ ನಿಲವಿನಲ್ಲಿ ಹೊಸತನವನ್ನು ತೋರಿದುದು ಕಂಡುಬರುತ್ತದೆ. ಇದರಲ್ಲಿ ಒಟ್ಟು ೧೧ ಭಾಗಗಳನ್ನು ಕಲ್ಪಿಸಲಾಗಿದೆ. ಇವುಗಳಲ್ಲಿ ಒಂದು ಗುರುಪೀಠಿಕೆ, ನಾಲ್ಕು ಪದ್ಧತಿಗಳು, ಆರು ಸ್ಥಲಗಳು ಸಮಾವೇಶಗೊಂಡಿವೆ.

. ನಿಜಗುಣರ ಕೈವಲ್ಯಪದ್ಧತಿ ಮತ್ತು ಸರ್ಪಭೂಷಣರ ಕೈವಲ್ಯಕಲ್ಪವಲ್ಲರಿಗಳಲ್ಲಿ ಶಿವಕಾರುಣ್ಯಸ್ಥಲ,[೬೬] ಜೀವಸಂಬೋಧನಸ್ಥಲ, ನೀತಿಕ್ರಿಯಾಚರ್ಯಸ್ಥಲ,[೬೭] ಯೋಗಪ್ರತಿಪಾದನಸ್ಥಲ, ಜ್ಞಾನಪ್ರತಿಪಾದನಸ್ಥಲ ಎಂಬ ಐದು ಸ್ಥಲಗಳು ಮಾತ್ರ ಇವೆ.[೬೮] ಇವುಗಳಲ್ಲಿ ಕ್ರಮವಾಗಿ ಗುರುವಿನ ಮೂಲಕ ಶಿವಕಾರುಣ್ಯ ಪಡೆಯುವ ವಿಧಾನ, ಸಂಸಾರದ ಬಗೆಗೆ ಹೇಯಭಾವ ತಾಳುವುದು, ಮುಮುಕ್ಷು ಅನುಸರಿಸಬೇಕಾದ ನಡೆ-ನುಡಿಗಳು, ಶಿವಯೋಗದ ರಹಸ್ಯ ಮತ್ತು ಜ್ಞಾನದ ಸ್ವರೂಪ, ಅದನ್ನು ಪಡೆಯುವ ಬಗೆ, ಅದರಿಂದ ದೊರಕುವ ಆನಂದ ಕುರಿತು ಹೇಳಲಾಗಿದೆ.

ಗುರುಬಸವಾರ್ಯ ಇಷ್ಟಕ್ಕೆ ನಿಲ್ಲದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಗುರುವಿನಿಂದ ನೀತಿ-ಜ್ಞಾನ-ವೈರಾಗ್ಯಬೋಧೆ ಮತ್ತು ಶಿವಯೋಗ ರಹಸ್ಯೋಪದೇಶ ಪಡೆದ ಸಾಧಕ ಭಕ್ತಾದಿ ಐಕ್ಯಾಂತ ಸ್ಥಲಗಳನ್ನು ಏರಿ ನಡೆದ ರೀತಿಯನ್ನೂ ಹೇಳುತ್ತಾನೆ. ಇದು ನಿಜಗುಣಾದಿ ತತ್ವಪದಕಾರರ ಮತ್ತು ಬಸವಾದಿ ಶರಣರ ತತ್ವಗಳೆರಡನ್ನೂ ಸಮನ್ವಯಗೊಳಿಸಲು ಮಾಡಿದ ಪ್ರಯತ್ನವಾಗಿದೆ. ಅದರಲ್ಲಿಯೇ ಗುರುಬಸವಾರ್ಯ ಬಸವಾದಿ ಶರಣರ ತಾತ್ವಿಕ ನಿಲವಿನ ಕಡೆಗೆ ಹೆಚ್ಚು ಒಲವು ತೋರಿದುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಕೃತಿ-ಗುರುಸ್ತುತಿಯಿಂದ ಆರಂಭವಾಗಿ, ಮಂಗಳಾರತಿ ಪದದಿಂದ ಮುಕ್ತಾಯಗೊಳ್ಳುವಲ್ಲಿ ನಿಜಗುಣರ ಕೈವಲ್ಯ ಪದ್ಧತಿಯನ್ನೇ ಅನುಸರಿಸಿದೆ. ಆದರೆ ಆದಿ, ಅಂತ್ಯದ ಷಟ್ಪದಿ, ಕಂದ, ವೃತ್ತಗಳಲ್ಲಿ ಕವಿ ತನ್ನ ಬಗೆಗೆ, ತನ್ನ ಕೃತಿಯ ಬಗೆಗೆ, ಕೃತಿಯ ಓದಿನಿಂದ ದೊರಕುವ ಫಲದ ಬಗೆಗೆ ಹೇಳಿದುದು ಹೆಚ್ಚಿನದೆನಿಸಿದೆ.

'ಜ್ಞಾನಪದ್ಧತಿ'ಯಲ್ಲಿ ಬರುವ ನಿರಾಲಂಬಸೃಷ್ಟಿ, ಬ್ರಹ್ಮಾಂಡಸೃಷ್ಟಿ ಮತ್ತು ಪಂಚೀಕರಣದ ವಿವರಗಳು ಉಳಿದವರಲ್ಲಿ ಇಲ್ಲ. ಗುರುಬಸವಾರ್ಯನೇ ಮೊದಲ ಬಾರಿಗೆ ಈ ವಿಷಯವನ್ನು ವಿಸ್ತಾರವಾಗಿ ಹೇಳಿದ್ದಾನೆ. ಇಲ್ಲಿ ಆತನ ಅಧ್ಯಯನದ ವ್ಯಾಪ್ತಿ, ಪುರಾಣ ಪ್ರಪಂಚದ ಪರಿಜ್ಞಾನ, ವೀರಶೈವ ಸಿದ್ಧಾಂತದ ಮೇಲಿನ ಪ್ರಭುತ್ವಗಳು ಸುವ್ಯಕ್ತವಾಗಿವೆ.

ತಾತ್ವಿಕ ದೃಷ್ಟಿಯಿಂದ ಈ ಕೃತಿ ಗಮನಾರ್ಹವೆನಿಸಿದೆ. ಇಲ್ಲಿನ ತತ್ವನಿರೂಪಣೆ ಸಕ್ರಮವಾಗಿದೆ; ಸುಲಭವೇದ್ಯವೆನಿಸಿದೆ. ನೀತಿ-ಜ್ಞಾನ-ವೈರಾಗ್ಯ-ಉಪದೇಶದ ಜೊತೆಗೆ ಭಕ್ತಾದಿ ಐಕ್ಯಾಂತ ಸ್ಥಲಗಳಲ್ಲಿ ಇಡೀ ವೀರಶೈವ ಸಿದ್ಧಾಂತದ ಸ್ವರೂಪವನ್ನು ಸರಳ ಹಾಡುಗಳ ಮೂಲಕ ತಿಳಿಸಲಾಗಿದೆ. ಅಂತರಂಗದ ಅರಿವಿನ ಮೂಲಭೂತ ತತ್ವವನ್ನು, ಲಿಂಗಾಂಗ ಸಾಮರಸ್ಯದ ಪರಮರಹಸ್ಯವನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸುವದರಿಂದ ಇದಕ್ಕೆ ವೀರಶೈವ, ತಾತ್ವಿಕ ಸಾಹಿತ್ಯ ಕೃತಿಗಳಲ್ಲಿ ಒಂದು ಮಹತ್ವದ ಸ್ಥಾನ ಮೀಸಲಾಗಿದೆ.

ಕೈವಲ್ಯ ಪದ್ಧತಿ 'ಬುದ್ಧಿಗಮ್ಯ ತರ್ಕಬದ್ಧ ಶಾಸ್ತ್ರವಾಗಿದ್ದಂತೆ ಹೃದಯಗಮ್ಯ ರಸಭರಿತ ಕಾವ್ಯವೂ ಆಗಿದೆ'. ಗುರಬಸವಾರ್ಯ ಒಬ್ಬ ಉತ್ತಮ ಅನುಭಾವಿ ಕವಿಯಾಗಿ ಸುರಸ ಸುಂದರ ಹಾಡುಗಳ ಮೂಲಕ ಇಲ್ಲಿನ ತತ್ವನಿರೂಪಣೆ ಮಾಡಿದ್ದಾನೆ. ಬುದ್ಧಿ ಭಾವಗಳೆರಡರ ಸಾಮರಸ್ಯದಿಂದ ಸೃಷ್ಟಿಯಾದ ಈ ಹಾಡುಗಳು ಕಾವ್ಯಕ್ಕೆ ಕಾವ್ಯ, ಶಾಸ್ತ್ರಕ್ಕೆ ಶಾಸ್ತ್ರ ಎನಿಸಿವೆ. ಪದಲಾಲಿತ್ಯ, ಭಾವದ ಬೆಡಗು, ಕಾವ್ಯದ ಕಮನೀಯತೆ ಶಾಸ್ತ್ರದ ಗಾಂಭಿರ್ಯ, ಸಂಗೀತದ ಮಾಧುರ್ಯ, ಸಾಹಿತ್ಯದ ಸೌಂದರ್ಯ ಎಲ್ಲವೂ ಇಲ್ಲಿ ಸಮನ್ವಯಗೊಂಡು ಇದೊಂದು ಶಾಸ್ತ್ರಕಾವ್ಯ ಎನಿಸಿದೆ.[೬೧]

ಕೈವಲ್ಯಪದ್ಧತಿ ಒಂದು ಉತ್ತಮ ಹಾಡುಗಬ್ಬವಾಗಿದೆ. ರಾಗ-ತಾಳ ಸಮನ್ವಿತವಾದ ಅನೇಕ ದೇಶೀ ಛಂದೋಬಂಧಗಳಲ್ಲಿ ರಚಿತವಾದ ಇಲ್ಲಿನ ಹಾಡುಗಳು, 'ಛಂದೋಬದ್ಧವಾದ ವಾಗ್ರಚನೆ ಮತ್ತು ರಾಗಧ್ವನಿ ರೂಪವಾದ ಸಂಗೀತ'ದ ಸಹಜ ಸಾಂಗತ್ಯದಿಂದ ಉತ್ತಮ

ಗೇಯ ಕೃತಿಗಳೆನಿಸಿವೆ. ಇಲ್ಲಿ ಬಳಕೆಯಾದ ಛಂದೋಬಂಧಗಳಲ್ಲಿ ವಾರ್ಧಕ, ಕುಸುಮ ಷಟ್ಪದಿಗಳು, ಚೌಪದಿ, ದ್ವಿಪದಿ, ಸಾಂಗತ್ಯ ತಾರಾವಳಿವರ್ಣ ಹಾಗೂ ಇನ್ನೂ ಅನೇಕ ನೂತನ ದೇಶೀ ಛಂದೋರೂಪಗಳು ಸಮಾವೇಶಗೊಂಡಿವೆ. ನಿರಾಲಂಬಸೃಷ್ಟಿ, ಬ್ರಹ್ಮಾಂಡಸೃಷ್ಟಿ ಪಂಚೀಕರಣ, ಅಕ್ಷರ ಮಾತೃಕಾಮೂರ್ತಿಗಳ ವಿವರ, ಶರಣರ ನೂರೆಂಟು ನಾಮಸ್ತುತಿ, ವಾಯುಧಾರಣ ಛಾಯಪುರುಷನ ಲಕ್ಷಣಗಳನ್ನು ತಿಳಿಸುವಲ್ಲಿ ವಾರ್ಧಕ ಷಟ್ಪದಿಯ ಬಳಕೆ ವಿಷಯದ ಗಹನತೆಗೆ ತಕ್ಕಂತೆ ಬಂಧುರವಾಗಿದೆ; ಹೆಚ್ಚು ಪ್ರೌಢವೆನಿಸಿದೆ. ಉಳಿದೆಡೆಗಳಲ್ಲಿ ಶುದ್ಧ ದೇಶೀ ಛಂದೋಬಂಧಗಳೇ ಅಧಿಕ ಪ್ರಮಾಣದಲ್ಲಿ ಬಳಕೆಯಾಗಿ ಭಾವಪ್ರಕಟನೆ ಮತ್ತು ರಾಗರಮ್ಯತೆಗಳಿಗೆ ಸಹಕಾರಿಯಾಗಿವೆ. ಎಲ್ಲ ರಚನೆಗಳಲ್ಲಿ ಆದಿಪ್ರಾಸ ಕಡ್ಡಾಯವಾಗಿದೆ. ಅಂತ್ಯಪ್ರಾಸ ಕೆಲವು ಕಡೆ ಮಾತ್ರ ತೋರುತ್ತವೆ; ಅಲ್ಲಲ್ಲಿ ಮಧ್ಯಪ್ರಾಸವೂ ಉಂಟು.

ಪಲ್ಲ, ನುಡಿಗಳಿಂದ ಹೆಣೆದ ಇಲ್ಲಿನ ಹಾಡುಗಳಿಗೆ ರಾಗ-ತಾಳಗಳ ನಿರ್ದೇಶನ ನಿಯತವಾಗಿದೆ.[೨೦] ೪೦ ರಾಗ, ೮ ತಾಳಗಳು ಇಲ್ಲಿ ಬಳಕೆಯಾಗಿವೆ. ಇವುಗಳಲ್ಲಿ ಕರ್ನಾಟಕ ಮತ್ತು ಹಿಂದೂಸ್ತಾನಿ ಎರಡೂ ಪದ್ಧತಿ ಬೆರೆತುಕೊಂಡಿವೆ.

ಭಾಷೆ, ವಾರ್ಧಕಷಟ್ಪದಿ ಮತ್ತು ಆರಂಭದ ಸ್ತುತಿ ಪದ್ಯಗಳಲ್ಲಿ ಸಂಸ್ಕೃತ ಭೂಯಿಷ್ಠವೆನಿಸಿದರೆ ಉಳಿದೆಡೆಗಳಲ್ಲಿ ಸರಳ, ಸುಭಗ, ಸುಲಲಿತವಾಗಿದೆ. ನೀತಿ, ವೈರಾಗ್ಯ, ಉಪದೇಶ ಮಾಡುವಲ್ಲಿ, ಭಕ್ತಸ್ಥಲದ ಸ್ವರೂಪ ನಿರೂಪಣೆ, ಶರಣಸ್ಥಲದ ಸತಿಪತಿಭಾವ ಪ್ರಕಟನೆಯಲ್ಲಿ ಮೃದು-ಮಧುರ-ಪ್ರಸನ್ನಭಾವವಾಹಕವಾದ ಅದು ಸರಳತೆ ಸಾತ್ವಿಕತೆಗಳನ್ನು ಮೈಗೂಡಿಸಿಕೊಂಡು ಆತ್ಮೀಯವೆನಿಸಿದೆ, ಆಪ್ಯಾಯಮಾನವಾಗಿದೆ. ಒಟ್ಟಿನಲ್ಲಿ ಕವಿಯ ಪ್ರತಿಭೆ, ಪ್ರಭುತ್ವ, ಮಾರ್ಗ-ದೇಶೀ ಸಮನ್ವಯ ಸಾಧನೆ, ಸಾಹಿತ್ಯ-ಸಂಗೀತ- ತತ್ವಗಳ ಸಾಮರಸ್ಯ ಸಿದ್ಧಿ-ಏಕಕಾಲಕ್ಕೆ ಈ ಕೃತಿಯಲ್ಲಿ ಸಾಧ್ಯಗೊಂಡು ಕೈವಲ್ಯಪದ್ಧತಿ ಒಂದು ಉತ್ತಮ ತಾತ್ವಿಕ ಗೇಯಕಾವ್ಯವಾಗಿ ಪರಿಣಮಿಸಿದೆ.

## ಅಡಿಟಿಪ್ಪಣಿಗಳು

೧. 'ಕೇವಲಸ್ಯ ಭಾವಃಕೈವಲ್ಯಂ' : 'ಸಾಕ್ಷೀಚೇತಾ ಕೇವಲೋ ನಿರ್ಗುಣಶ್ಚ'.

೨. "ಕೈವಲ್ಯಂ ನಿರ್ವಾಣಂ ನಿಃಶ್ರೇಯಸಮಮೃತಮಕ್ಷರಂ ಬ್ರಹ್ಮ॥
ಅಪುನರ್ಭವೋಪವರ್ಗೋ ಮುಕ್ತಿರ್ಮೋಕ್ಷೋ ಮಹಾನಂದಃ॥" (ಹಲಾಯುಧ ನಿಘಂಟು೧-೧೧)
"ಮಹಾನಂದೋಮೃತ ಸಿದ್ಧಿಃ ಕೈವಲ್ಯಂ ಪುನರ್ಭವಃ।
ಶಿವಂ ನಿಃಶ್ರೇಯಸಂ ಶ್ರೇಯೋ ನಿರ್ವಾಣಂ ಬ್ರಹ್ಮ ನಿವೃತ್ತಿಃ॥"
(ಅಭಿದಾನ ಚಿಂತಾಮಣಿ-ದೇವಚಂದ್ರ ೩-೩೪)
"ಮುಕ್ತಿಃ ಕೈವಲ್ಯ ನಿರ್ವಾಣ ಶ್ರೇಯೋ ನಿಶ್ರೇಯ ಸಾಮೃತಂ।

ಮೋಕ್ಷೋಪವರ್ಗೋ (ಥಾ) ಜ್ಞಾನಮವಿದ್ಯಾಹಂ ಮತಿಃ (ಸ್ತ್ರಿಯಾಂ)॥

(ಅಮರಕೋಶ ೧-೧೬೨)

೩. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು : ಸಂ. ೨, ಪು. ೨೧೪೧

೪. ಅಮರಕೋಶ : (೧-೧೬೨) ಸಂ. ಲೂಯಿ ರೈಸ್, ಪರಿಷ್ಕರಣ: ಎನ್. ಬಾಲಸುಬ್ರಹ್ಮಣ್ಯ - ಪ್ರಸಾರಾಂಗ ಮೈ. ವಿ.ವಿ. ೧೯೮೯

೫. ಸಂಸ್ಕೃತ-ಕನ್ನಡ ಶಬ್ದಕೋಶ: ಗು. ಭೀ. ಜೋಶಿ. ಅರುಣ ಪ್ರಕಾಶನ, ಹುಬ್ಬಳ್ಳಿ ೧೯೬೫, ಪು. ೨೪೨

೬. ಸಂಸ್ಕೃತ -ಕನ್ನಡ ಶಬ್ದಕೋಶ: ಶ್ರೀನಿವಾಸ ಗೋಪಾಲಾಚಾರ್ಯ ಸಂ. ೨, ಪು. ೮೧೫(೧೯೯೭)

೭. ಸಂಸ್ಕೃತ-ಇಂಗ್ಲೀಷ ನಿಘಂಟು: ಮೋನಿಯರ್ ವಿಲಿಯಮ್ಸ್ (೧೯೬೦) ಪು. ೩೧೧

೮. ಅಮರಕೋಶ :ಪು. ೨೨(ಅ.ಟಿ.)

೯. ಕನ್ನಡದಲ್ಲಿ ಕೈವಲ್ಯ ಸಾಹಿತ್ಯ: ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರ:ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮಪ್ರಸಾರಕ.ಮಂಡಲ, ಇಲಕಲ್ಲ (೧೯೮೩) ಪು. ೨

೧೦. ಭೀಮಕವಿಯ ಬಸವಪುರಾಣ (೪೩-೭೫); ವಿವೇಕ ಚಿಂತಾಮಣಿ (೪)

೧೧. ಸಂಸ್ಕೃತ-ಇಂಗ್ಲೀಷ ನಿಘಂಟು: ಮೋನಿಯರ್ ವಿಲಿಯಮ್ಸ್ ಪು. ೩೧೧

೧೨. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂ. ೨ ಪು. ೨೧೪೧

೧೩. ಶಿವಶರಣೆಯರ ವಚನಸಂಪುಟ -ವಚನ-೯೧೧

೧೪. "ಹುಟ್ಟಿದೆಡೆಯ ಬಿಟ್ಟ ಮರನೆ, ಕೈವಲ್ಯಕೆ॥ ದೃಷ್ಟವಾದ ಹೆಮ್ಮರನೆ...." ಶಿವಯೋಗ ಪ್ರದೀಪಿಕೆ (೧೮-೩) ಸಂ: ವೀರಣ್ಣ ರಾಜೂರ (೧೯೮೧)

೧೫. "ಭಾವರಹಿತ ಜೀವನ್ಮುಕ್ತ ಸಾವಯವಾಗಿರ್ದಡೇನು।
ಕೇವಲಜ್ಞಾನ ಸ್ವರೂಪವಾದ ನಿತ್ಯಂಗೆ।
ಆವ ಭವದ ಬಾಧೆಯಿಲ್ಲ ದೇವಕಲ್ಲೇಶ್ವರನಲ್ಲಿ ।
ಕೈವಲ್ಯದ ಪದವನೊದೆದ ಮಹಂತಂಗೆ"- ಶಿವದಾಸಗೀತಾಂಜಲಿ (೫೩-೫):
ಸಂ. ಎಲ್. ಬಸವರಾಜು (೧೯೬೩)

೧೬. ಸಿದ್ಧರಾಮೇಶ್ವರ ವಚನಗಳು : ಸಂ. ಆರ್.ಸಿ. ಹಿರೇಮಠ, ಅಷ್ಟಾವರಣ ತ್ರಿವಿಧಿ, ನುಡಿ, ೨೮, ೨೯೩೦.

೧೭. ಯಕ್ಷಗಾನ ಸಾಹಿತ್ಯ: ಡಾ. ಕೆ.ಎಂ. ಕೃಷ್ಣರಾವ್ (೧೯೫೬) ಪು. ೯೯

೧೮. ಕಕಚ, III (ಹ) ಪು. ೪೨೧

೧೯. ಕರ್ನಾಟಕ ಬುಕ್ ಡಿಪೊ, ಬಳ್ಳಾರಿ, ೧೯೧೯.

೨೦. ಬ್ರಾಹ್ಮಣ ಕವಿಗಳಾದ ದೊಡ್ಡತಿಮ್ಮದಾಸ (೧೭೦೦)ನ 'ಕೈವಲ್ಯ ಚಿಂತಾಮಣಿ', ಶಂಕರಾನಂದ ಯೋಗಿ (೧೮೦೦)ಯ 'ಕೈವಲ್ಯ ನವನೀತ' ಎಂಬ ಕೃತಿಗಳೂ ಇವೆ.

೨೧. ಈ ಪಟ್ಟಿಗೆ ಸೇರುವ ಇನ್ನೂ ಅನೇಕ ಜ್ಞಾತ ಮತ್ತು ಅಜ್ಞಾತ ತತ್ವಪದಕಾರರ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು ಇವೆ.

೨೨. ತೋಂಟದ ಸಿದ್ಧಲಿಂಗೇಶ್ವರರ ಪರಂಪರೆಗೆ ಸೇರಿದ 'ಸಂಗನಬಸವೇಶ್ವರ' ಎಂಬ ಒಬ್ಬ ವ್ಯಕ್ತಿಯಿದ್ದು 'ಬಸವಲಿಂಗೇಶ್ವರ' ಎಂಬ ಅಂಕಿತದ ಈತನ ಒಂದು ವಚನ 'ಚಿದೈಶ್ವರ್ಯ ಚಿದಾಭರಣ' ಗ್ರಂಥದಲ್ಲಿ ಎಡೆ ಪಡೆದಿದೆ. ಗುರುಬಸವಾರ್ಯನ ಗುರು ಸಂಗನಬಸವೇಶ್ವರ ಹಾಗೂ ಈತ ಭಿನ್ನರೋ ಅಭಿನ್ನರೋ ತಿಳಿಯದು.

೨೩. ಕೈವಲ್ಯ ಪದ್ಧತಿ: ಸ್ವ. ವ. ೨

೨೪. ಅದೇ, ೬೭, ೬೮

೨೫. ಅದೇ, ೨೪,೧೩೧

೨೬. ಅದೇ, ೧೪

೨೭. ಅದೇ, ೬೩

೨೮. ಅದೇ, ೧೪-೭

೨೯. ಕೈವಲ್ಯಪದ್ಧತಿ: ಸ್ವ. ವ. ೧೦-೩

೩೦. ತೋಂಟದ ಸಿದ್ಧಲಿಂಗಯತಿಗಳ ಕಾಲ: ಡಾ. ಎಂ.ಎಂ. ಕಲಬುರ್ಗಿ-ಮಾರ್ಗ. ಸಂ. ೧ ಪು. ೩೮೨; ಸಂಕೀರ್ಣ ವಚನ ಸಂಪುಟ: ೧೧- ಸಂ. ಎಸ್. ಶಿವಣ್ಣ, ಪ್ರಸ್ತಾವನೆ ಪು. ೧೪

೩೧. ಕೈವಲ್ಯಪದ್ಧತಿ :ಸ್ವ.ವ. ೨೭-೨; ೭೦-೩; ೭೨-ಪಲ್ಲ

೩೨. ಸ್ವರವಚನ ಸಂಪುಟ: ೧-ಸಂ.ಎಸ್. ಶಿವಣ್ಣ ಪು. ೬೧, ಸ್ವ.ವ. ೬೫-೩ ಮತ್ತು ಪು. ೬೬ ಸ್ವ.ವ. ೭೦-೫ ಹೆಚ್ಚಿನ ವಿವರಗಳಿಗೆ ಮಹಾಬಲೇಶ್ವರ ಕಾಟ್ರಹಳ್ಳಿ ಅವರ 'ಬಾ ಗಿಳಿಯೆ ಬಾಗಳಿಗೆ' ಎಂಬ ಕೃತಿಯನ್ನು ನೋಡಬಹುದು.

೩೩. ಇಲ್ಲಿ ದೇವರ ಹೆಸರನ್ನು ವ್ಯಕ್ತವಾಗಿ ಹೇಳದೆ, ಆ ಊರಿನ ಒಡೆಯ ಎನ್ನುವ ಅರ್ಥದಲ್ಲಿ 'ಬಾಗುಳಿ' 'ಬಾಗುಳಿಯ' ಎಂದು ಬಳಸಿದ್ದಾನೆ. ಇದರಂತೆ ರಾಚೋಟಿ ವೀರಭದ್ರನಿಗೆ ರಾಚೋಟೀಶ, ಕೊಟ್ಟೂರ ಬಸವೇಶನಿಗೆ ಕೊಟ್ಟೂರೇಶ ಎಂದು ಕರೆದುದನ್ನು ನೋಡಬಹುದು.

೩೪. ಇವುಗಳಲ್ಲಿ ಒಂದು ಗುರುಪೀಠಿಕೆ, ನಾಲ್ಕು ಪದ್ಧತಿ, ಆರು ಸ್ಥಲಗಳು ಸಮಾವೇಶಗೊಂಡಿವೆ.

೩೫. ಈ ಎಲ್ಲ ವಿವರಗಳು ನಮ್ಮ ಪ್ರಾಚೀನ ಕವಿಗಳ ಕಾವ್ಯಗಳ ಪೀಠಿಕಾ ಪ್ರಕರಣದ ಮಾದರಿಯನ್ನು ಹೋಲುತ್ತವೆ.

೩೬-೩೭. ಸರ್ಪಭೂಷಣರ ಕೃತಿಯಲ್ಲಿ ಇವು-ಶಿವಕಾರುಣ್ಯ ಪ್ರಾರ್ಥನಸ್ಥಲ' ಮತ್ತು 'ನೀತಿಕ್ರಿಯಾಚರ್ಯ ಪ್ರತಿಪಾದನ ಸ್ಥಲ' ಎಂದು ಕರೆಸಿಕೊಂಡಿವೆ.

೩೮. ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯ ದರ್ಪಣ'ದಲ್ಲಿ ಸ್ಥಲವಿಭಜನೆ ಇಲ್ಲ.

೩೯. ಕೈವಲ್ಯ ಪದ್ಧತಿ (ನಿಜಗುಣ): ಸಂ.ಪಿ. ಬಸವಣ್ಣ-ಇದರ ಪ್ರಸ್ತಾವನೆಯಿಂದ ಇಲ್ಲಿನ ಕೆಲವು ಪದಗುಚ್ಛಗಳನ್ನು ಎತ್ತಿಕೊಳ್ಳಲಾಗಿದೆ.

೪೦. ೨೯,೩೦,೩೧ನೆಯ ಹಾಡುಗಳಿಗೆ ರಾಗಸೂಚನೆ ಮಾತ್ರ ಇದೆ; ತಾಳ ಸೂಚನೆ ಇಲ್ಲ ೬೦,೭೫,೮೩,೧೧೦ನೆಯ ಹಾಡುಗಳಿಗೆ ರಾಗ-ತಾಳ ಎರಡೂ ಇಲ್ಲ. ಅವು ಕ್ರಮವಾಗಿ ವಾರ್ಧಿಕ ಕುಸುಮಷಟ್ಪದಿ, ವಾರ್ಧಿಕ ಎಂದು ಛಂದೋನಾಮ ಸೂಚನೆಯನ್ನು ಪಡೆದಿವೆ.*

●

* ಚೈತನ್ಯಜಂಗಮ-ಅಭಿನಂದನ ಗ್ರಂಥ-೨೦೦೩

# ೫. ಬೋಳಬಸವೇಶ್ವರ : ಒಂದು ಸ್ಥೂಲ ಅಧ್ಯಯನ

ಬಸವಾದಿ ಪ್ರಮಥ ಪ್ರಣೀತ ವೀರಶೈವವನ್ನು ಉಜ್ವಲವಾಗಿ ಬೆಳಗಿದವರಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಹೆಸರು ಶಿರೋರತ್ನಪ್ರಾಯವಾದುದು. ಹದಿನಾರನೆಯ ಶತಮಾನದಲ್ಲಿ ಎಡೆಯೂರನ್ನು ಕೇಂದ್ರವಾಗಿಟ್ಟುಕೊಂಡು ನಾಡಿನ ಉದ್ದಗಲಕ್ಕೂ ಸಂಚರಿಸಿ, ಷಟ್‌ಸ್ಥಲ ತತ್ವಬೋಧೆಯ ಮೂಲಕ ಅಜ್ಞಾನತಮವನ್ನು ದೂಡುತ್ತ, ಜ್ಞಾನಸೂರ್ಯನಂತೆ ಜನಮನವನ್ನು ಬೆಳಗಿ, ಲೋಕಕಲ್ಯಾಣ ಮಣಿಹವನ್ನು ಅರ್ಥಪೂರ್ಣವಾಗಿ ಪೂರೈಸಿದ ಮಹಾತ್ಮನೀತ. ಆತನ ಆತ್ಮೀಯ ಪರಿಸರದಲ್ಲಿ-ಬೆಳೆದು, ಆತ ಹರಿಸಿದ ಜ್ಞಾನಗಂಗೆಯಲ್ಲಿ ಮಿಂದು, ಆತನುಣಿಸಿದ ಜ್ಞಾನಾಮೃತವನ್ನು ಸವಿದು, ಪುನೀತರಾಗಿ, ಅದನ್ನು ಲೋಕಕ್ಕೆ ಹಂಚಿ ಬದುಕಿನ ಸಾರ್ಥಕ್ಯವನ್ನು ಮೆರೆದ ವ್ಯಕ್ತಿಗಳು ಹಲವು. ಅವರಲ್ಲಿ ಬೋಳಬಸವೇಶ್ವರನ ಹೆಸರು ಅಗ್ರಗಣ್ಯವಾದುದು.

**ಬೋಳಬಸವೇಶ್ವರ:** ಬೋಳಬಸವೇಶ್ವರ ತೋಂಟದ ಸಿದ್ಧಲಿಂಗರ ತರುವಾಯ ನಿರಂಜನಪೀಠದ ಪಟ್ಟಾಧ್ಯಕ್ಷನಾಗಿ, ಗುರುವಿನ ಹಾದಿಯಲ್ಲಿಯೇ ನಡೆದು ಆ ಪೀಠದ ಘನತೆ-ಗೌರವಗಳನ್ನು ಹೆಚ್ಚಿಸಿದ ದಿವ್ಯಾತ್ಮ. ನಿರಂಜನಪೀಠದ ಪರಂಪರೆ ಶ್ರೀಮಂತವಾದುದು. ಅದರ ಆರಂಭ, ಮೂಲಪುರುಷ, ಮುಂದೆ ಆಗಿಹೋದ ನಿರಂಜನಮೂರ್ತಿಗಳ ಹೆಸರುಗಳ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ.[೧] ತೋಂಟದ ಸಿದ್ಧಲಿಂಗೇಶ್ವರರ ವಚನ (೮), ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣ, ಗುರುಸಿದ್ಧದೇವನ ಚಿದೈಶ್ವರ್ಯ ಚಿದಾಭರಣಗಳ ಪ್ರಕಾರ ಬೋಳಬಸವೇಶ್ವರನು ಹದಿನೇಳನೆಯ ಪಟ್ಟಾಧ್ಯಕ್ಷನೆನಿಸಿದರೆ,[೨] ನಿರಂಜನ ವಂಶರತ್ನಾಕರದ ಪ್ರಕಾರ ೨೦ನೆಯವನಾಗಿ, ನಿರಂಜನಜಂಗಮವಂಶದರ್ಪಣದ ಪ್ರಕಾರ ೧೮ನೆಯವನಾಗಿ ಮತ್ತು ಮಹಾದೇವನ ಮಹಾಲಿಂಗೇಂದ್ರವಿಜಯದ ಪ್ರಕಾರ ೩ನೆಯವನಾಗಿ ತೋರುತ್ತಾನೆ. ಈ ಪರಂಪರೆ ಉಳಿದ ಕೃತಿಗಳಲ್ಲಿ ಅನಾದಿ ಗಣೇಶ್ವರನಿಂದ ಆರಂಭವಾದರೆ, ನಿರಂಜನವಂಶರತ್ನಾಕರದಲ್ಲಿ ಪ್ರಭುದೇವರಿಂದ, ಮಹಾಲಿಂಗೇಂದ್ರ ವಿಜಯದಲ್ಲಿ ಚೆನ್ನಬಸವಣ್ಣನಿಂದ ಆರಂಭವಾಗುತ್ತದೆ. ಎಲ್ಲ ಕೃತಿಗಳಲ್ಲಿಯೂ ಬೋಳಬಸವೇಶ್ವರನ ಹೆಸರು ತೋಂಟದ ಸಿದ್ಧಲಿಂಗರ ನಂತರ ಕಡ್ಡಾಯವಾಗಿ ಬರುವುದರಿಂದ ಈತ ಅವರ ಪ್ರಥಮ ಪಟ್ಟದ ಶಿಷ್ಯ ಎಂಬುದು ನಿರ್ವಿವಾದ.

ಬೋಳಬಸವೇಶ ೭೦೧ ವಿರಕ್ತರಲ್ಲಿ ಒಬ್ಬ. ಭೂಲೋಕದಲ್ಲಿ ಅನಾಚಾರ ಹೆಚ್ಚಿ, ವೀರಶೈವಾಚಾರ ಕುಂದಲು, ಈಶ್ವರನ ಅಪ್ಪಣೆಯ ಮೇರೆಗೆ ಕೈಲಾಸದ ನಿರಂಜನ ಗಣೇಶ್ವರನು ಶ್ರೇಷ್ಠವಾದ ಏಳುನೂರು ಗಣೇಶ್ವರರನ್ನು ಕೂಡಿಕೊಂಡು, ಭೂಮಿಯಲ್ಲಿ ಸಿದ್ಧಲಿಂಗ ಎಂಬ ಹೆಸರಿನಿಂದ ಜನಿಸಿ, ಜಂಗಮಸ್ಥಲವನ್ನು ಸ್ವೀಕರಿಸಿ ಷಟ್‌ಸ್ಥಲವನ್ನು ಉದ್ಧರಿಸಿದನು ಎಂದು ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣದಲ್ಲಿ ಹೇಳಲಾಗಿದೆ. ಅಲ್ಲದೆ ೩೩ ಜನ ವಿರಕ್ತರ ಹೆಸರುಗಳನ್ನೂ ಅದರಲ್ಲಿ ಉಲ್ಲೇಖಿಸಲಾಗಿದೆ. ಇವರಲ್ಲಿ ಕೆಲವರ ಹೆಸರುಗಳನ್ನು ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣ, ಸಿದ್ಧನಂಜೇಶನ ಗುರುರಾಜ ಚಾರಿತ್ರ ಮತ್ತು ಎಡೆಯೂರ ಶಾಸನಗಳಲ್ಲಿಯೂ ಕಾಣಬಹುದು.[೩] ಬೋಳಬಸವೇಶ್ವರನ ಹೆಸರು ಮಾತ್ರ ನಾಲ್ಕೂ ಕೃತಿಗಳಲ್ಲಿ ನಿಯತವಾಗಿ ಬರುವುದರಿಂದ ಈತ ಏಳುನೂರಾ ಒಂದು ವಿರಕ್ತರಲ್ಲಿ ತುಂಬ ಪ್ರಸಿದ್ಧನಾಗಿದ್ದ ಎಂದು ಹೇಳಬಹುದು.

**ಹೆಸರು:** ಬೋಳಬಸವೇಶ್ವರನಿಗೆ ಬೋಳಬಸವ[೪], ಬೋಳಬಸವೇಶ[೫], ಬೋಳಬಸವೇಶ್ವರ[೬], ಬೋಳಬಸವರಾಜ[೭], ಬೋಳಬಸವದೇವ[೮], ಬೋಳಬಸವಾರ್ಯ,[೯] ಬೋಳಬಸವೇಶಾರ್ಯ[೧೦], ಬೋಳಬಸವೇಶಾಚಾರ್ಯ,[೧೧] ಬೋಳಬಸವರಾಜದೇವರು,[೧೨] ಬೋಳಬಸವೇಶಸ್ವಾಮಿ[೧೩], ಬೋಳಬಸವದೇಶಿಕ[೧೪], ಬೋಳೇಶ, ಬೋಳೇಶ್ವರ,[೧೫] ನಿರಕ್ಷರ ಬೋಳಬಸವೇಶ್ವರ,[೧೬] ನಿಜಬೋಳಬಸವ,[೧೭] ಶಿವಪೂಜೆಯಾರ್ಯ,[೧೮] ಶಿವಪೂಜೆ ಯಾರ್ಯನೆಂದೆನಿಪ ಬೋಳಬಸವೇಶ[೧೯] ಎಂಬ ನಾಮಾಂತರಗಳಿವೆ. ಈತನ ಹೆಸರು ಉಲ್ಲೇಖಿಸುವ ಮೊದಲ ಕೃತಿಯೆಂದರೆ ಗುಬ್ಬಿಯ ಮಲ್ಲಣಾರ್ಯನ (೧೫೩೦) ಭಾವಚಿಂತಾರತ್ನ. ಅದರಲ್ಲಿ ಈತನಿಗೆ ಶಿವಪೂಜೆಯಾರ್ಯನೆಂದು ಕರೆಯಲಾಗಿದೆ.[೨೦] ಈ ಶಿವಪೂಜೆಯಾರ್ಯನೇ ಬೋಳಬಸವೇಶನೆಂಬುದಕ್ಕೆ ಚೆನ್ನಬಸವಪುರಾಣದ 'ಶಿವಪೂಜೆಯಾರ್ಯನೆಂದೆನಿಪ ಬೋಳಬಸವೇಶ'[೨೧] ಎಂಬ ಹೇಳಿಕೆ ಸ್ಪಷ್ಟೀಕರಣ ನೀಡುತ್ತದೆ. ನಿರಂಜನ ವಂಶರತ್ನಾಕರ ಮತ್ತು ಮಹಾಲಿಂಗೇಂದ್ರ ವಿಜಯಗಳಲ್ಲಿ ಈತನನ್ನು 'ನಿರಕ್ಷರ ಬೋಳ ಬಸವೇಶ್ವರ' ಎಂದು ಕರೆದಿದೆ. ಈತನಿಗೆ ಈ ಹೆಸರು ಬರಲು ಕಾರಣವನ್ನು ಮಹಾಲಿಂಗೇಂದ್ರ ವಿಜಯದಲ್ಲಿ ಕೊಡಲಾಗಿದೆ.[೨೨]

ಚಿಕ್ಕಂದಿನಲ್ಲಿ ಈತನಿಗೆ ಮಾತು ಬರುತ್ತಿರಲಿಲ್ಲವಾದುದರಿಂದ 'ನಿರಕ್ಷರ'ನೆಂದೂ ಬಹಳ ಬೋಳೇ (ಸಾಧು) ಸ್ವಭಾವದವನಾದುದರಿಂದ 'ಬೋಳ'[೨೩]ನೆಂದೂ ಭಕ್ತಿ ಭಂಡಾರಿಯಾದುದರಿಂದ 'ಬಸವ'ನೆಂದೂ-ಹೀಗೆ ಎಲ್ಲ ಸೇರಿ 'ನಿರಕ್ಷರ ಬೋಳಬಸವೇಶ'ನೆಂಬ ಅನ್ವರ್ಥಕನಾಮ ಪ್ರಾಪ್ತವಾಯಿತಂತೆ. ತೋಂಟದ ಸಿದ್ಧಲಿಂಗರ ಕೃಪೆಯಿಂದ ಈ ನಿರಕ್ಷರಿಗೆ ಅಕ್ಷರಜ್ಞಾನ ಬರುತ್ತದೆ. ಅಂದಿನಿಂದ ಈತ ಅವರ ಶಿಷ್ಯತ್ವ ವಹಿಸಿ, ಅವರ ಸನ್ನಿಧಿಯಲ್ಲಿಯೇ ಇದ್ದು, ನಿತ್ಯ ಅವರ ಶಿವಪೂಜೆಗೆ ವಸ್ತುಗಳನ್ನು ಅಣಿಮಾಡುವ ಪವಿತ್ರಕಾರ್ಯವನ್ನು ವಹಿಸಿಕೊಂಡಿರಬೇಕು.[೨೪] ಈ ಕಾರಣದಿಂದ ಈತನಿಗೆ 'ಶಿವಪೂಜೆಯಾರ್ಯ'ಎಂಬ ಹೆಸರು

ರೂಢಿಗೊಂಡಿರಬೇಕು. ಕಾಲಾಂತರದಲ್ಲಿ ಈತನು ಮಹಾಜ್ಞಾನಿಯಾಗಿ ಧರ್ಮತತ್ವಬೋಧೆಗೆ ತೊಡಗಿದಾಗ ಈ ಹೆಸರು ಅಪ್ರಚಲಿತವಾಗಿ, ನಿರಕ್ಷರ ಬೋಳಬಸವೇಶ ಎಂಬ ಹೆಸರಿನಲ್ಲಿಯ 'ನಿರಕ್ಷರ' ಎಂಬ ವಿಶೇಷಣವೂ ಮಾಯವಾಗಿ ಕೇವಲ 'ಬೋಳಬಸವೇಶ' ಎಂಬುದು ಮಾತ್ರ ಉಳಿದುಕೊಂಡಿರಬೇಕು. ಅದನ್ನೇ ಮುಂದೆ ಬಂದ ಕವಿಗಳೆಲ್ಲ ಬಳಸುತ್ತ ಬಂದಿರಬೇಕು. ಮಹಾಂತಸ್ವಾಮಿಯ ನಾಂದ್ಯದಲ್ಲಿ ಈತನನ್ನು 'ನಿಜಬೋಳಬಸವ' ಎಂದು ಕರೆಯಲಾಗಿದೆ.[೫೫] ಇದು ಈತನ ಸತ್ಯನಿಷ್ಠೆಗೆ ಅನುಗುಣವಾಗಿ ಬಂದ ಹೆಸರಾಗಿರಬೇಕು.

ಇನ್ನು ಈತನ ಹೆಸರಿಗೆ ಹತ್ತಿರ ಆರ್ಯ, ಆಚಾರ್ಯ, ದೇವ, ರಾಜ, ಈಶ, ಈಶ್ವರ, ಸ್ವಾಮಿ, ದೇಶಿಕ ಎಂಬುವು ಈತನ ಮಹಾನ್ ವ್ಯಕ್ತಿತ್ವಕ್ಕೆ ಸಲ್ಲಿಸಿದ ಗೌರವಸೂಚಿ ಪದಗಳಾಗಿವೆ.[೫೬]

ಸ್ಥಳ: ಗುಬ್ಬಿಯ ಮಲ್ಲಣಾರ್ಯ ತನ್ನ ಭಾವಚಿಂತಾರತ್ನದಲ್ಲಿ ಶಿವಪೂಜೆಯಾರ್ಯನನ್ನು ಕುರಿತು - "ಶಿವನ ಕಲ್ಯಾಣದುತ್ಸವದ ನಾಗವಲ್ಲಿಯ ಮೆರೆವ ಶಿವಪೂಜೆಯಾರ್ಯ"[೫೭] "ಕಥೆಯರಿವ ಯತಿ ನಾಗವಲ್ಲಿಯುರು ಶಿವಪೂಜೆಯಾರ್ಯ"[೫೮] ಎಂದು ಹೇಳಿದ್ದಾನೆ. ಇಲ್ಲಿ ಬರುವ 'ನಾಗವಲ್ಲಿ' ಎಂಬುದು ಶಿವಪೂಜೆಯಾರ್ಯನ ಸ್ಥಳವಾಗಿರಬೇಕು. ಇದು ಚಾಮರಾಜ ನಗರ ತಾಲೂಕಿಗೆ ಸೇರಿದ ಒಂದು ಊರು. ಇಲ್ಲಿ ದೊರೆತ ಒಂದು ಶಾಸನದಲ್ಲಿ[೫೯] 'ಶಿವಭಕ್ತಿಗೆ ಕಲ್ಯಾಣವೆನಿಸಿದ ನಾಗವಲ್ಲಿ' ಮತ್ತು ಶಾಸನದಲ್ಲಿ ಬಣ್ಣಿಸಿದ 'ಶಿವಭಕ್ತಿಗೆ ಕಲ್ಯಾಣವೆನಿಸಿದ ನಾಗವಲ್ಲಿ' ಎರಡೂ ಒಂದೇ ಎಂಬುದರಲ್ಲಿ ಸಂಶಯವಿಲ್ಲ.[೬೦] ಶಿವಭಕ್ತಿಗೆ ಆಗರವೆನಿಸಿದ ಈ ಊರಲ್ಲಿ 'ಬಸವೇಶ್ವರರ ಮಹತ್ವವನ್ನು ಶರಣರಿಗೆ ತಿಳಿಸುವುದರಲ್ಲಿ ನಿಪುಣನೆನಿಸಿ ತನ್ನ ವಚನದಿಂದಲೂ ಭಕ್ತಿಯಿಂದಲೂ ಕೀರ್ತಿಯನ್ನು ಗಳಿಸಿದ್ದ ಯತಿಯಾಗಿದ್ದ ಶಿವಪೂಜೆಯಾರ್ಯ ಎಂಬುದು ಮಲ್ಲಣಾರ್ಯನ ಹೇಳಿಕೆ.' ಆದರೆ ಭಾವಚಿಂತಾರತ್ನಕ್ಕೆ ಟೀಕೆಯನ್ನು ಬರೆದ ಮರಿಸಿದ್ಧಲಿಂಗದೇಶಿಕ ಅಥವಾ ಪಟ್ಟುಗಂಬಳಿಯ ಸಿದ್ಧಲಿಂಗ (೧೭೪೧)- ಈತನು 'ಗಿರಿಜಾಕಲ್ಯಾಣ ಕೃತಿಯನ್ನು ನಾಗವಲ್ಲಿಯಲ್ಲಿ ಪ್ರತಿವರ್ಷವೂ ಮೆರವಣಿಗೆ ಮಾಡಿಸುತ್ತಿದ್ದ ಒಬ್ಬ ಗುರು' ಎಂದು ಹೇಳುತ್ತಾನೆ.[೬೧] ಅಂತೂ ಶಿವಪೂಜೆಯಾರ್ಯನ ಮೂಲಸ್ಥಳ ನಾಗವಲ್ಲಿ ಎಂಬುದು ಸ್ಪಷ್ಟ.[೬೨]

ಗುರುರಾಜಚಾರಿತ್ರದಲ್ಲಿ ಬೋಳಬಸವೇಶ್ವರನು ಬಿಜ್ಜಾವರದಲ್ಲಿ ಮಹಿಮೆಯನ್ನು ಮೆರೆಯುತ್ತ ಇದ್ದು ಅಲ್ಲಿಯೇ ಐಕ್ಯವಾದ ಎಂದು ಹೇಳಿದರೆ, ವಿರಕ್ತತೋಂಟದಾರ್ಯನ ಸಿದ್ಧೇಶ್ವರಪುರಾಣದಲ್ಲಿ ಈತ ಕಗ್ಗೆರೆಯಲ್ಲಿ ಸಿದ್ಧಲಿಂಗರಿಂದ ಷಟ್‌ಸ್ಥಲಬೋಧೆ ಮಾಡಿಸಿಕೊಂಡ ಎಂದು, ನಿರಂಜನವಂಶರತ್ನಾಕರದಲ್ಲಿ ಈತ ಎಡೆಯೂರಿನಲ್ಲಿ ಭಕ್ತಿಯಿಂದ ಪೂಜೆಗೊಳ್ಳುತ್ತಿದ್ದು ಮಧುಗಿರಿಯಲ್ಲಿ ಐಕ್ಯವಾದ ಎಂದು, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಈತ ಬಿಜ್ಜಾವರದಲ್ಲಿ ಮುಮ್ಮಡಿ ಚಿಕ್ಕಭೂಪಾಲನಿಗೆ ಪಟ್ಟಗಟ್ಟಿದ ಎಂದು, ಮಹಾಲಿಂಗೇಂದ್ರ ವಿಜಯದಲ್ಲಿ ಈತ ಮದ್ಗಿರಿಯಲ್ಲಿ ಐಕ್ಯನಾದ ಎಂದು ತಿಳಿಸಲಾಗಿದೆ.

ಈ ಎಲ್ಲ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಹೀಗೆ ಹೇಳಬಹುದು: ಬೋಳ ಬಸವೇಶ್ವರ ಮೂಲತಃ ನಾಗವಲ್ಲಿಯವನಾಗಿದ್ದು, ನಂತರ ಸಿದ್ಧಲಿಂಗರ ಶಿಷ್ಯತ್ವ ವಹಿಸಿ ಎಡೆಯೂರಿಗೆ ಬಂದಿರಬೇಕು. ಅಲ್ಲಿ ಅವರಿಂದ ಷಟ್‌ಸ್ಥಲಬೋಧೆ ಪಡೆದು ದೇಶಸಂಚಾರ ಕೈಕೊಂಡು ಮುಂದೆ ಅವರ ಶಿಷ್ಯರಾದ ಮಹಾನಾಡಪ್ರಭುಗಳ ರಾಜಧಾನಿ ಬಿಜ್ಜಾವರಕ್ಕೆ ಬಂದು ರಾಜಗುರುವಾಗಿ, ಮದ್ದಗಿರಿಯಲ್ಲಿ ನಿಂತು ವೀರಶೈವ ತತ್ವಪ್ರಚಾರ, ರಾಜಕಾರ್ಯ ಎರಡನ್ನೂ ನೆರವೇರಿಸಿ ಅಲ್ಲಿಯೇ ಐಕ್ಯವಾಗಿರಬೇಕು.

ಬೋಳಬಸವೇಶ್ವರನ ಐಕ್ಯಸ್ಥಳವನ್ನು ತಿಳಿಸುವ ಕೃತಿಗಳಲ್ಲಿ ಏಕಾಭಿಪ್ರಾಯವಿಲ್ಲ. ಗುರುರಾಜಚಾರಿತ್ರ ಬಿಜ್ಜಾವರ ಎಂದು ಹೇಳಿದರೆ, ನಿರಂಜನವಂಶರತ್ನಾಕರ ಮತ್ತು ಮಹಾಲಿಂಗೇಂದ್ರವಿಜಯ ಮದ್ಗಿರಿ ಎಂದು ಹೇಳುತ್ತವೆ. ಆದರೆ ಇಂದು ಈತನ ಗದ್ದುಗೆ ಇರುವುದು ಸಿದ್ಧಾಪುರದಲ್ಲಿ. ಇದು ಈ ರಾಜರ ಪರಮಗುರುವಾದ ಸಿದ್ಧಲಿಂಗೇಶ್ವರರ ಹೆಸರಿನಲ್ಲಿ 'ಸಿದ್ಧಲಿಂಗಪುರ'[೩೩] ಎಂಬ ಹೆಸರಿನಿಂದ ಕಟ್ಟಿಸಿದ ಊರೆಂದು ತಿಳಿದುಬರುತ್ತದೆ.[೩೪] ಬಿಜ್ಜಾವರ-ಮದ್ದಗಿರಿ-ಸಿದ್ಧಾಪುರ-ಈ ಮೂರು ಊರುಗಳು ಒಂದೇ ಸೀಮೆಯಲ್ಲಿ ಇದ್ದು, ಹಿಂದೆ ಒಂದೇ ವಿಸ್ತರಣಕ್ಕೆ ಒಳಪಟ್ಟವುಗಳಾಗಿರಬೇಕು.[೩೫] .

**ಕಾಲ:** ಇತ್ತೀಚಿನ ಹೊಸ ಆಧಾರಾಂಶಗಳ ಹಿನ್ನೆಲೆಯಲ್ಲಿ ತೋಂಟದ ಸಿದ್ಧಲಿಂಗರ ಜೀವಿತಕಾಲವನ್ನು ೧೬ನೆಯ ಶತಮಾನದ ಉತ್ತರಾರ್ಧವೆಂದು ನಿರ್ಧರಿಸಲಾಗಿದೆ.[೩೬] ಇದರಿಂದ ಅವರ ಪ್ರಥಮ ಶಿಷ್ಯನೆನಿಸಿದ ಬೋಳಬಸವೇಶ್ವರನ ಕಾಲವೂ ಸಹಜವಾಗಿ ಈಚೆಗೆ ಸರಿದುಬರುತ್ತದೆ. ಬೋಳಬಸವೇಶ್ವರನನ್ನು ಉಲ್ಲೇಖಿಸುವ, ಈಗ ಉಪಲಬ್ಧವಾದ ಪ್ರಥಮ ಆಕರವೆಂದರೆ ೧೫೧೩ರಲ್ಲಿ ರಚಿತವಾದ ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ. ಇದರಿಂದ ಬೋಳಬಸವೇಶ್ವರ (ಶಿವಪೂಜೆಯಾರ್ಯ) ಇದಕ್ಕಿಂತ ಪೂರ್ವದಲ್ಲಿ ಇದ್ದನೆಂಬುದು ಖಚಿತ.

ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ಬೋಳಬಸವೇಶ್ವರನ ಕಾಲನಿರ್ಧಾರಕ್ಕೆ ಆಧಾರವಾದ ಮತ್ತೊಂದು ಮಹತ್ವದ ಕೃತಿ. ಬಿಜ್ಜಾವರದ ಮಹಾನಾಡಪ್ರಭುಗಳ ಇತಿಹಾಸದ ಮೇಲೆ ಬೆಳಕುಚೆಲ್ಲುವ ಇದರಲ್ಲಿ ಬೋಳಬಸವೇಶ್ವರ ಈ ಅರಸರಿಗೆ ರಾಜಗುರುವಾಗಿದ್ದನೆಂಬ ಸಂಗತಿ ವ್ಯಕ್ತವಾಗಿದೆ. ಈ ಕೃತಿಯ ನಾಯಕ ಇಮ್ಮಡಿ ಚಿಕ್ಕಭೂಪಾಲ ಮತ್ತು ಅವನ ಮಗ ತೋಟೇಂದ್ರ ಸು. ೧೫೫೪ರಲ್ಲಿ ನಡೆದಿರಬಹುದಾದ ಹರವೆ ಕಾಳಗದಲ್ಲಿ ಮಡಿಯುತ್ತಾರೆ. ಆಗ ಇಮ್ಮಡಿ ಚಿಕ್ಕಭೂಪಾಲನ ಎರಡನೆಯ ಮಗ ಸಪ್ಪೇಂದ್ರ ಅಥವಾ ಮುಮ್ಮಡಿ ಚಿಕ್ಕಭೂಪಾಲನಿಗೆ ಬೋಳಬಸವೇಶ್ವರನು ಪಟ್ಟಗಟ್ಟಿ ಹರಸುತ್ತಾನೆ.[೩೭] ಇದು ೧೫೫೪ರಲ್ಲಿ ಬೋಳಬಸವೇಶ್ವರ ಇನ್ನೂ ಜೀವಿಸಿದ್ದನೆಂಬುದಕ್ಕೆ ಸಾಕ್ಷಿ.

ಸಿದ್ಧನಂಜೇಶ ತನ್ನ ಗುರುರಾಜ ಚಾರಿತ್ರದಲ್ಲಿ "....ಶ್ರೀ ಕೈಲಾಸಪುರದ ಬಾಗಿಲೊಳು ತಮ್ಮಯ ಪಾದಸೇವನಾತುರನು ಬಿಜ್ಜಾವರದ ಗೌಡ ತೋಂಟನ ತಡೆದುಮಿರ್ದಪರು, ನಾವು ಪೋಗಿ ಬಿಡಿಸಿ ಕರೆದೊಯ್ಯುವೇಳ್ಕೆಂದು ಸರ್ವರೊಳುಸುರ್ದು ಪೊಡವಿ ಬೆರಗಾಗಲಾ

ಶಿವಸಮಾಧಿಯೊಳೆಯ್ದಿ ಮೃಡನ ಸನ್ನಿಧಿಗೆ ಕರೆದೊಯ್ದು ಮೋಕ್ಷವನಿತ್ತ ಪ್ರತ್ಯಕ್ಷ ಶಿವಮೂರ್ತಿಯು'[೩೮] ಎಂದು ಬೋಳಬಸವನನ್ನು ಕುರಿತು ಹೇಳಿದ್ದಾನೆ. ಇಲ್ಲಿ ಉಲ್ಲೇಖಿಗೊಂಡ ಬಿಜ್ಜಾವರದ ಗೌಡತೋಂಟನೆಂದರೆ ಇಮ್ಮಡಿ ಚಿಕ್ಕಭೂಪಾಲನ ಮಗ ತೋಟೇಂದ್ರ ಎಂಬುದು ಸ್ಪಷ್ಟ. ಇವನು ತನ್ನ ತಂದೆಯ ಜೊತೆಯಲ್ಲಿ ವೈರಿಗಳೊಡನೆ ಹೋರಾಡಿ ಹರವೆ ಕಾಳಗದಲ್ಲಿ ಮಡಿದ ಎಂಬ ವಿಷಯ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಉಕ್ತವಾಗಿದೆ ಎಂಬುದನ್ನು ಮೇಲೆ ಉಲ್ಲೇಖಿಸಲಾಗಿದೆ. ಈತನನ್ನು ಕೈಲಾಸಪುರದ ಬಾಗಿಲಲ್ಲಿ ತಡೆಯಲು ಬೋಳಬಸವೇಶ್ವರನು ಶಿವಸಮಾಧಿಯನ್ನು ಹೊಂದಿ ಹೋಗಿ ಬಿಡಿಸಿ ಅವನನ್ನು ಮೃಡನ ಸನ್ನಿಧಿಗೆ ಕರೆದೊಯ್ದು ಮೋಕ್ಷವೀಯುತ್ತಾನೆ. ಅಂದರೆ ತೋಟೇಂದ್ರ ತೀರಿದ ಕೆಲವೇ ದಿನಗಳಲ್ಲಿ ಬೋಳಬಸವೇಶ್ವರನೂ ಐಕ್ಯನಾದನು ಎಂಬ ಧ್ವನಿ ಇಲ್ಲಿ ಅಡಗಿರುವಂತೆ ಕಾಣುತ್ತದೆ. ಇದರಿಂದ ಬೋಳಬಸವೇಶ್ವರನು ಸಪ್ಪೇಂದ್ರನಿಗೆ ಪಟ್ಟಗಟ್ಟಿ ಸ್ವಲ್ಪೇ ದಿನಗಳಲ್ಲಿ ಅಂದರೆ ೧೫೪೪ರಲ್ಲಿಯೇ ಶಿವಸಮಾಧಿಯನ್ನು ಹೊಂದಿದನು ಎಂದು ಹೇಳಬೇಕಾಗುತ್ತದೆ. ಈ ಆಧಾರಗಳ ಮೇಲಿಂದ ಬೋಳಬಸವೇಶ ೧೫೧೩ಕ್ಕಿಂತ ಮೊದಲು ಹುಟ್ಟಿ, ೧೫೪೪ರಲ್ಲಿ ಐಕ್ಯವಾದನು ವೆಂದು ನಿರ್ಧರಿಸಬಹುದು. ಈತ ೯೭ ವರ್ಷ ಬಾಳಿ ಬದುಕಿದನೆಂದು ನಿರಂಜನವಂಶರತ್ನಾಕರ ಮತ್ತು ಮಹಾಲಿಂಗೇಂದ್ರ ವಿಜಯಗಳಲ್ಲಿ ಹೇಳಲಾಗಿದೆ. ಮೇಲಿನ ಕಾಲಾವಧಿ ಈ ಹೇಳಿಕೆಗೆ ಪುಷ್ಟಿ ನೀಡುತ್ತದೆ.

**ಜೀವನ ಚರಿತ್ರೆ:** ಬೋಳಬಸವೇಶ್ವರನ ಜೀವನೇತಿಹಾಸ ಕುರಿತ ಸಾಮಗ್ರಿ ತೀರ ಅಲ್ಪ. ತೋಂಟದ ಸಿದ್ಧಲಿಂಗರನ್ನು ಕುರಿತು ವಿಪುಲ ಸಾಹಿತ್ಯ ದೊರಕುವಾಗ, ಅವರ ತರುವಾಯ ನಿರಂಜನ ಪೀಠದ ಅಧ್ಯಕ್ಷನಾಗಿ ವೀರಶೈವಧರ್ಮ ತತ್ವಗಳನ್ನು ಪ್ರಚುರಪಡಿಸುವಲ್ಲಿ ಮಹತ್ವದ ಪಾತ್ರವಾಡಿ, 'ಎರಡನೆಯ ಸಿದ್ಧದೇಶಿಕ'ನೆಂದು ಶಿಷ್ಯರಿಂದ ಗೌರವಿಸಿಕೊಂಡ ಈತನ ಬಗೆಗೆ ಈತ ಮಾಡಿದ ಸಾಧನೆ, ಸಿದ್ಧಿಗಳನ್ನು ವಿವರಿಸುವ ಒಂದೂ ಕೃತಿ ರಚನೆಗೊಳ್ಳದೆ ಇರುವುದು ಸೋಜಿಗದ ಸಂಗತಿ.[೩೯]

ತೋಂಟದ ಸಿದ್ಧಲಿಂಗರ ಚರಿತ್ರೆಯನ್ನು ಹೇಳುವ ಕೆಲವು ಕಾವ್ಯಗಳಲ್ಲಿ ಕೊನೆಗೆ ಸಿದ್ಧಲಿಂಗರು ತಮ್ಮ ಶಿಷ್ಯನಾದ ಬೋಳಬಸವೇಶ್ವರನಿಗೆ ಷಟ್‌ಸ್ಥಲೋಪದೇಶ ಮಾಡಿ, ನಿರಂಜನಪೀಠದ ಪಟ್ಟಾಧಿಕಾರವನ್ನು ವಹಿಸಿ ನಿರ್ವಿಕಲ್ಪಸಮಾಧಿಯನ್ನು ಹೊಂದಿದರು ಎಂದು ಮಾತ್ರ ಹೇಳಲಾಗಿದೆ. ಅದೇ ಮಹಾತ್ಮನ ಚರಿತ್ರೆಯನ್ನು ಹೇಳುವ ಶಾಂತೇಶನ ಸಿದ್ಧೇಶ್ವರ ಪುರಾಣ, ಚೆನ್ನವೀರಜಂಗಮದೇವನ ಷಟ್‌ಸ್ಥಲವಲ್ಲಭ ಕೃತಿಗಳಲ್ಲಿ ಈ ವಿಷಯವೂ ಸಹಿತ ಬರದೇ ಇರುವುದು ಇನ್ನೂ ವಿಸ್ಮಯದ ಸಂಗತಿಯಾಗಿದೆ. ವಿರಕ್ತತೋಂಟದಾರ್ಯರ ಸಿದ್ಧೇಶ್ವರ ಪುರಾಣ, ತೀರ ಈಚಿನದಾದ ಮಹಾದೇವನ (೧೮೭೦) ಮಹಾಲಿಂಗೇಂದ್ರವಿಜಯ, ಗದ್ಯಕೃತಿಗಳಾದ ನಿರಂಜನಜಂಗಮವಂಶದರ್ಪಣ ಮತ್ತು ನಿರಂಜನವಂಶರತ್ನಾಕರಗಳಲ್ಲಿ ಈತನನ್ನು ಕುರಿತ ಕೆಲವು ಹೆಚ್ಚಿನ ವಿವರಗಳು ದೊರೆಯುತ್ತವೆ. ಸಿದ್ಧನಂಜೇಶನ

ಗುರುರಾಜಚಾರಿತ್ರ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರಪುರಾಣ, ಗುಬ್ಬಿಮಲ್ಲಣಾರ್ಯನ ಭಾವಚಿಂತಾರತ್ನಗಳಲ್ಲಿ ಈತನ ವ್ಯಕ್ತಿ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡ ಸ್ತುತಿಪದ್ಯಗಳು ಬಂದರೆ, ಸಂಪಾದನೆಯ ಪರ್ವತೇಶನ ಚತುರಾಚಾರ್ಯಪುರಾಣ, ಸಂಪಾದನೆಯ ಗುರುಲಿಂಗದೇವನ ಶೀಲವಂತಯ್ಯನ ತ್ರಿವಿಧಿ ವ್ಯಾಖ್ಯಾನ, ಸೋಮಶೇಖರ ಶಿವಯೋಗಿಯ ಷಟ್‌ಸ್ಥಲಜ್ಞಾನಸಾರಾಮೃತ ಬೆಡಗಿನ ವಚನಗಳ ಟೀಕೆ, ಮಹಾಂತಸ್ವಾಮಿಯ ನಾಂದ್ಯ, ಬಸವಲಿಂಗ ಶಿವಯೋಗಿಯ ಮಾಚಿದೇವ ಮನೋವಿಲಾಸ ಮತ್ತು ಎಡೆಯೂರ ಶಾಸನಗಳಲ್ಲಿ ಗುರುಪರಂಪರೆಯ ಮಾಲಿಕೆಯಲ್ಲಿ ಈತನ ಹೆಸರು ಮಾತ್ರ ಉಲ್ಲೇಖವಾಗಿದೆ.

ಅಲ್ಲಲ್ಲಿ ಬರುವ ಬಿಡಿಬಿಡಿಯಾದ ಈ ಎಳೆಗಳನ್ನು ಜೋಡಿಸಿ ಬೋಳಬಸವೇಶ್ವರನ ಜೀವನಚರಿತ್ರೆಯನ್ನು ಕೆಳಗಿನಂತೆ ಹೆಣೆಯಬಹುದು:

ನಾಗವಲ್ಲಿ ಎಂಬ ಊರಲ್ಲಿ ಶಿವಪೂಜೆಯಾರ್ಯನೆಂಬ ಶರಣನಿದ್ದ. ನಿತ್ಯ ನಿಷ್ಠೆಯಿಂದ ಶಿವಪೂಜೆ ಮಾಡುವುದು ಅವನ ಕಾಯಕವಾಗಿತ್ತು. ಅವನಿಗೆ ನಿರಕ್ಷರ ಬೋಳಬಸವನೆಂದು ಮತ್ತೊಂದು ಹೆಸರು. ಚಿಕ್ಕಂದಿನಲ್ಲಿ ಆತ ನಿರಕ್ಷರಿಯೂ ಬೋಳೇಸ್ವಭಾವದವನೂ ಸದ್ಭಕ್ತಿಸಂಪನ್ನನೂ ಆದುದರಿಂದ ಆತನಿಗೆ ಈ ಹೆಸರು ಅನ್ವರ್ಥಕವಾಗಿ ಬಂದಿತ್ತು.

ಕಾಲಾಂತರದಲ್ಲಿ ಈತನಿಗೆ ತೋಂಟದ ಸಿದ್ಧಲಿಂಗರ ಕೃಪೆಯಿಂದ ಮಾತು ಬಂತು; ಮಾತಿಗೆ ಮೀರಿದ ಮತಿ ಪ್ರಾಪ್ತವಾಯಿತು. ವೇದ ಆಗಮ ಉಪನಿಷತ್ತು ಪುರಾಣ ನ್ಯಾಯ ತರ್ಕ ಮೀಮಾಂಸೆ ವ್ಯಾಕರಣ ಛಂದಸ್ಸು, ಸಕಲ ಶಾಸ್ತ್ರಗಳಲ್ಲಿ ಆತ ಪಾರಂಗತನಾದ. ಕೇವಲ ಇಪ್ಪತ್ತೊಂದು ದಿನಗಳಲ್ಲಿ ಆತ ಸುಜ್ಞಾನಿ, ವಾಗ್ಮಿದಾವರ, ವಾದಪಟುವಾಗಿ ತನ್ನೊಡನೆ ಸ್ಪರ್ಧೆಗಿಳಿದವರನ್ನು ಸುಲಭವಾಗಿ ಜಯಿಸಿದ. ತಾನು ಸಂಪಾದಿಸಿದ ಈ ಅಪೂರ್ವ ಜ್ಞಾನವನ್ನು ಲೋಕಕಲ್ಯಾಣಕ್ಕಾಗಿ ಹಂಚತೊಡಗಿದ.

ಹೀಗಿರುವಾಗ ತೋಂಟದ ಸಿದ್ಧಲಿಂಗರು ಲೋಕಸಂಗ್ರಹಕ್ಕಾಗಿ ಷಟ್‌ಸ್ಥಲೋಪದೇಶ ಮಾಡುತ್ತ ಸಂಚಾರ ಕೈಕೊಂಡರು. ಅವರ ಹಿಂದೆ ೭೦೦ ಜನ ವಿರಕ್ತ ಚರಮೂರ್ತಿಗಳು ಸಾಗಿದರು. ಅವರಲ್ಲಿ ಬೋಳಬಸವನೂ ಒಬ್ಬನಾಗಿ ನಡೆದ. ಗುರುವಿನ ಸೇವೆಯನ್ನು ಭಯ-ಭಕ್ತಿ-ನಿಷ್ಠೆಗಳಿಂದ ಮಾಡತೊಡಗಿದ. ಆದರಿಂದ ಸಹಜವಾಗಿ ಈತನ ಮೇಲೆ ಗುರುವಿನ ಕೃಪಾಕಟಾಕ್ಷ ಬಿದ್ದಿತು. ದಿನದಿಂದ ದಿನಕ್ಕೆ ಗುರುಶಿಷ್ಯರಲ್ಲಿ ಆತ್ಮೀಯತೆ ಬೆಳೆಯಿತು. ಬೋಳಬಸವ ಗುರುವಿನ ಅಂತರಂಗದ ಶಿಷ್ಯನಾದ. ಗುರುಗಳು ತಾವು ಕಂಡುಂಡು, ಸಾಧಿಸಿದ ಅನುಭವಾಮೃತವನ್ನು ಈತನಿಗೆ ಎರೆಯುತ್ತ ನಡೆದರು. ಹಾಗೇ ಊರಿಂದೂರಿಗೆ, ನಾಡಿನಿಂದ ನಾಡಿಗೆ, ದೇಶದಿಂದ ದೇಶಕ್ಕೆ ಸಂಚಾರ ಸಾಗಿತು. ಅಲ್ಲಲ್ಲಿ ಬಯಸಿ ಬಂದ ಭಕ್ತರನ್ನು ಉದ್ಧರಿಸುತ್ತ, ಅವರಿಗೆ ಬಂದ ರೋಗರುಜಿನ ಆಪತ್ತು-ವಿಪತ್ತುಗಳನ್ನು ಪರಿಹರಿಸುತ್ತ ಅನೇಕ ಪವಾಡಗಳನ್ನು ಮೆರೆಯುತ್ತ ಮುನ್ನಡೆದರು.

ಹಾಗೆ ನಡೆದು ಕಗ್ಗೆರೆಗೆ ಬಂದರು. ಅಲ್ಲಿ ಗುರುಸಿದ್ಧಲಿಂಗರು ಲಿಂಗಾರ್ಚನೆಯಲ್ಲಿ ಮಗ್ನರಾದರು. ಬಾಹ್ಯಪ್ರಪಂಚದ ಅರಿವನ್ನು ಮೀರಿ ಶಿವಯೋಗಸಮಾಧಿಯಲ್ಲಿ ಮುಳುಗಿದರು. ಗುರುವಿನ ಲಿಂಗಲೀಲಾವಿಲಾಸವನ್ನು, ಲಿಂಗಾರ್ಚನನಿಷ್ಠೆಯನ್ನು ಕಂಡು ಬೋಳಬಸವ ನಿಬ್ಬೆರಗಾದ. ಮನದುಂಬಿ ಸ್ತುತಿಸಿದ; ಹರ್ಷದಿಂದ ಕುಣಿದು ಕುಪ್ಪಳಿಸಿದ; ಕುಕಿಲಿರಿದು ಕೂಗಿದ.

ಮತ್ತೊಂದು ದಿನ ನಾಗಿಣಿನದಿಯ ತೀರದ ಶಿಲಾಮಂಟಪದಲ್ಲಿ ಸರ್ವವಿರಕ್ತರ ಮಧ್ಯ ಸಿದ್ಧಲಿಂಗಗುರು ಮಂಡಿಸಿದ್ದರು. ಬೋಳಬಸವ ಕಂಡು ಅತ್ಯಂತ ಹರ್ಷಚಿತ್ತನಾಗಿ ಬಂದು ಸಾಷ್ಟಾಂಗವೆರಗಿದ. ಚರಣಕಮಲವನ್ನು ಅಪ್ಪಿ "ಉಜ್ವಲಮಹಾತೇಜೋಮೂರ್ತಿ, ಕಾರುಣ್ಯನಿಲಯ ಮದ್ಗುರುವೆ, ಸದ್ಗುರುವೆ, ಚಿದ್ಗುರುವೆ ಷಟ್‌ಸ್ಥಲವನರುಪಿ ಸಲಹೆನ್ನನು" ಎಂದು ಬಿನ್ನವಿಸಿದ. ಗುರು ಸಿದ್ಧಲಿಂಗರಿಗೆ ಅತ್ಯಾನಂದವಾಯಿತು. ನಸುನಗುತ್ತ ಶಿಷ್ಯನ ಶಿರವಿಡಿದು ಕರುಣೆಯಿಂದ ಮೇಲೆತ್ತಿ ಕಾರುಣ್ಯಾಮೃತ ಕಟಾಕ್ಷಗಳಿಂದ ನೋಡಿ, ಮೈದಡವಿ "ನೀನು ಕೇಳಿದ ಮಹಾಪ್ರಶ್ನೆ ಲೇಸಾದುದು. ಹೇಳುವೆ ಚಿತ್ತಶುದ್ಧಿಯಿಂದ ಕೇಳು" ಎಂದು ವಿವರಿಸತೊಡಗಿದರು. 'ವೀರಶೈವರಲ್ಲಿ ಜನ್ಮವೊಂದರಲ್ಲಿಯೇ ನಿಜಮೋಕ್ಷ' ಎಂದು ವೀರಶೈವದ ಮಹತಿಯನ್ನು ಹೇಳುತ್ತ, ಮುಂದೆ ಭಕ್ತಾದಿ ಐಕ್ಯಾಂತ ಷಟ್‌ಸ್ಥಲಗಳ ಸ್ವರೂಪ-ಸಂಬಂಧ-ಲಕ್ಷಣಗಳನ್ನು, ಅಂಗಸ್ಥಲ ಲಿಂಗಸ್ಥಲ ಸಮನ್ವಿತ ಏಕೋತ್ತರ ಶತಸ್ಥಲಗಳ ರಚನೆ-ರಹಸ್ಯವನ್ನು 'ವಿರತಕುಲ ತಿಲಕ'ನೆನಿಸಿದ ಬೋಳಬಸವನಿಗೆ ಬೋಧಿಸಿದರು. ಕೊನೆಯಲ್ಲಿ "ಕೇಳಲ್ಕೆ ಕಂದ ನಿನಗೀಮಾರ್ಗವಳವಟ್ಟಿತು.. ಅವನಿಯೊಳು ಕುಂದದಾನಂದದಿಂದಾ ಚರಿಸುತಿರ್ಪುದು." "ಈ ಸಹಜ ಷಟ್‌ಸ್ಥಲಬ್ರಹ್ಮಮಂ ಮುಮುಕ್ಷುಗಳಿಗೊಲವಿಂದರಿಪಿ ರಕ್ಷಿಸುವುದು" ಎಂದು ಹೇಳಿದರು. ಅದಕ್ಕೆ ಬೋಳಬಸವೇಶ್ವರನು ಸಂದೇಹ-ಸಂತೋಷಗಳಿಂದ "ಸದ್ಗುರುವೆ, ನೀನಿಂತೇ ಪರಿಯೊಳು ನಿರವಿಸಲು ಎನಗೆ ಸತ್ವವುಂಟೆ ಬೋಧಿಸುವೊಡೆಲ್ಲಕೆ?" ಎಂದು ಪ್ರಶ್ನಿಸುತ್ತಾನೆ. ಆಗ ಸಿದ್ಧಲಿಂಗ-"ನಿನಗೇಕೆ ಸಂದೆಯಂ ಅಖಿಳಲೋಕದೊಳಗೆ। ಅನುವಿನಿಂ ಪರಮ ಷಟ್‌ಸ್ಥಲದೆ ಸನ್ಮಾರ್ಗಮಂ। ಘನಹರ್ಷದಿಂದುಂಟುಮಾಡಲೆಂದ ವನಿಯೊಳು ಬಂದ ಕಾರಣದಿ ನಾನು ॥ ನಿನಗೆ ಪೇಳ್ದೆನು ನೀನವರ ಚಿತ್ತಗಳನರಿದು । ವಿನಯದಿಂದವರ ಬೋಧಿಸಿ ನಿಲಿಸಿ ನಿಜಮುಕ್ತಿ। ವನಿತೆಯೊಳಗೇಕತ್ವಮಂ ಮಾಳ್ಪುದು..." (೨೫-೪) ಎಂದು ತಿಳಿಸಿದ. ಬೋಳಬಸವನಿಗೆ ಇದು ನುಂಗಲೂಬಾರದ, ಉಗುಳಲೂಬಾರದ ಬಿಸಿತುಪ್ಪದಂತೆನಿಸಿತು. ಆದರೆ ತನಗೀಕಾರ್ಯ ಅನಿವಾರ್ಯವೆಂದು ಅನಿಸಿ, ಮತ್ತೆ ಗುರುವಿನಲ್ಲಿ ಸಂದೇಹ ಪರಿಹಾರಕ್ಕಾಗಿ "ದೇವ ನೀವು ನನ್ನ ಮೇಲಿನ ಪ್ರೀತಿಯಿಂದ ಹೀಗೆ ಹೇಳುತ್ತಿದ್ದೀರಿ. ಆದರೆ ನನಗೊಂದೂ ತಿಳಿಯದು. ಈ ಲೋಕದಲ್ಲಿ ಷಟ್‌ಸ್ಥಲಬ್ರಹ್ಮವನ್ನು ಯಾರಿಗೆ ಹೇಳಬೇಕು? ಇದನ್ನು ಕೇಳಲು ಯೋಗ್ಯ ಅಧಿಕಾರಿಗಳು ಯಾರು? ದಯವಿಟ್ಟು ತಿಳಿಸಿ ರಕ್ಷಿಸಬೇಕು" ಎಂದು ವಿನಂತಿಸಿಕೊಳ್ಳುತ್ತಾನೆ. ಆಗ ತೋಂಟದಾರ್ಯರು ಅದನ್ನು

ವಿವರಿಸತೊಡಗುತ್ತಾರೆ; ಅನಂತರ ಉನ್ನತವಾದ ಆಸನದ ಮೇಲೆ ಬೋಳಬಸವೇಶನನ್ನು ಕುಳ್ಳಿರಿಸಿ, ಸತ್ಕರುಣದಿಂದ ಪ್ರಸಾದದ ವೀಳೆಯವನ್ನು ಕೊಟ್ಟು, ಜಯಘೋಷಗಳನ್ನು ಮಾಡುವ ಸುಜ್ಞಾನಿಗಳ ಮಧ್ಯೆ, ಲೋಕಹಿತಕ್ಕೋಸ್ಕರ ಷಟ್‌ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿ ಆನಂದಿಸಿದರು. ಅದನ್ನು ಕಂಡು ಸಪ್ಪೆಯದೇಶಿಕ, ಪಟ್ಟಣದದೇವ, ಚಂದ್ರಶೇಖರದೇವ, ದೊಡ್ಡ ಸಿದ್ಧೇಶ, ಬಿಟ್ಟಿಗದೇವ, ಶೀಲವಂತೇಶ, ಉಪ್ಪಿನಹಳ್ಳಿಯಯ್ಯ ಮೊದಲಾದ ಶಿಷ್ಯಸಮೂಹವೆಲ್ಲ ಸಂತಸಗೊಂಡು, ಇವನು 'ಎರಡನೆಯ ಸಿದ್ಧದೇಶಿಕ'ನಲ್ಲದೆ ಬೇರಲ್ಲ ಎಂದು ಭಾವಿಸಿ, ಈತನಿಂದ ಲೋಕದಲ್ಲಿ ಕುಂದದೆ ಷಟ್‌ಸ್ಥಲಮಾರ್ಗ ಪಸರಿಸುವುದು ಎಂದು ನಲಿದಾಡುತ್ತ, ಸಕಲಸನ್ಮಾರ್ಗವನ್ನು ಅವನಿಂದ ತಿಳಿದು, ಶಿವಜ್ಞಾನಯುಕ್ತರಾಗಿ ಅವಿರಳನಿಜಾನಂದದಲ್ಲಿ ಮುಳುಗಿದರು.

ಭೂಮಿಯ ಮೇಲಿನ ವಿರಕ್ತರೆಲ್ಲ ಪ್ರೀತಿಯಿಂದ ಬಂದು ಬೋಳಬಸವನ ಚರಣ ಕಮಲಕ್ಕೆರಗಿ, ಷಟ್‌ಸ್ಥಲಮಾರ್ಗವನ್ನು ತಿಳಿದು, ಭಕ್ತಿ ಜ್ಞಾನ ವೈರಾಗ್ಯಸಂಪನ್ನರಾಗಿ ಸತ್ಕೀರ್ತಿಯನ್ನು ಹೊಂದಿ ಲೋಕದಲ್ಲೆಲ್ಲ ಸಂಚರಿಸತೊಡಗಿದರು. ಲೋಕದಲ್ಲೆಲ್ಲ ಷಟ್‌ಸ್ಥಲಬ್ರಹ್ಮಿಗಳು ತುಂಬಿ, ಭೂತಳವೆಲ್ಲ ಷಟ್‌ಸ್ಥಲಮಯವಾಗಲು ಚಿಜ್ಯೋತಿ ಸ್ವರೂಪನಾದ ತೋಂಟದಾರ್ಯ ಇದನ್ನು ಕಂಡು ಸಂತಸವಟ್ಟು, ಪ್ರೀತಿಯಿಂದ ಬೋಳಬಸವ ಮೊದಲಾದ ತನ್ನ ಶಿಷ್ಯರನ್ನೆಲ್ಲ ಹತ್ತಿರ ಕರೆದು, ಸಂತೈಸಿ, "ಭೂತಳದೊಳಾನೆನ್ನ ಸ್ವಾತಂತ್ರ್ಯದಿಂ ಬಂದ ಲೀಲೆ ಸೌಖ್ಯವನಿತ್ತುದು" ಎಂದು ಹೇಳಿ ಶಿವಯೋಗ ಸಮಾಧಿಯಲ್ಲಿ ಮೂರ್ತಗೊಂಡರು.

ಮುಂದೆ ಬೋಳಬಸವ ಗುರುವಿನ ಆಣತಿಯನ್ನು ಶಿರದಲ್ಲಿ ಧರಿಸಿ ಲೋಕಸಂಚಾರ ಕೈಕೊಂಡು ಗುರುವಿನಂತೆ ಅನೇಕ ಮಹಿಮೆಗಳನ್ನು ಮೆರೆದನು. ತನ್ನಿಂದ ಈ ಲೋಕದ ಜನ ಉದ್ಧಾರವಾಗಲಿ ಎಂದು ಬೋಧನ ಸಂಸ್ಥೆಯನ್ನು ಸ್ಥಾಪಿಸಿ, ಏಳುನೂರು ಜನ ಚರಮೂರ್ತಿಗಳಿಗೆ ಮತ್ತು ಮೂರುಸಾವಿರ ಜನ ವಿರಕ್ತರಿಗೆ ಶಾಸ್ತ್ರಾದಿಗಳನ್ನು ಬೋಧಿಸಿ, ಸಮಾಜಸುಧಾರಣೆಯ ಕಾರ್ಯದಲ್ಲಿ ಅವರು ಪಾಲ್ಗೊಳ್ಳಲು ಯೋಗ್ಯವಾದ ತರಬೇತಿಯನ್ನು ಕೊಟ್ಟನು. "ಸಮಾಜದಲ್ಲಿ ಮುಂದಾಳೆನಿಸಿಕೊಳ್ಳುವ ಜನ ಚೆನ್ನಾದ ಹೊರತು ಸಾಮಾನ್ಯ ಜನದ ಜೀವನ ಹಸನಾಗಲು ಉತ್ತೇಜನ ದೊರೆಯದೆಂಬುದು "[೬೦] ಆತನ ನಿಲುಮೆಯಾಗಿತ್ತು. ಅದಕ್ಕಾಗಿ ಸ್ವತಃ ಜ್ಞಾನಿಯಾದ ಅವನು ಮುಂದಿನ ತನ್ನ ಉತ್ತರಾಧಿಕಾರಿಗಳು ಸಮಾಜದಲ್ಲಿ ಋಜುತ್ವವನ್ನು ಪ್ರಸಾರಮಾಡಲು ಸಮರ್ಥರಾಗಬೇಕೆಂದು ಅಂಥ ಸಂನ್ಯಾಸಿಗಳ ಮತ್ತು ಸಂತರ ಒಂದು ದೊಡ್ಡ ತಂಡವನ್ನೇ ಸಿದ್ಧಗೊಳಿಸಿ ಈ ಮೂಲಕ ತನ್ನ ಗುರುವಿನ ಕನಸನ್ನು ನನಸಾಗಿಸುವತ್ತ ದಿಟ್ಟ ಹೆಜ್ಜೆಗಳನ್ನಿಟ್ಟನು. ದೇಶಸಂಚಾರ ಕೈಕೊಂಡಾಗ ವೀರಶೈವ ಸಿದ್ಧಾಂತವನ್ನು ಪ್ರತಿಭಟಿಸಿದವರನ್ನು ವಾದದಿಂದ ಸೋಲಿಸಿ, ಇಚ್ಛಿಸಿದಲ್ಲಿ ಅವರಿಗೆ ದೀಕ್ಷೆಯನ್ನು ಕೊಟ್ಟನು.

ಗುರುವಿನಿಂದ ದೊರೆತ ಗಣಸಮೂಹ ಮುಂತಾದ ೭೨ ಬಿರುದುಗಳುಳ್ಳ ಸಕಲ ಸಂಭ್ರಮವನ್ನು ಒಪ್ಪಿಸಿಕೊಂಡನು. ಎಡೆಯೂರಿನಲ್ಲಿ ಪೂಜೋತ್ಸವಗಳನ್ನು ನೆರವೇರಿಸುತ್ತ, ನಿತ್ಯ ಗುರುವಿನ ಪೂಜೆ, ಜಂಗಮದಾಸೋಹ ಸಾಂಗವಾಗಿ ನಡೆಯುವ ವ್ಯವಸ್ಥೆ ಮಾಡಿದನು.

ಹಾಗೇ ದೇಶಸಂಚಾರ ಮಾಡುತ್ತ ತೋಂಟದ ಸಿದ್ಧಲಿಂಗರ ಕೃಪಾಪಾತ್ರರಾದ ಬಿಜ್ಜಾವರದ ಮಹಾನಾಡಪ್ರಭುಗಳ ರಾಜಧಾನಿಗೆ ಬಂದನು. ಅವರಿಂದ ಸೇವೆಯನ್ನು ಸ್ವೀಕರಿಸಿ, ರಾಜಗುರುವಾಗಿ ಯೋಗ್ಯ ಮಾರ್ಗದರ್ಶನ ನೀಡಿದನು. ಎಡೆಯೂರಿನ ನಂತರ ಬಿಜ್ಜಾವರವನ್ನು ತನ್ನ ಧರ್ಮಪ್ರಚಾರದ ಕೇಂದ್ರವನ್ನಾಗಿ ಮಾಡಿಕೊಂಡು ವಿಧಾಯಕ ಕಾರ್ಯಗಳನ್ನು ಎಸಗಿದನು. ಹರವೆಯ ಕಾಳಗದಲ್ಲಿ ಇಮ್ಮಡಿ ಚಿಕ್ಕಭೂಪಾಲ ಮತ್ತು ಅವನ ಮಗ ತೋಟೇಂದ್ರ ವೀರಮರಣವನ್ನಪ್ಪಲು, ಇಮ್ಮಡಿ ಚಿಕ್ಕಭೂಪಾಲನ ಎರಡನೆಯ ಮಗ ಸಪ್ಪೇಂದ್ರನಿಗೆ ಪಟ್ಟಗಟ್ಟಿ ಹರಸಿದನು. ಬಿಜ್ಜಾವರದಿಂದ ಸಪ್ಪೇಂದ್ರ ತನ್ನ ರಾಜಧಾನಿಯನ್ನು ಮದ್ದಗಿರಿಗೆ ಸ್ಥಳಾಂತರಿಸಲು, ಬೋಳಬಸವನೂ ತನ್ನ ಧರ್ಮಪ್ರಚಾರಕೇಂದ್ರವನ್ನು ಮದ್ದಗಿರಿಗೆ ವರ್ಗಾಯಿಸಿದನು. ಅಲ್ಲಿ ಅನೇಕ ಮಹಿಮೆಗಳನ್ನು ಮೆರೆದು, ಲಿಂಗಾಭಿಷೇಕ ಉದಕವನ್ನು ಮಸ್ತಕದಲ್ಲಿ ಧರಿಸಿ ಶರಣಾಗತರ ಬಯಕೆಗಳನ್ನು ಈಡೇರಿಸುತ್ತ 'ಭೂತಳದಲ್ಲಿ ಚರಿಸುವ ಮಹಾಮಹಿಮ' ಎಂದು ಹೊಗಳಿಸಿಕೊಳ್ಳುತ್ತ ಇರುವಾಗ, ಒಂದು ದಿನ ಒಣಗಿದ ಅತ್ತಿಯ ಮರವನ್ನು ಕರುಣಕಟಾಕ್ಷದಿಂದ ನೋಡಿ, ಆ ಕ್ಷಣವೇ ಅದು ಚಿಗುರುವಂತೆ, ಫಲಗಳಿಂದ ತುಂಬುವಂತೆ ಮಾಡಿದ. ಅದನ್ನು ಕಂಡು ಜನರೆಲ್ಲ ಹೊಗಳಿ ಗೌರವ ಸಲ್ಲಿಸಿದರು. ಹೀಗೆ ಇರುವಾಗ ಮತ್ತೊಂದು ದಿವಸ ಕೈಲಾಸಪುರದ ಬಾಗಿಲಲ್ಲಿ ತಮ್ಮ ಪಾದಸೇವಾತುರನಾದ ಬಿಜ್ಜಾವರದ ಗೌಡ ತೋಂಟನ ತಡೆದಿದ್ದಾರೆಂದು, ತಾನು ಹೋಗಿ ಬಿಡಿಸುತ್ತೇನೆಂದು ಎಲ್ಲರಿಗೂ ಹೇಳಿ ಭೂಮಿಯ ಜನರೆಲ್ಲ ಬೆರಗಾಗುವಂತೆ ಶಿವಸಮಾಧಿಯಲ್ಲಿ ನಿಂತು, ಆತನನ್ನು ಶಿವನ ಸನ್ನಿಧಿಗೆ ಕರೆದೊಯ್ದು ಮೋಕ್ಷವನ್ನು ಕರುಣಿಸಿದನು. ಹೀಗೆ ಬೋಳಬಸವೇಶ್ವರನು ೯೬ ವರ್ಷ ಕಾಲ ಬದುಕಿದ್ದು, ನಿತ್ಯವೂ ಮಾನವಕಲ್ಯಾಣ ಕುರಿತು ಚಿಂತಿಸುತ್ತ ಮದ್ದಗಿರಿಯಲ್ಲಿ-ಇಂದಿನ ಸಿದ್ಧಾಪುರದಲ್ಲಿ-ಸಿದ್ಧಸಮಾಧಿಯನ್ನು ಹೊಂದಿದನು.

**ವ್ಯಕ್ತಿತ್ವ:** ಬೋಳಬಸವೇಶ್ವರನು ಘನವ್ಯಕ್ತಿತ್ವವನ್ನು ಪಡೆದ ಸಾತ್ವಿಕ ಶಿವಯೋಗಿಯಾಗಿದ್ದ. ಆತನ ಈ ವ್ಯಕ್ತಿತ್ವದ ಅನನ್ಯತೆಯನ್ನು ಕವಿಗಳು ಮುಕ್ತಕಂಠದಿಂದ ಹೊಗಳಿದ್ದಾರೆ. ಆತನ ಶಿಷ್ಯರು ನುಡಿಗೌರವ ಸಲ್ಲಿಸಿದ್ದಾರೆ. ವಿರಕ್ತತೋಂಟದಾರ್ಯ ಆತನನ್ನು ಚಿಂತಾರಹಿತ, ಮಹಾಚಾರ್ಯ, ಅಘತಿಮಿರಸೂರ್ಯ, ವಿರತಕುಲತಿಲಕ, ಷಟ್‌ಸ್ಥಲಾಚಾರ್ಯ, ಪರಮಸಚ್ಚರಿತ, ಗುರುಕುಲಾಗ್ರಣಿ, ಚಿದಾನಂದಸ್ವರೂಪ, ಸಂಯಮೀಶ್ವರ, ಪರಮಶಿವಮೂರ್ತಿ ಎಂದು ಕರೆದರೆ, ಸಿದ್ಧನಂಜೇಶ ಪರಮಶಾಂತಮೂರ್ತಿ, ಮಹಾಮಹಿಮ, ಅನಘಪಾವನ ಸಂಯಮಿ, ಘನವಿರಕ್ತ ಪ್ರತ್ಯಕ್ಷ ಶಿವಮೂರ್ತಿ ಎಂದು ಬಣ್ಣಿಸಿದ್ದಾನೆ. ಗುಬ್ಬಿಯ ಮಲ್ಲಣಾರ್ಯನು ನಿರ್ಮಲಕೀರ್ತಿ, ಶ್ರೇಷ್ಠಭಕ್ತಿ, ಮುದ್ದುವಚನದಿಂದ ಕಲ್ಯಾಣದ ಬಸವನ


ಮಹತ್ವವನ್ನು ಶರಣರಿಗೆ ಕಲ್ಯಾಣದುತ್ಸವ ಮಾಡಲು ಬಂದವನು ಎಂದು ಹೇಳುತ್ತಾನೆ.

ಮಲ್ಲಿಕಾರ್ಜುನನು "ವರಗುಣಭೂಷಣ ಸೂನೃತಭೂಷಣ ದುರಿತ ಕರ್ದಮ ಶೋಷಣ, ಕರುಣಾಕರ" ಎಂದೂ ಮಹಾದೇವನು "ಕಡುವಿರಕ್ತ, ವಿಷಯ ಪ್ರಪಂಚ ನಿರ್ಲಿಪ್ತ, ಬಂಧುಬಾಂಧವ ಸಂಬಂಧರಹಿತ, ಘನಜಗದ್ಗುರು, ಮೋಹವೆಂಬ ಮೇಘ ಮಾಲೆಗೆ ಚಂಡಮಾರುತ, ಭಕ್ತರೆಂಬ ತಾವರೆ ತಂಡಕ್ಕೆ ಉದಯೋನ್ಮುಖ ಸೂರ್ಯ" ಎಂದೂ ವರ್ಣಿಸಿದ್ದಾರೆ. ಗುಮ್ಮಳಾಪುರದ ಸಿದ್ಧಲಿಂಗ 'ಅಘದೂರ ಬೋಳಬಸವಾಚಾರ್ಯನ ಕಾರುಣ್ಯದಿಂದ ಶೂನ್ಯಬೋಧೆಯನ್ನು ಹೇಳಿದೆ'ನೆಂದೂ ಬೋಳಬಸವೇಶ್ವರನ ಕೃಪೆಯಿಂದ ಸಿದ್ಧೇಶ್ವರನೆಂಬ ಪರುಷ ಎನಗೆ ಸಾಧ್ಯವಾಯಿತೆಂದೂ ತಿಳಿಸುತ್ತಾನೆ. ಗೂಳೂರ ಸಿದ್ಧವೀರಣ್ಣೊಡೆಯ 'ಆಮಿಷಕುಂತಳ ಛೇದ್ಯನಾದ.ಬೋಳಬಸವದೇಶಿಕನ ಕೃಪೆಯಿಂದ ಅಲ್ಲಮಪ್ರಭುರಾಯನ ಪರಮಾನುಭಾವಬೋಧೆಯನ್ನು ಬರೆದೆ'ನೆಂದೂ ಹೇಳುತ್ತಾನೆ. ಅಲ್ಲದೆ "ಜಗದಾರಾಧ್ಯರಪ್ಪ ತೋಂಟದ ಸಿದ್ಧಲಿಂಗೇಶ್ವರರ ಕೃಪಾಪ್ರಸನ್ನ ಪಾತ್ರರಾದ ಬೋಳಬಸವೇಶ್ವರ" "ತೋಂಟದ ಸಿದ್ಧಲಿಂಗ ಸದ್ಗುರುವರನಾಥನಾದರದೊಳಿರ್ಪ ಬೋಳಬಸವೇಶ್ವರ" ಎಂದು ಆತನನ್ನು ವಿಶೇಷಿಸಿದ್ದಾನೆ. ಸಂಪಾದನೆಯ ಪರ್ವತೇಶ ತನ್ನ ಚತುರಾಚಾರ್ಯಪುರಾಣದಲ್ಲಿ "ಗುರುವಿನನುಪಮವೀಟಿಕಾ ಪ್ರಸಾದದ ಮಹಿಮಸರಸಾನುಭಾವನಾದ ಬೋಳಬಸವ" ಎಂದು, ಸಂಪಾದನೆಯ ಗುರುಲಿಂಗದೇವ ತನ್ನ ಶೀಲವಂತಯ್ಯನ ತ್ರಿವಿಧಿವ್ಯಾಖ್ಯಾನದಲ್ಲಿ "ತೋಂಟದ ಸಿದ್ಧಲಿಂಗಪ್ರಭುವೆಂಬಾಚಾರ್ಯರ ನಿಜದಿರಿವಿನಾಚರಣೆಯನುಭವಿಯೇ ಬೋಳಬಸವೇಶ್ವರನು"ಎಂದು ಹೇಳಿದ್ದಾರೆ.


ಈ ಎಲ್ಲ ಗುಣ ವಿಶೇಷಣಗಳು ಬೋಳಬಸವನೊಬ್ಬ ಶ್ರೇಷ್ಠ ವಿರಕ್ತನಾಗಿದ್ದ, ಮಹಾನುಭಾವಿಯಾಗಿದ್ದ ಸಚ್ಚಾರಿತ್ರ, ಸದ್ಭಕ್ತಿ, ಕಡುಸಂಯಮ, ಸಾತ್ವಿಕತೆ, ಸದ್ಗುಣಗಳ ಸಂಗಮವೆನಿಸಿ ಶಿವಸಾಕಾರವೆನಿಸಿದ್ದ, 'ಸದ್ಗುರುವಿನಿಂದಾದ ಶಿಷ್ಯ ಸದ್ಗುರುವಪ್ಪುದು ತಪ್ಪದು' ಎಂಬಂತೆ ಘನಗುರು-ಗುರುಕುಲಾಗ್ರಣಿ ಎನಿಸಿದ್ದ. ಪಾಪದೂರನಾಗಿ, ಪಾಪಿಗಳನ್ನು ತನ್ನ ಪರುಷದೃಷ್ಟಿ-ಪರುಷನುಡಿ-ಪರುಷಹಸ್ತದಿಂದ ಪವಿತ್ರಗೊಳಿಸುವ ಪರಶಿವಮೂರ್ತಿ ಎನಿಸಿದ್ದ, ಪರಮಶಾಂತಿಯೇ ಮೈವೆತ್ತಂತಿರುವ ಪರಂಜ್ಯೋತಿಸ್ವರೂಪನಾಗಿದ್ದ ಎಂಬುದನ್ನು ಎತ್ತಿ ಹೇಳುತ್ತವೆ; ಆತನ ವ್ಯಕ್ತಿತ್ವದ ಉತ್ತುಂಗತೆಯನ್ನು ಹೊತ್ತು ಸಾರುತ್ತವೆ.

**ಶಿಷ್ಯಪರಂಪರೆ:** ತೋಂಟದ ಸಿದ್ಧಲಿಂಗರ ಶಿಷ್ಯ-ಪ್ರಶಿಷ್ಯ ಪರಂಪರೆ ಅನಂತ ಶಾಖೋಪಶಾಖೆಗಳಲ್ಲಿ ಹಬ್ಬಿ ಮಹಾವೃಕ್ಷವಾಗಿ ಬೆಳೆದುನಿಂತಿದೆ. ಇವರ ಶಿಷ್ಯರಲ್ಲಿ ಬೋಳಬಸವೇಶ್ವರನಿಗೆ ಅಗ್ರಪ್ರಾಶಸ್ತ್ಯ. ಸಿದ್ಧಲಿಂಗರ ಪ್ರಥಮ ಶಿಷ್ಯನಾಗಿ ಅವರ ನಂತರದಲ್ಲಿ ನಿರಂಜನಪೀಠವನ್ನು ಮುಂದುವರಿಸಿಕೊಂಡು ಸಾಗಿದ ಈತನಿಂದ ಅನುಗ್ರಹಿತರಾಗಿ, ಶಿಷ್ಯತ್ವ ವಹಿಸಿ ಸಾಹಿತ್ಯ-ಸಿದ್ಧಾಂತ-ಅಧ್ಯಾತ್ಮ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರ ಸಂಖ್ಯೆ ಅಪಾರ. ಅವರಲ್ಲಿ ಕೆಲವರು ಕೇವಲ ಅಧ್ಯಾತ್ಮವಾದಿಗಳಾಗಿ ಷಟ್‌ಸ್ಥಲೋಪದೇಶ ಮಾಡುತ್ತ

ಲೋಕಕಲ್ಯಾಣಕಾರ್ಯದಲ್ಲಿ ತೊಡಗಿದವರಾದರೆ, ಮತ್ತೆ ಕೆಲವರು ಸಾಹಿತ್ಯಸೃಷ್ಟಿ ಮಾಡಿ ಅಧ್ಯಾತ್ಮತತ್ವಗಳನ್ನು ಸಾಹಿತ್ಯಕೃತಿಗಳ ಮೂಲಕ ಜನತೆಗೆ ಬೋಧಿಸಿದವರು. ಇನ್ನೂ ಕೆಲವರು ಬಸವಾದಿಪ್ರಮಥರು ಉಸುರಿದ ವಚನಸಾಹಿತ್ಯವನ್ನು ಶೋಧಿಸುವ, ಸ್ಥಲಾನುಗುಣವಾಗಿ ಜೋಡಿಸುವ, ವ್ಯಾಖ್ಯಾನ, ಟೀಕೆ-ಟಿಪ್ಪಣಿ ಬರೆಯುವ ಕಾರ್ಯದಲ್ಲಿ ತೊಡಗಿದವರು. ವಿವಿಧ ಮೂಲಗಳಲ್ಲಿ ದೊರೆಯುವ ಆತನ ಶಿಷ್ಯ-ಪ್ರಶಿಷ್ಯ ಪರಂಪರೆಯನ್ನು ಅದರಲ್ಲಿ ಉಂಟಾದ ಕವಲುಗಳನ್ನು ಕೆಳಗಿನಂತೆ ಗುರುತಿಸಬಹುದು:




* i. ಷಟ್‌ಸ್ಥಲಜ್ಞಾನಸಾರಾಮೃತ ಬೆಡಗಿನವಚನ ಟೀಕೆ
ii. ಶೀಲವಂತಯ್ಯನ ತ್ರಿವಿಧಿ ವ್ಯಾಖ್ಯಾನ
iii. ಚತುರಾಚಾರ್ಯಪುರಾಣ
iv. ಪಾಲ್ಕುರಿಕೆ ಸೋಮನಾಥ ಪುರಾಣ
v. ಮಾಚಿದೇವ ಮನೋವಿಲಾಸ




* ಸಿದ್ಧಲಿಂಗ ಶಿವಯೋಗಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ, ಪು. ೧೧೨ರ ನಂತರದ ನಕ್ಷೆ.

| | | | |
|---|---|---|---|
| ಸದಾಶಿವ ಸ್ವಾಮಿ | ಶಿರಹಟ್ಟಿ ಸಿದ್ಧಲಿಂಗಸ್ವಾಮಿ | | ಶಾಂತವೀರದೇಶಿಕ |
| ಮಹಾಂತಸ್ವಾಮಿ | ಗುರುಪಾದಸ್ವಾಮಿ | | ಕುಮಾರದೇಶಿಕ |
| ವೃದ್ಧತೋಂಟದಾರ್ಯ | ಮೂರು ಸಾವಿರದ ಗುರುಪಾದಸ್ವಾಮಿ | | ಶಿವಪೂಜಾ ಬಸವಲಿಂಗದೇಶಿಕ |
| ಮೃತ್ಯುಂಜಯ ಸ್ವಾಮಿ | ಮೂರುಸಾವಿರದ ಸಿದ್ಧಲಿಂಗಸ್ವಾಮಿ | | |
| ಸಿದ್ಧೇಶ್ವರ ಸ್ವಾಮಿ | ಒಪ್ಪೊತ್ತಿನ ಚೆನ್ನವೀರಸ್ವಾಮಿ | ಗುರುಮಲ್ಲಸ್ವಾಮಿ | ಇಮ್ಮಡಿ ಬಸವಲಿಂಗದೇಶಿಕ |
| ಗುರುಬಸವಸ್ವಾಮಿ | ವ್ಯಾಕರಣದ ಸಿದ್ಧಲಿಂಗಸ್ವಾಮಿ | | ಸಿದ್ಧಬಸವಲಿಂಗದೇಶಿಕ |
| ಶಿವಕುಮಾರಸ್ವಾಮಿ | ನಿಘಂಟಿನ ಸಿದ್ಧಬಸವಸ್ವಾಮಿ | | ಬಸವಲಿಂಗದೇಶಿಕ |
| ತೋಂಟದ ಸಿದ್ಧಲಿಂಗಸ್ವಾಮಿ (ಗದುಗಿನಲ್ಲಿದ್ದವರು) | ಸಣ್ಣಬರಹದ ರಾಚೋಟಿಸ್ವಾಮಿ | | |
| | ಮಹಾಲಿಂಗಸ್ವಾಮಿ | | |
| | ಹೆಬ್ಬಾಳದ ರುದ್ರಸ್ವಾಮಿ | | |
| | ಮುಪ್ಪಿನ ರುದ್ರಸ್ವಾಮಿ | | |
| | ಮುಪ್ಪಿನಸ್ವಾಮಿ | | |
| | ಜಯದೇವಸ್ವಾಮಿ | | |
| | ಜಯವಿಭವಸ್ವಾಮಿ | | |
| | ಮಲ್ಲಿಕಾರ್ಜುನಸ್ವಾಮಿ | | |
| | ಶಿವಮೂರ್ತಿ ಶರಣರು (ಚಿತ್ರದುರ್ಗದ ಬೃಹನ್ಮಠದ ಅಧ್ಯಕ್ಷರು) | | |

ಕನ್ನಡ ಸಾಹಿತ್ಯ ಮತ್ತು ಸೈದ್ಧಾಂತಿಕ ಕ್ಷೇತ್ರಗಳಿಗೆ ಬೋಳಬಸವೇಶನ ಶಿಷ್ಯರು ಕೊಟ್ಟ ಕೊಡುಗೆ ಅನನ್ಯವಾದುದು. ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯರು ಶಿವಶರಣರ ಮಹಾನುಭಾವ ಪ್ರಸಂಗವೆನಿಸಿದ ಶೂನ್ಯಸಂಪಾದನೆಗಳನ್ನು ಸಂಯೋಜಿಸಿದರೆ, ಹರತಾಳ ಚೆನ್ನಂಜೇದೇವ, ಎಳಮಲೆಯ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣಾರ್ಯ, ಸಂಪಾದನೆಯ ಬೋಳಬಸವ ಮೊದಲಾದವರು ಬಸವಾದಿ ಶರಣರ ವಚನಗಳನ್ನು ಸಂಗ್ರಹಿಸುವ, ಸ್ಥಲಾನುಗುಣವಾಗಿ ಸಂಕಲಿಸುವ ಕಾರ್ಯ ಮಾಡಿ, ಪರ್ವತಶಿವಯೋಗಿ, ವಿರಕ್ತತೋಂಟದಾರ್ಯ, ಎಳಂದೂರ ಹರೀಶ್ವರ, ಆನಂದ ಬಸವಲಿಂಗಶಿವಯೋಗಿ, ಕಟ್ಟಿಗೆಹಳ್ಳಿ ಸಿದ್ಧಲಿಂಗ, ಮುರಿಗೆ ಗುರುಸಿದ್ಧದೇವ ಮೊದಲಾದವರು ವಿಶಿಷ್ಟ ಕಾವ್ಯರಚನೆ ಮಾಡಿ, ಸಂಪಾದನೆಯ ಗುರುಲಿಂಗದೇವ, ಸೋಮಶೇಖರಶಿವಯೋಗಿ ಕಾವ್ಯ, ವಚನ, ಶಾಸ್ತ್ರಗಳಿಗೆ ವ್ಯಾಖ್ಯಾನ, ಟೀಕೆ ಟಿಪ್ಪಣಿ ಬರೆದು ವೀರಶೈವ ಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. 'ಸಂಪಾದನ ಸಮಯ' ಎಂಬುದೊಂದು ಈ ಪರಂಪರೆಯಲ್ಲಿ ಹುಟ್ಟಿಕೊಂಡು ನೂರೊಂದು ವಿರಕ್ತರ ನಂತರ ಬಸವಾದಿ ಪ್ರಮಥರ ವಚನಸಾಹಿತ್ಯವನ್ನು ರಕ್ಷಿಸುವ-ಉಳಿಸುವ-ಬೆಳೆಸುವ-ಅದರ ಉದಾತ್ತತೆಯನ್ನು ಎತ್ತಿತೋರುವ ಕಾರ್ಯವನ್ನು ಸಾಂಘಿಕವಾಗಿ ತುಂಬ ಯಶಸ್ವಿಯಾಗಿ ನೆರವೇರಿಸಿ, ವಚನಸಾಹಿತ್ಯದ ಪುನರುಜ್ಜೀವನಕ್ಕೆ ಕಾರಣವಾಯಿತು.

ಇನ್ನು ಆಧ್ಯಾತ್ಮಕ್ಷೇತ್ರದತ್ತ ದೃಷ್ಟಿ ಹರಿಸಿದರೆ, ಅಲ್ಲಿಯೂ ಬೋಳಬಸವನ ಶಿಷ್ಯಪರಂಪರೆ ಅದ್ವಿತೀಯವಾದ ಕೆಲಸ ಮಾಡಿದುದು ಗಮನಕ್ಕೆ ಬರುತ್ತದೆ. ಗಗನಾರ್ಯನಿಂದ ಮುಂದುವರಿದ ಈ ಪರಂಪರೆಯಲ್ಲಿ ಮುಂದೆ ಚೀಲಾಳ ಸಮಯ-ಮುರಿಗಾ ಸಮಯ-ಕುಮಾರ ಸಮಯ ಎಂಬ ಮೂರು ಶಾಖೆಗಳು ಹುಟ್ಟಿಕೊಂಡು, ಒಂದೊಂದು ಶಾಖೆಗಳೂ ಸ್ವತಂತ್ರಪೀಠಗಳಾಗಿ ಬೆಳೆದು ಧಾರ್ಮಿಕಜಾಗೃತಿ, ವೀರಶೈವ ಧರ್ಮತತ್ತ್ವ-ಸಾಹಿತ್ಯ-ಸಿದ್ಧಾಂತಗಳ ಪ್ರಚಾರ, ತನ್ಮೂಲಕ ಮಾನವಕಲ್ಯಾಣವನ್ನು ನಿರಂತರವಾಗಿ ಮಾಡುತ್ತ ಸಾಗಿದವು.

ಈ ಎಲ್ಲ ಚಟುವಟಿಕೆಗಳು ತುಂಬ ವ್ಯವಸ್ಥಿತವಾಗಿ, ವ್ಯಾಪಕವಾಗಿ ನಡೆಯಲು ಬೋಳಬಸವೇಶ್ವರನು ಸತ್‌ಸಂಪ್ರದಾಯ ಹಾಕಿಕೊಟ್ಟು ಚೈತನ್ಯದ ಚಿಲುಮೆಯಾಗಿ, ಪ್ರೇರಕಶಕ್ತಿಯಾಗಿ, ಮಾರ್ಗದರ್ಶಿಯಾಗಿ ನಿಂತುದೇ ಕಾರಣವಾಗಿದೆ.

ಭಾವಚಿಂತಾರತ್ನದ "ಲೌಲ್ಯವೆಲೆದೇವ ನಿಮ್ಮಯ ವಚನ" ಎಂಬ ಉಕ್ತಿಯನ್ನು ಗಮನಿಸಿ ಬೋಳಬಸವೇಶ್ವರನು (ಶಿವಪೂಜೆಯಾರ್ಯ) ವಚನಕಾರನಾಗಿದ್ದನೆಂದು ವಿದ್ವಾಂಸರು ಊಹಿಸಿದ್ದಾರೆ. ಆದರೆ ಆತ ರಚಿಸಿರಬಹುದಾದ ಒಂದು ವಚನವೂ ಇದುವರೆಗೂ ದೊರೆತಿಲ್ಲ. ಇದರಿಂದ ಮೇಲಿನ ಉಕ್ತಿ ಆತ ರಚಿಸಿದ ವಚನಗಳನ್ನು ಸೂಚಿಸದೆ ಆತನ ಮಾತಿನ ಮಾಧುರ್ಯ, ವಾಕ್‌ಚಾತುರ್ಯವನ್ನು ಧ್ವನಿಸುವಂತಿದೆ ಎಂದು ಹೇಳಬಹುದು. ಮಹಾಲಿಂಗೇಂದ್ರವಿಜಯ ಮತ್ತು ನಿರಂಜನವಂಶರತ್ನಾಕರಗಳು ಬೋಳಬಸವನು ಮಹಾಪಂಡಿತನಾಗಿದ್ದ, ವೇದಾಗಮ ಪುರಾಣಶಾಸ್ತ್ರಗಳು ಆತನಿಗೆ ಕರತಲಾಮಲಕವಾಗಿದ್ದವು, ವಾದದಲ್ಲಿ ಆತ ಅನೇಕ ಪಂಡಿತರನ್ನು

ಸೋಲಿಸಿದ ಎಂದು ಹೇಳುತ್ತವೆ. ಇದಕ್ಕೆ ಪೋಷಕವೆನ್ನುವಂತೆ 'ವಾದಕಾಂಡವಿಚಾರ ಸಂಗ್ರಹ' ಮತ್ತು 'ಜಂಗಮ ಮಹತ್ವ' ಎಂಬ ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆಂದು ತಿಳಿದುಬರುತ್ತದೆ.[೪೧]

ಡಾ. ಎಲ್. ಬಸವರಾಜು ಅವರು "ಬೋಳಬಸವನು ಸಂಪಾದಿಸಿದ ಬಸವಾದಿ ಪ್ರಮಥರ ಒಂದು ವಚನಸಂಕಲನವಿದೆ. ವಿರಕ್ತರ ಆಚರಣೆಗೆ ಸಂಬಂಧಿಸಿದ್ದು" ಎಂದು ಹೇಳಿದ್ದಾರೆ.[೪೨] ಆದರೆ ಇದು[೪೩] ಈತನ ಪ್ರಶಿಷ್ಯನಾದ ಸಂಪಾದನೆಯ ಬೋಳಬಸವನದಾಗಿದೆ. ಪ್ರೊ.ಸಿ. ಮಹಾದೇವಪ್ಪನವರು "ತೋಂಟದ ಸಿದ್ಧೇಶ್ವರನ ಶಿಷ್ಯನಾದ ಬೋಳೇಶನ ವಚನವನ್ನು ಉದಾಹರಿಸುವುದಾಗಿ ಕಂಬಾಳ ಶಾಂತಮಲ್ಲೇಶ ಅಥವಾ ಕಂಬಾಳದೇವ ಹೇಳಿರುವುದರಿಂದ ಮಲ್ಲಣಾರ್ಯನು ಸೂಚಿಸಿರುವಂತೆ ಬೋಳಬಸವೇಶನು ವಚನಕಾರನಾಗಿದ್ದನೆಂಬುದು ಯಥಾರ್ಥವಾದ ಸಂಗತಿಯೆಂದು ತಿಳಿಯಬಹುದು" ಎಂದಿದ್ದಾರೆ.[೪೪] ಆದರೆ ಗಣವಚನರತ್ನಾವಳಿಯಲ್ಲಿ ಸೇರಿದ ಸ್ವರವಚನಗಳು ಸಿದ್ಧಲಿಂಗೇಶ್ವರರ ಶಿಷ್ಯ ಬೋಳಬಸವೇಶನವಾಗಿರದೆ ನೂರೊಂದು ವಿರಕ್ತರಲ್ಲಿ ಒಬ್ಬನಾಗಿರಬಹುದಾದ ನಿರ್ವಾಣಿ ಬೋಳೇಶನವಾಗಿವೆ.[೪೫]

ಇದರಿಂದ ಬೋಳಬಸವೇಶ್ವರ ರಚಿಸಿದ ಒಂದೂ ಕೃತಿ ಇನ್ನೂ ಲಭ್ಯವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಹೀಗೆಂದಾಕ್ಷಣ ಆತನ ವ್ಯಕ್ತಿತ್ವಕ್ಕೇನೂ ಕುಂದಿಲ್ಲ. ಸಾಹಿತ್ಯಕೃತಿ ರಚನೆಗಿಂತ ಆತ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಮಾಡಿದ ಕಾರ್ಯ ನೂರುಪಟ್ಟು ಹಿರಿದಾಗಿದೆ. ಆಧ್ಯಾತ್ಮಕೇಂದ್ರವನ್ನು ಸ್ಥಾಪಿಸಿ ಏಳುನೂರು ಜನ ಚರಮೂರ್ತಿಗಳಿಗೆ, ಮೂರುಸಾವಿರ ಜನ ವಿರಕ್ತರಿಗೆ ಯೋಗ್ಯ ತರಬೇತಿ ಕೊಟ್ಟು ಲೋಕಕಲ್ಯಾಣ ಕಾರ್ಯದಲ್ಲಿ ತೊಡಗುವಂತೆ ಮಾಡಿದ್ದು, ದೇಶಸಂಚಾರ ಕೈಕೊಂಡು ದೀನರ-ದುಃಖಿತರ ನೋವು, ದಾರಿದ್ರ್ಯಗಳನ್ನು ದೂರ ಮಾಡಿದ್ದು, ಗುಬ್ಬಿ ಮಲ್ಲಣಾರ್ಯ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯ ಮೊದಲಾದವರಿಗೆ ಕೃತಿರಚನೆಗೆ ಪ್ರೇರಣೆ ನೀಡಿದ್ದು, ಮಹಾನಾಡಪ್ರಭುಗಳ ರಾಜಗುರುಗಳಾಗಿ ಉನ್ನತ ಮಾರ್ಗದರ್ಶನ ನೀಡಿದ್ದು, ತಮ್ಮ ಸಾತ್ವಿಕ ನಡೆನುಡಿ, ನಿರ್ಮಲ ಬೋಧೆಯ ಮೂಲಕ ಮಾನವಸಮಾಜವನ್ನು ಋಜುತ್ವ ಮಾರ್ಗದತ್ತ ನಡೆಸಿದ್ದು-ಯಾವ ಮಹಾಕಾವ್ಯ ರಚನೆಗೂ ಕಡಿಮೆಯದಲ್ಲ.

ಈ ಗುರುಶ್ರೇಷ್ಠನನ್ನು ಅವರ ಶಿಷ್ಯ-ಪ್ರಶಿಷ್ಯರು ತಮ್ಮ ಕೃತಿಗಳಲ್ಲಿ ಭಕ್ತಿಯಿಂದ ಸ್ತುತಿಸಿ ಕೃತಜ್ಞತೆ ಸಲ್ಲಿಸಿದ್ದಾರೆ. ಆತನ ಶಿಷ್ಯರಲ್ಲೊಬ್ಬನಾದ ಗುಮ್ಮಳಾಪುರದ ಸಿದ್ಧಲಿಂಗನು ತಾನು ರಚಿಸಿದ ವಚನಗಳಿಗೆ "ಬೋಳಬಸವೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ"[೪೬] ಎಂಬ ಅಂಕಿತವನ್ನು ಇಟ್ಟುಕೊಂಡು ಗುರುವಿನ ಹೆಸರನ್ನು ಚಿರಗೊಳಿಸಿದ್ದಾನೆ.[೪೭] ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನಪೀಠದಲ್ಲಿ ಅಸ್ತಿತ್ವಕ್ಕೆ ಬಂದ ಬಸವೇಶ್ವರಪೀಠದ ವೀರಶೈವ ಗ್ರಂಥಾಲಯದಲ್ಲಿ ಸಿದ್ಧಲಿಂಗರು ಬೋಳಬಸವೇಶ್ವರನಿಗೆ ಷಟ್‌ಸ್ಥಲೋಪದೇಶ

ಮಾಡುವ ಒಂದು ಅಪೂರ್ವ ತೈಲಚಿತ್ರವಿದೆ. ಅದು 'ಊಟಿ' ಎಂಬ ಗ್ರಾಮದಿಂದ ತಂದುದಾಗಿದೆ. ಆ ಊರಿನ ಸದ್ಭಕ್ತರು ಅದನ್ನು ಬರೆಯಿಸುವುದರ ಮೂಲಕ ಆ ಗುರುಶಿಷ್ಯರಿಗೆ ಗೌರವ ಸಲ್ಲಿಸಿದ್ದಾರೆ. ವೀರಶೈವ ಸಾಹಿತ್ಯ ಸಂಸ್ಕೃತಿಗಳ ಪಿತಾಮಹರೆನಿಸಿದ ಡಾ. ಬಿ. ಶಿವಮೂರ್ತಿಶಾಸ್ತ್ರಿಗಳು ಈತನ ಸ್ಥಳದ ಬಗೆಗೆ ಹೆಚ್ಚಿನ ಸಂಶೋಧನೆ ಕೈಕೊಂಡು,[೮೮] ಕಾವ್ಯಗಳಲ್ಲಿ ಉಕ್ತವಾಗಿದ್ದಂತೆ ಬೋಳಬಸವೇಶನ ಗದ್ದುಗೆ ಮದ್ದಗಿರಿಯಲ್ಲಿ ಇಲ್ಲ; ನೆರೆಯ ಊರಾದ ಸಿದ್ಧಾಪುರದಲ್ಲಿದೆ ಎಂದು ಗುರುತಿಸಿದ್ದಾರೆ. "ಈಗ ಅದು ಬೋಳಾರಾಧ್ಯರಮಠ, ಬಾಳಯ್ಯಸ್ವಾಮಿಮಠ ಎಂದು ಕರೆಯಿಸಿಕೊಳ್ಳುತ್ತದೆ. ಈ ವಿಷಯ ಈ ಪರಂಪರೆಯ ಗುರುಗಳಿಗೇ ಗೊತ್ತಿಲ್ಲ. ಅಲ್ಲಿಗೆ ಹೋಗಿ ಭಕ್ತಿ ಪೂಜೆ ಸಲ್ಲಿಸುತ್ತಿಲ್ಲ. ಈ ಸ್ಥಿತಿಯು ವೀರಶೈವ ಸಮಾಜದ ಭಾವದಾರಿದ್ರ್ಯಕ್ಕೆ ಒಂದು ಒಳ್ಳೆಯ ನಿದರ್ಶನವಾಗಿದೆ" ಎಂದು ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಆದರೆ ಆಲಸ್ಯ ಅಜ್ಞಾನಗಳನ್ನು ಅರಿಯದೆ ನಿತ್ಯ ಲೋಕಕಲ್ಯಾಣವನ್ನೇ ಚಿಂತಿಸಿದ ಈ ಯೋಗಿ ನಮ್ಮ ಈ ದಾರಿದ್ರ್ಯವನ್ನು ಲೆಕ್ಕಿಸದೆ, ಅನ್ಯರಿಂದ ಯಾವುದೇ ರೀತಿಯ ಗೌರವಾದರಗಳನ್ನು ಬಯಸದೆ, ಸ್ವಯಂ ಗೌರವಾನ್ವಿತನಾಗಿ ಸಿದ್ಧಾಪುರದ ಸಿದ್ಧಸಮಾಧಿಯಲ್ಲಿ ಪ್ರಶಾಂತಚಿತ್ತದಿಂದ ಮಲಗಿದ್ದಾನೆ. ಆತನ ದಿವ್ಯಚೇತನ ಮಾತ್ರ ಸದಾಜಾಗೃತವಾಗಿದ್ದು ಪರಂಜ್ಯೋತಿಯಂತೆ ಲೋಕವನ್ನೇ ಬೆಳಗುತ್ತಿದೆ. ಆ ಬೆಳಕಿನಿಂದ ಬಾಳು ಬೆಳಗಿಸಿಕೊಳ್ಳುವುದು ಬಿಡುವುದು ನಮಗೆ ಸೇರಿದ್ದು.

## ಅಡಿಟಿಪ್ಪಣಿಗಳು

೧. ವಿವರಗಳಿಗೆ ನೋಡಿ : ಪಿ.ಎಂ. ಗಿರಿರಾಜು : 'ತೋಂಟದ ಸಿದ್ಧಲಿಂಗಯತಿಗಳ ಗುರುಪರಂಪರೆ', ಬಸವ ಪಥ, ೩-೧, ಪು. ೨೫; ಆರ್.ಸಿ. ಹಿರೇಮಠ, ಸಂ:ಷಟ್‌ಸ್ಥಲಜ್ಞಾನಸಾರಾಮೃತ, ಪ್ರಸ್ತಾವನೆ.

೨. ಇಲ್ಲೆಲ್ಲ ಬೋಳಬಸವೇಶ್ವರನ ಹೆಸರನ್ನು ಗುರುಪರಂಪರೆಯಲ್ಲಿ ಸೇರಿಸಿಲ್ಲ. ತೋಂಟದ ಸಿದ್ಧಲಿಂಗರಿಗೆ ಅದು ನಿಲ್ಲುತ್ತದೆ. ಅವರ ನಂತರದ ಅಧ್ಯಕ್ಷ ಇವನೆಂದು ಗಣಿಸಿ ಈ ಸಂಖ್ಯೆಯನ್ನು ಹೇಳಲಾಗಿದೆ.

೩. ವಿವರಗಳಿಗೆ ನೋಡಿ: i.ಚೆನ್ನಬಸವಪುರಾಣ, ವಿರೂಪಾಕ್ಷ ಪಂಡಿತ: ತೋಂಟದ ಸಿದ್ಧಲಿಂಗ, ಸಪ್ಪೆಯಾರ್ಯ, ಬೋಳಬಸವೇಶ ಶಿವಪೂಜೆಯಾರ್ಯ, ಉಪ್ಪಿನಹಳ್ಳಿಯಾರ್ಯ, ಗುಮ್ಮಳಾಪುರದ ವರಸಿದ್ಧಲಿಂಗೇಶ್ವರ, ಪಟ್ಟಣದದೇವರು, ಶೀಲವಂತಾರ್ಯ, ಘನಲಿಂಗಿದೇವ, ಸಿದ್ಧಮಲ್ಲೇಶ, ಬತ್ತಲೆಯದೇವ, ಬೆಡಗಿನ ಪರ್ವತೇಶ, ಕಂಕಣದದೇವ, ಸಂಪಗೆಯ ರಾಚವಟ್ಟಿದೇವರು, ಚಂದ್ರಶೇಖರ, ದೊಡ್ಡಸಿದ್ಧಲಿಂಗೇಶ್ವರ, ಸಿದ್ಧಲಿಂಗೇಶ್ವರ, ಮಳೆಯದೇವ, ಕೊಡಗಿಯ ಹಳ್ಳಿಯಾರ್ಯ, ಕಂಬಾಳದೇವ, ಸಿದ್ಧನಂಜೇಶ್ವರ, ಲಂಬಕರ್ಣದೇವರು, ಎಡತೊರೆಯ ಪುರಗುರುಸಿದ್ಧವೀರಣ್ಣೊಡೆಯರು, ಚಿಕ್ಕಮಲ್ಲೇಶ, ಮದ್ದೇಶ್ವರ, ಸುರಗಿಯಾರ್ಯ, ಶಾಂತಮಲ್ಲಿಕಾರ್ಜುನ, ಜಿಗುನಿಯ ಮರುಳದೇವರು, ಜೋಲಿಯ ಬಸವೇಶ್ವರ, ರಾಚವಟ್ಟಿ, ಕೋರಿಯ ಸಿದ್ಧಬಸವೇಶ್ವರ, ಹಿರಣ್ಯಾರ್ಯ, ಚೆನ್ನಮಲ್ಲೇಶ್ವರ.

ii. ಸಿದ್ಧೇಶ್ವರಪುರಾಣ, ವಿರಕ್ತತೋಂಟದಾರ್ಯ:ತೋಂಟದ ಸಿದ್ಧಲಿಂಗ, ಸಪ್ಪೆಯ ಯತೀಶ, ಬೋಳಬಸವೇಶ, ಉಪ್ಪಿನಹಳ್ಳಿಯಯ್ಯ, ಗುಮ್ಮಳಾಪುರ ಸಿದ್ಧಲಿಂಗೇಶ, ಪಟ್ಟಣದ ದೇವರು, ಶೀಲವಂತೇಶ್ವರ, ಘನಲಿಂಗಿದೇವ, ಸುತ್ತೂರ ಸಿದ್ಧಮಲ್ಲೇಶ, ಬತ್ತಲೆಯದೇಸಿಕ, ಹುಚ್ಚಪರ್ವತೇಶ, ಕಂಕಣದದೇವರ್ಳು, ರಾಚವೀಟಿಯದೇವರು, ಗುರುಚಂದ್ರಶೇಖರ, ದೊಡ್ಡಸಿದ್ಧೇಶ, ನಂಜದೇಶಿಕೇಂದ್ರ, ಗಟ್ಟಿಸಿದ್ಧಯ್ಯ,

iii. ಎಡೆಯೂರ ಶಾಸನ:ತೋಂಟದ ಸಿದ್ಧಲಿಂಗ, ಸಪ್ಪೆದೇವರು, ಬೋಳಬಸವರಾಜದೇವರು, ಉಪ್ಪಿನಹಳ್ಳಿಯಸ್ವಾಮಿ, ಗುಮ್ಮಳಾಪುರದ ಸಿದ್ಧಲಿಂಗದೇವರು, ಶೀಲವಂತದೇವರು, ಸಿದ್ಧದೇವ, ಕೊಡಗಿಹಳ್ಳಿಯದೇವರು, ನಂಜೇದೇವರು, ರೇವಣಸಿದ್ಧದೇವರು.

iv. ಗುರುರಾಜಚಾರಿತ್ರ, ಸಿದ್ಧನಂಜೇಶ:ತೋಂಟದ ಸಿದ್ಧಲಿಂಗ, ಸಪ್ಪೆಯಯ್ಯ, ಬೋಳಬಸವೇಶ, ಸಿದ್ಧಲಿಂಗೇಶ, ಮಳೆಯ ಮಲ್ಲೇಶ.

೪. ಮಹಾಲಿಂಗೇಂದ್ರ ವಿಜಯ.

೫. ಸಿದ್ಧೇಶ್ವರ ಪುರಾಣ, (ವಿತೋಂ), ಚೆನ್ನಬಸವಪುರಾಣ, ಗುರುರಾಜಚಾರಿತ್ರ, ಸಿದ್ಧಲಿಂಗಸಾಂಗತ್ಯ, ಮಹಾಲಿಂಗೇಂದ್ರವಿಜಯ, ಚತುರಾಚಾರ್ಯಪುರಾಣ.

೬. ಚೆಪು. ಶೂಸಂ ಗುಂಗೂ, ಷಸಾಬೆವ ಟೀಕೆ, ಶೀಲವಂತಯ್ಯನ ತ್ರಿವಿಧಿವ್ಯಾಖ್ಯಾನ, ಮಹಾಲಿಂಗೇಂದ್ರ ವಿಜಯ, ಸಿಪು (ವಿತೋಂ)

೭. ಸಿಪು (ವಿತೋಂ)

೮. ಸಿಪು (ವಿತೋಂ)

೯. ಶೂಸಂ (ಗೂ)

೧೦. ಶೂಸಂ(ಗುಂ)

೧೧. ಶೂಸಂ (ಗುಂ.)

೧೨. ಎಡೆಯೂರ ಶಾಸನ

೧೩. ಮಹಾಲಿಂಗೇಂದ್ರ ವಿಜಯ

೧೪. ಶೂಸಂ (ಗೂ)

೧೫. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ೧-೫೪

೧೬. ನಿರಂಜನವಂಶರತ್ನಾಕರ, ಮಹಾಲಿಂಗೇಂದ್ರ ವಿಜಯ.

೧೭. ಮಹಾಂತಸ್ವಾಮಿಯ ನಾಂದ್ಯ

೧೮. ಭಾವಚಿಂತಾರತ್ನ

೧೯. ಚೆನ್ನಬಸವಪುರಾಣ

೨೦. ಭಾವಚಿಂತಾರತ್ನ ಸಂಗ್ರಹ, ೧-೫, ೧-೯

೨೧. ಚೆನ್ನಬಸವಪುರಾಣ, ೬೩-೪೯

೨೨. ಎಲ್. ಬಸವರಾಜು, ಸಂ: ಮಹಾಲಿಂಗೇಂದ್ರ ವಿಜಯ, ೧೫-೪

೨೩. ಶಿವನಿಗೆ 'ಬೋಳೇಶಂಕರ' ಎಂದು ಕರೆಯಲಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು.

೨೪. ಇಲ್ಲವೆ ಆತ ಮೊದಲಿನಿಂದಲೂ ಶಿವಪೂಜೆಯನ್ನು ನಿತ್ಯನಿಷ್ಠೆಯಿಂದ ಮಾಡುತ್ತ ಬಂದುದರಿಂದ ಆತನಿಗೆ ಈ ಹೆಸರು ಬಂದಿರಲೂಬಹುದು.

೨೫. ಎಸ್. ಶಿವಣ್ಣ, ಸಂ:ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರಕರಂಡ, ಪು. ೩: ಮಹಾಂತಸ್ವಾಮಿಗಳು ನಿರೂಪಿಸಿದ ನಾಂದ್ಯ, ನುಡಿ ೧೧.

೨೬. ವೀರಶೈವಸಾಹಿತ್ಯ ಚರಿತ್ರೆಯಲ್ಲಿ 'ನಿರ್ವಾಣಿ ಬೋಳೇಶ' 'ಸಂಪಾದನೆಯ ಬೋಳಬಸವೇಶ'- ಎಂಬ ಇಬ್ಬರು ವ್ಯಕ್ತಿಗಳು ಪ್ರಸಿದ್ಧರಾಗಿದ್ದಾರೆ. ಇವರು ಬೋಳಬಸವೇಶ್ವರನಿಂದ ಭಿನ್ನರು. ನಿರ್ವಾಣಿ ಬೋಳೇಶ ನೂರೊಂದು ವಿರಕ್ತರಲ್ಲಿ ಒಬ್ಬನಾಗಿ ಸ್ವರವಚನಗಳನ್ನು ರಚಿಸಿದ್ದಾನೆ -ನೋಡಿ:ವೀರಣ್ಣ ರಾಜೂರ, ಸಂ.:ಶಿವಯೋಗ ಪ್ರದೀಪಿಕೆ, ಪ್ರಸ್ತಾವನೆ, ಪು. ii; ಸಂಪಾದನೆಯ ಬೋಳಬಸವೇಶನು ಬೋಳಬಸವನ ಶಿಷ್ಯ ಪರಂಪರೆಗೆ ಸೇರಿದ ಸಂ. ಸಿದ್ಧವೀರಣ್ಣನ ಶಿಷ್ಯನಾಗಿದ್ದಾನೆ. ಈತ ಬಸವಸ್ತೋತ್ರದ ವಚನ, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು ಎಂಬ ಕೃತಿಗಳನ್ನು ಸಂಯೋಜಿಸಿದ್ದಾನೆ-ನೋಡಿ: ಎಂ.ಎಂ. ಕಲಬುರ್ಗಿ, ಸಂ:ಬಸವಸ್ತೋತ್ರದ ವಚನಗಳು, ಪು. xiii.

೨೭. ಸಿ. ಮಹಾದೇವಪ್ಪ, ಸಂ: ಭಾವಚಿಂತಾರತ್ನ ಸಂಗ್ರಹ, ೧-೫

೨೮. ಅದೇ, ೧-೯

೨೯. ಎ.ಕ., ಸಂ. ೪(ಹೊಸ ಆವೃತ್ತಿ), ೧೯೭೫, ಸಂ. ೭೪, ಪು. ೧೨೮

೩೦. ಇದನ್ನು ಪ್ರೊ. ಸಿ. ಮಹಾದೇವಪ್ಪನವರು ಗುರುತಿಸಿದ್ದಾರೆ. ಸಿದ್ಧಲಿಂಗ ಶಿವಯೋಗಿ, ಪು. ೧೧೪

೩೧. ಭಾವಚಿಂತಾರತ್ನ ಸಂಗ್ರಹ, ಅನುಬಂಧ, ಪು. ೯೮

೩೨. ತೋಂಟದ ಸಿದ್ಧಲಿಂಗರು ಗುರುಗೋಸಲ ಬಸವೇಶ್ವರರಿಂದ ದೀಕ್ಷೆ ಪಡೆದುದು ಇದೇ ಚಾಮರಾಜನಗರ

ತಾಲೂಕಿಗೆ ಸೇರಿದ ಹರದನಹಳ್ಳಿಯಲ್ಲಿ ಎಂಬುದನ್ನು ಗಮನಿಸಬೇಕು.

೩೩. ಈ ಊರು ಕಟ್ಟಿದ ಸ್ಥಳ ಮದ್ದಗಿರಿ ಸರಹದ್ದಿನಲ್ಲಿ ಇದ್ದಿರಬೇಕು. ಬೋಳಬಸವರು ಐಕ್ಯರಾದ ನಂತರ ಊರು ನಿರ್ಮಾಣವಾಗಿರಬೇಕು. ಹೀಗಾಗಿ ಮೊದಲು ಮದ್ದಗಿರಿಯಲ್ಲಿ ಇದ್ದ ಅವರ ಸಮಾಧಿ,

ನಂತರ ಸಿದ್ಧಾಪುರದ ವಲಯಕ್ಕೆ ಒಳಪಟ್ಟಿರಬೇಕು.

೩೪. ಬಿ. ಶಿವಮೂರ್ತಿಶಾಸ್ತ್ರಿ: 'ಬಿಜ್ಜಾವರ ಮತ್ತು ಸಿದ್ಧಾಪುರ', ಕಭಾ. ೮-೨, ಪು. ೫೯-೬೪

೩೫. ಬಿಜ್ಜಾವರದಿಂದ ಮದ್ದಗಿರಿ ೩ ಮೈಲು ದೂರದಲ್ಲಿದ್ದರೆ, ಸಿದ್ಧಾಪುರ ಮದ್ದಗಿರಿಯಿಂದ ೨ ಮೈಲು ದೂರದಲ್ಲಿದೆ.

೩೬. ಎಂ.ಎಂ. ಕಲಬುರ್ಗಿ: 'ತೋಂಟದ ಸಿದ್ಧಲಿಂಗಯತಿಗಳ ಕಾಲ, ಮಾರ್ಗ, ಸಂ. ೧ ಪು. ೩೮೨-೩೮೫

೩೭. ಎಂ.ಎಂ. ಕಲಬುರ್ಗಿ, ಬಿ.ಆರ್. ಹಿರೇಮಠ (ಸಂ):ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೧೭-೬೮

೩೮. ಗುರುರಾಜಚಾರಿತ್ರ, ೧೬-೩, ೪

೩೯. ಹಾಗೇ ಈ ಪೀಠದ ಮುಂಚೆ ಬಂದ ಅನೇಕ ಗುರುಗಳ ಬಗೆಗೂ ಕಾವ್ಯಗಳು ಹುಟ್ಟಿಲ್ಲ. ಸಿದ್ಧಲಿಂಗನ ಪ್ರಭಾವವೇ ಹೆಚ್ಚಾಗಿ ಹೀಗಾಗಿರಬೇಕೆ?

೪೦. ಮಹಾಲಿಂಗೇಂದ್ರವಿಜಯ, ಪೀಠಿಕೆ. ಪು. ೫೪

೪೧. ಆರ್.ಸಿ. ಹಿರೇಮಠ, ಸಂ:ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ, ಪ್ರಸ್ತಾವನೆ, ಪು. ೧೭; ನಿರಂಜನಜಂಗಮವಂಶದರ್ಪಣ

೪೨. ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು. ೪೨

೪೩. ಇದರ ಹೆಸರು 'ಷಟ್‌ಸ್ಥಲಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು'

೪೪. ಸಿದ್ಧಲಿಂಗ ಶಿವಯೋಗಿ, ಮೈವಿವಿ. ಪು. ೧೦೪

೪೫. ನೋಡಿ:ಎಸ್. ಉಮಾಪತಿ, ಸಂ.: ಗುಣವಚನ ರತ್ನಾವಳಿ, ಗದಗ

೪೬. ಈ ವಚನ ಸಂಕಲನಕ್ಕೆ 'ಷಟ್‌ಸ್ಥಲ ಲಿಂಗಾಂಗಸಂಬಂಧದ ನಿರ್ವಚನ' ಎಂದು ಹೆಸರು. ಇದರಲ್ಲಿ ೧೮ ವಚನಗಳಿವೆ.

೪೭. ಆಧುನಿಕ ವಚನಕಾರರಾದ ಪಿ. ಬಸವಣ್ಣ ಅವರು 'ಬೋಳಬಸವೇಶ್ವರ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಅವರ ವಚನಸಂಕಲನದ ಹೆಸರು: 'ಬೋಳಬಸವನ ಬೊಂತೆ'.

೪೮. ಬಿಜ್ಜಾವರ ಮತ್ತು ಸಿದ್ಧಾಪುರ, (ಬ.ಪ. ೮-೨, ಪು. ೬೪)*

●

---

* ಸಂಶೋಧನ : ಡಾ. ಎಂ. ಚಿದಾನಂದಮೂರ್ತಿ ಅವರ ಅಭಿನಂದನ ಗ್ರಂಥ, ೧೯೯೧

# ೬. ಅನುಭಾವ ಸಾಹಿತ್ಯ

**ಅನುಭಾವ:**

'ಅನುಭಾವ' ಅಧ್ಯಾತ್ಮ ಪ್ರಪಂಚದ ಬೆಳ್ಳಿಚುಕ್ಕಿ. ಮಾನವನ ವಿಕಾಸದ ಇತಿಹಾಸದೊಂದಿಗೆ ನಡೆದು ಬಂದ ಅದು, ವಿಶ್ವದ ಎಲ್ಲ ಧರ್ಮತತ್ವಗಳ ಮೂಲಸ್ರೋತವಾಗಿ ಹರಿದು ಸಾಗಿದೆ. ಒಂದೊಂದು ಮತ-ಧರ್ಮ-ದರ್ಶನ-ಸಿದ್ಧಾಂತಗಳಲ್ಲಿ ಅದು ವಿಭಿನ್ನ ಅರ್ಥವಲಯಗಳನ್ನು ಆವಿಷ್ಕರಿಸಿಕೊಳ್ಳುತ್ತ ಬೆಳೆದು ಬಂದಿದ್ದರೂ ಅದರ ಗಮ್ಯ ಗುರಿ ಒಂದೇ ಆಗಿದೆ.

'ಅನುಭವ' ಮತ್ತು 'ಅನುಭಾವ' ಎಂಬುವು ಸಂಸ್ಕೃತ ಪದಗಳು. 'ಅನು' ಎಂಬುದು ಉಪಸರ್ಗ; 'ಭವ' ಎಂಬುದು 'ಭೂ'ದಿಂದ ನಿಷ್ಪನ್ನವಾದ ಧಾತು. 'ಅನು' ಎಂದರೆ ಅನುಸರಿಸು; 'ಭವ' ಎಂದರೆ ಇರುವುದು. 'ಇರುವುದನ್ನು ಅನುಸರಿಸು' ಎಂಬುದು 'ಅನುಭವ' ಪದದ ನಿಘಂಟುವಿನ ಅರ್ಥ. 'ಭಾವ' ಎಂಬ ಪದ ಇರುವಿಕೆಯ ಸ್ಥಿತಿಯನ್ನು, ಆಗುವಿಕೆಯ ಅವಸ್ಥೆಯನ್ನು ಸೂಚಿಸುತ್ತದೆ. 'ಅನುಭವ'ದ ಪ್ರಯೋಜಕರೂಪ ಮತ್ತು ಕರ್ಮಣಿರೂಪ 'ಅನುಭಾವ'.

ಸಂಸ್ಕೃತದಲ್ಲಿ 'ಅನುಭವ' ಮತ್ತು 'ಅನುಭಾವ' ಪದಗಳು ಪರಸ್ಪರ ಅವಲಂಬಿಗಳಾಗಿದ್ದು ಏಕಾರ್ಥದಲ್ಲಿ ಬಳಕೆಯಾಗುತ್ತವೆ. ಆದರೆ ಕನ್ನಡದಲ್ಲಿ ಇವು ಭಿನ್ನಾರ್ಥವನ್ನು ಹೊಂದಿವೆ. "ಇಂದ್ರಿಯ ಜನ್ಯವಾದ ಬಾಹ್ಯವಿಷಯಗಳ ಮೂಲಕ ಚಿತ್ತದ ಮೇಲೆ ಒತ್ತಲಾದ ಅಚ್ಚುಗಳೆಲ್ಲ ಅನುಭವಗಳು. ಅದರಂತೆ ಸ್ವಪ್ನ, ಕಲ್ಪನೆ, ಸ್ಮರಣೆ, ಭಾವನೆ ಮುಂತಾದವುಗಳ ಮೂಲಕ ಮೂಡುವ ಅಚ್ಚುಗಳು ಸಹ ಅನುಭವಗಳೇ". ಆದರೆ 'ಅನುಭಾವ' ಎಂಬುದು ಇಂದ್ರಿಯ ಮತ್ತು ಮನಸ್ಸುಗಳಿಗೆ ಅತೀತವಾದ ಪ್ರಜ್ಞೆ. ಆತ್ಮಾನಂದವನ್ನುಂಟುಮಾಡುವುದು ಇದರ ಗುರಿ. "ಆತ್ಮವು ಚೈತನ್ಯಾತ್ಮಕವಾದುದು; ಆನಂದರೂಪಿಯಾದುದು. ಆತ್ಮನ ಸಹಜ ಸ್ವರೂಪವಾದ ಈ ಆನಂದದ ನಿಲುವನ್ನು ಕೈಗೂಡಿಸಿಕೊಡುವುದೇ ಅನುಭಾವದ ಕೊನೆಯ ಹಂತ. ಅದು ಬೌದ್ಧಿಕ ಶಕ್ತಿಗೆ ಅತೀತವಾಗಿದ್ದರೂ ಬೌದ್ಧಿಕ ಜ್ಞಾನಕ್ಕೆ ವಿರೋಧಿಯಲ್ಲ. ಅದನ್ನೊಳಗೊಂಡರೂ ಅದರಾಚೆ ನಿಂತ ಅತಿಮಾನಸ ಪ್ರಜ್ಞೆ, ಅದು ಈ ಜಗತ್ತಿನಲ್ಲಿ ಪ್ರವಹಿಸುವ ಅಣುವಿನಲ್ಲಿ

ಅಣುವಾಗಿಯೂ, ಮಹತ್ತಿನಲ್ಲಿ ಮಹತ್ತಾಗಿಯೂ ಇರುವ, ಸರ್ವಗತ-ಸರ್ವಾಂತರ್ಯಾಮಿಯಾದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ದರ್ಶಿಸುವ, ಸ್ಪರ್ಶಿಸುವ, ಆಲಿಸುವ ಶಕ್ತಿ. ಬುದ್ಧಿ, ತರ್ಕಗಳಿಗೆ ಮೀರಿದ ಈ ಶಕ್ತಿಯು ದೈವೀಪ್ರೇಮದಿಂದ ಸ್ಫೂರ್ತಗೊಂಡು ದಿವ್ಯವಾಹಿನಿಯಾಗಿ ವಿಶ್ವವ್ಯಾಪಿ ತತ್ವವನ್ನು ಅರಿದು-ಅರಿದರಿವನ್ನು ಮೀರಿ ಅನುಭವಿಸಿ ನಿಂದು ಲೀನವಾಗುವಂತಹದು."

ಶಿವಶರಣರು 'ಅನುಭಾವ' ಎಂಬ ಪದಕ್ಕೆ ನೂತನ ಆವಿಷ್ಕಾರ ನೀಡಿ ಅದರ ಅರ್ಥವ್ಯಾಪ್ತಿಯನ್ನು ಹೆಚ್ಚಿಸಿದರು. ಹೀಗಾಗಿ ಇದು ಆಧ್ಯಾತ್ಮ ಪ್ರಪಂಚಕ್ಕೆ ವೀರಶೈವರು ಕೊಟ್ಟ ವಿಶಿಷ್ಟ ಕೊಡುಗೆ ಎನಿಸಿದೆ. ಶರಣರ ಪರಿಭಾಷೆಯಲ್ಲಿ ಅನುಭಾವ ಎಂದರೆ "ಜೀವಾತ್ಮ-ಪರಮಾತ್ಮರ ಏಕತ್ವದ, ಜೀವ-ಶಿವೈಕ್ಯದ, ಲಿಂಗಾಂಗಗಳ ಸಮರಸತ್ವದ ಅನುಭವ. ಅದೊಂದು ಅನುಭವ ನಿಜ. ಆದರೆ ಅದು ಇಂದ್ರಿಯ ಜನ್ಯವಲ್ಲ; ವಿಷಯಗಳ ಮೂಲಕ ಉಂಟಾದುದಲ್ಲ. ಅತೀಂದ್ರಿಯವೂ, ಅತಿಮಾನಸವೂ, ಅತ್ಯಂತ ಸೂಕ್ಷ್ಮವೂ, ಆತ್ಮಸರ್ವಸ್ವವನ್ನು ತುಂಬಿಕೊಳ್ಳುವಂತಹದೂ, ನಿರಾಲಂಬ ಆನಂದವನ್ನುಂಟು ಮಾಡುವಂತಹದೂ, ದ್ವಂದ್ವಾತೀತವೂ, ತ್ರಿಗುಣರಹಿತವೂ, ಅಪರೋಕ್ಷವೂ, ಅನಿರ್ವಚನೀಯವೂ, ವರ್ಣನಾತೀತವೂ, ಅಂತಃಸ್ಫುರಣರೂಪಿಯೂ, ಸಮರಸೈಕ್ಯವೂ, ಆನಂದರೂಪಿಯೂ ಆಗಿರುವುದು ಅದರ ಪ್ರಮುಖ ಲಕ್ಷಣಗಳೆನಿಸಿವೆ."

'ಅನುಭಾವವೆಂಬುದು ಅಂತರಂಗದ ರತ್ನ', 'ಅನುಭಾವವೆಂಬುದು ಆತ್ಮವಿದ್ಯೆ', 'ಅನುಭಾವವೆಂಬುದು ತಾನಾರೆಂಬುದ ತೋರುವುದು', 'ಅನುಭಾವವೆಂಬುದು ನಿಜ ನಿವಾಸದಲ್ಲಿರಿಸುವುದು', 'ಅನುಭಾವವೆಂಬುದು ನೆಲದ ಮರೆಯ ನಿಧಾನ', 'ಅನುಭಾವವೆಂಬುದು ಶಿಶು ಕಂಡ ಕನಸು', 'ಸಂಗನ ಶರಣರ ಅನುಭಾವ ಗಜವೈದ್ಯ', 'ಅನುಭಾವದಿಂದ ತನುಮನ ಹಾಳಾಯಿತ್ತು'- ಇವು ಶಿವಶರಣರು ಅನುಭಾವದ ಸ್ವರೂಪವನ್ನು ತಿಳಿಸುವ ನುಡಿರತ್ನಗಳು.

ಅನುಭಾವವು ಸಾಧಕನಲ್ಲಿ ನೆಲೆಯಾಗಿ ನಿಂತು ಅವನನ್ನು ಸಿದ್ಧತ್ವ ಪದವಿಗೇರಿಸಿದರೆ ಅದು 'ಅನುಭೂತಿ' ಎನಿಸುತ್ತದೆ. ಸಿದ್ಧಸ್ಥಿತಿಯಲ್ಲಿ ಸ್ಥಿರತೆಯನ್ನುಂಟುಮಾಡುವುದೇ ಅನುಭೂತಿಯ ಲಕ್ಷಣ.

ಅನುಭಾವ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿದೆ. "ಪರಮಾತ್ಮ, ಜೀವಾತ್ಮ ಮತ್ತು ಇವುಗಳ ಸಂಬಂಧದಿಂದುಂಟಾಗುವ ಅಮೃತತತ್ವ. ಪರಮಾತ್ಮನೊಡನೆ ಸಮರಸಗೊಂಡು ಅಮೃತತತ್ವವನ್ನು ಪಡೆಯಬೇಕೆಂಬ ಜೀವಾತ್ಮನ ನಿರಂತರ ಹಂಬಲವನ್ನು ಕೈಗೂಡಿಸಿ ಕೊಡುವ ಸಾಧನೆಯೇ ಅನುಭಾವ ಮಾರ್ಗ". ಶರಣ ಸಾಹಿತ್ಯದಲ್ಲಿ ಅನುಭಾವವು ಪ್ರಾಣಲಿಂಗಿಸ್ಥಲದ ಸಾಧನ ಸ್ಥಿತಿ. ಶಿವನ ಅರಿವು 'ಅನುಭವ'ವಾದರೆ, ಅವನ ದರ್ಶನವೇ 'ಅನುಭಾವ', ಸಾಕ್ಷಾತ್ಕಾರವೇ 'ಅನುಭೂತಿ'. ಜೀವಾತ್ಮ-ಪರಮಾತ್ಮರ ಸಂಬಂಧದ ಅಮೃತತತ್ವ ಅನುಭಾವದ ಮೂಲದ್ರವ್ಯ. ದೇವನೊಡನೆ ಸಮರಸ ಹೊಂದುವ ನಿರಂತರ ಬಯಕೆಯನ್ನು ಆಗು ಮಾಡುವ ಸಾಧನೆಯೇ

'ಅನುಭಾವ ಮಾರ್ಗ'. ಇದು ಬುದ್ಧಿ, ತರ್ಕಗಳಿಗೆ ಅತೀತವಾದ ಒಂದು ಶಕ್ತಿಯಿಂದ ಮಾತ್ರ ಸತ್ಯ ಸಾಕ್ಷಾತ್ಕಾರವನ್ನು ಪಡೆಯುವುದು ಸಾಧ್ಯವೆಂಬ ತತ್ವವನ್ನು ತಳಹದಿಯಾಗಿ ಇಟ್ಟುಕೊಂಡು ಹೊರಟ ಮಾರ್ಗ. ಈ ಮಾರ್ಗವನ್ನು ಅನುಸರಿಸಿ ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡವನೇ 'ಅನುಭಾವಿ'. ಈತ ತಾನು ಕಂಡ ಸತ್ಯವನ್ನು, ಉಂಡ ಸುಖವನ್ನು, ಅನುಭವಿಸಿದ ಆನಂದವನ್ನು ಲೋಕಕ್ಕೆ ಹಂಚಬೇಕೆಂಬ ಉತ್ಕಟ ಹಂಬಲ, ಅನನ್ಯ ಅಭೀಪ್ಸೆಯಿಂದ ಭಾಷಾಮಾಧ್ಯಮದ ಮೂಲಕ ಅಭಿವ್ಯಕ್ತಪಡಿಸಿದ ಸಾಹಿತ್ಯವೇ 'ಅನುಭಾವ ಸಾಹಿತ್ಯ'. ಇದು ಬುದ್ಧಿಯ ಸಾಹಿತ್ಯವಲ್ಲ, ಹೃದಯದ ಸಾಹಿತ್ಯ; ಕಾಯ ಸಾಹಿತ್ಯವಲ್ಲ, ಆತ್ಮ ಸಾಹಿತ್ಯ. ಕ್ರಿಯಾಜ್ಞಾನ ಸಾಮರಸ್ಯದಿಂದ ಪ್ರಕಟಗೊಂಡ ಆತ್ಮಸಾಕ್ಷಿಯ ಅನನ್ಯ ಸಾಹಿತ್ಯ. ಇದು ಕವಿರಚಿತ ಕಾಯ ಸಾಹಿತ್ಯ, ವ್ಯಕ್ತಿಕೇಂದ್ರಿತ ಆಧ್ಯಾತ್ಮವಾದಿಯ ಆತ್ಮ ಸಾಹಿತ್ಯಕ್ಕಿಂತ ಭಿನ್ನವಾದ ಸಮಾಜಕೇಂದ್ರಿತ ಅನುಭಾವಸಾಹಿತ್ಯ. ಲೋಕಾನುಕಂಪೆ ಇದರ ಮುಖ್ಯ ಲಕ್ಷಣ. ಆತ್ಮಕಲ್ಯಾಣದ ಜೊತೆಗೆ ಸಮಾಜ ಕಲ್ಯಾಣವೂ ಇದರ ಮುಖ್ಯ ಗುರಿ.

'ಅನುಭಾವ' ಎಂಬ ಪದವನ್ನು ಆಂಗ್ಲಭಾಷೆಯ 'ಮಿಸ್ಟಿಸಿಜಂ' ಎಂಬ ಪದಕ್ಕೆ ಸಂವಾದಿಯಾಗಿ ಬಳಸುವುದುಂಟು. ಆದರೆ ಇವೆರಡೂ ಪದಗಳಲ್ಲಿ ಸಾಮ್ಯಗಳುಂಟು, ಸೂಕ್ಷ್ಮ ವ್ಯತ್ಯಾಸಗಳೂ ಉಂಟು. ಈ ಕುರಿತು ತುಂಬ ವ್ಯಾಪಕವಾದ ಚರ್ಚೆ, ಜಿಜ್ಞಾಸೆ ನಡೆದಿದೆ. ಅದನ್ನು ಇಲ್ಲಿ ವಿವರಿಸದೆ, ಒಂದೇ ಮಾತಿನಲ್ಲಿ ಹೇಳುವುದಾದರೆ, ಅನುಭಾವ ಪದ ಮಿಸ್ಟಿಸಿಜಂ ಪದಕ್ಕಿಂತ ಹೆಚ್ಚು ವಿಸ್ತಾರವಾದ ಅರ್ಥಮೌಲ್ಯವನ್ನು ಪಡೆದುಕೊಂಡಿದೆ; ಮಿಸ್ಟಿಕ್‌ರದು ಉನ್ಮಾದಸ್ಥಿತಿ, ಅನುಭಾವಿಗಳದು ಸಹಜಸ್ಥಿತಿ- ಎಂದು ಹೇಳಿ ಅನುಭಾವ ಸಾಹಿತ್ಯದ ಪ್ರೇರಣೆ-ಪರಂಪರೆ-ಪ್ರಭಾವಗಳತ್ತ ಗಮನ ಹರಿಸಲು ಪ್ರಯತ್ನಿಸುತ್ತೇನೆ.

**ಪ್ರೇರಣೆ:**

ಯಾವುದೇ ವಸ್ತು ಸಂಗತಿಗಳ ಸ್ವರೂಪವನ್ನು ಕುರಿತು ಹೇಳಲು ಮನುಷ್ಯನಿಗೆ ಒದಗಿ ಬರುವ ಮುಖ್ಯ ಪ್ರೇರಣೆ ಅವನ ಸುತ್ತಲ ಪರಿಸರ. ಆ ಪರಿಸರ ಪ್ರೇರಣೆಯಿಂದ ಆತ ತಾನು ಕಂಡುಂಡ ಅನುಭವವನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳಲು ಪ್ರಯತ್ನಿಸುತ್ತಾನೆ. ಆದಿಮಾನವ ಧರ್ಮ, ದೇವರನ್ನು ಕಲ್ಪಿಸಿಕೊಳ್ಳಲು ಕಾರಣವಾದುದು ಈ ಪರಿಸರ ಪ್ರೇರಣೆಯೇ. ಹಗಲು-ರಾತ್ರಿ, ಬಿಸಿಲು-ಛಳಿ, ಮಳೆ-ಗಾಳಿ, ಗುಡುಗು-ಸಿಡಿಲು, ಆಕಾಶದ ಹೊಂಬಣ್ಣ, ಹರಿವ ನದಿಯ ಜುಳುಜುಳು ನಾದ, ಸಮುದ್ರದ ಮೊರೆತ, ಹುಟ್ಟು-ಸಾವು, ನೋವು-ನಲಿವು-ಹೀಗೆ ಸೃಷ್ಟಿಯಲ್ಲಿ ನಡೆಯುವ ನಾನಾ ವೈಪರೀತ್ಯಗಳನ್ನು ಕಂಡು ಆತ ವಿಸ್ಮಿತನಾದ. ಇವುಗಳನ್ನು ಯಾವುದೋ ಒಂದು ಅಗೋಚರಶಕ್ತಿ ನಿಯಂತ್ರಿಸುತ್ತದೆ ಎಂದು ಭಾವಿಸಿದ. ತನಗೆ ಕೆಡುಕನ್ನು ಮಾಡುವ ವಸ್ತುಗಳ ಬಗ್ಗೆ ಭಯವನ್ನು, ಒಳಿತನ್ನು ಮಾಡುವ ವಸ್ತುಗಳ ಬಗ್ಗೆ ಭಕ್ತಿಯನ್ನು ತೋರತೊಡಗಿದ. ಹೀಗೆ ಭಯ-ಭಕ್ತಿಗಳು ಅವನನ್ನು ಆ ಅಗೋಚರ ಶಕ್ತಿಯನ್ನು ಕುರಿತು

ಆಲೋಚಿಸಲು, ಆರಾಧಿಸಲು ಪ್ರೇರೇಪಿಸಿದವು. ಈ ಭಯ-ಭಕ್ತಿಯಲ್ಲಿಯೇ ಧರ್ಮದ ಹುಟ್ಟು, ದೈವದ ಹುಟ್ಟು, ಅನುಭಾವದ ಹುಟ್ಟು ಅಡಗಿರುವುದನ್ನು ಕಾಣುತ್ತೇವೆ.

ಬಾಹ್ಯಪರಿಸರದಿಂದ ಪ್ರಚೋದಿತನಾದ ವ್ಯಕ್ತಿಯ ಅನುಭವಗಳಿಗೆ ಅಂತಃಸ್ಫುರಣೆಯೂ ಬೆರೆತು ಅಭಿವ್ಯಕ್ತಿಗೆ ಹಾದಿ ಮಾಡಿಕೊಡುತ್ತದೆ. ಈ ಬಾಹ್ಯ ಅನುಭವ ಹಾಗೂ ಅಂತರಂಗದ ಭಾವನೆಗಳೇ ಅನುಭಾವದ ಪ್ರಮುಖ ಪ್ರೇರಣೆಗಳಾಗಿ ತೋರುತ್ತವೆ.

ಡಾ. ಆರ್.ಡಿ. ರಾನಡೆ ಪಾರಮಾರ್ಥದ ಅಥವಾ ಅನುಭಾವದ ಪ್ರೇರಣೆಗಳನ್ನು ದಾರ್ಶನಿಕ ಪ್ರೇರಣೆಗಳು, ಮನೋವೈಜ್ಞಾನಿಕ ಪ್ರೇರಣೆಗಳು ಮತ್ತು ನೈತಿಕ ಪ್ರೇರಣೆಗಳು ಎಂದು ಮೂರು ವಿಧವಾಗಿ ವಿಂಗಡಿಸುತ್ತಾರೆ. ಈ ಸೃಷ್ಟಿಯನ್ನು ನಿಯಂತ್ರಿಸುವ ಅಗೋಚರ ಶಕ್ತಿ ಅಥವಾ ಪರಮಾತ್ಮನನ್ನು ಕುರಿತು ಪ್ರಾರ್ಥನೆಗೆ ತೊಡಗುವಂತೆ ಮಾಡುವುದು; ಪೂರ್ವಜೀವನದ ಬಗೆಗೆ ಕಾವ್ಯಮಯ ಹಾಗೂ ಕಲ್ಪನಾಮಯ ಭಾವನೆಯನ್ನು ತಾಳುವುದು ಇವು ದಾರ್ಶನಿಕ ಪ್ರೇರಣೆಗಳೆನಿಸಿದರೆ, ಇಂದ್ರಿಯ ವಿಜಯ ಹಾಗೂ ನಿರಾಶೆ ಅಥವಾ ಆಶಾಭಂಗ, ದುಃಖದಿಂದ ಮುಕ್ತಿ ಪಡೆಯಬೇಕೆಂಬ ಹಂಬಲ ಮನೋವೈಜ್ಞಾನಿಕ ಪ್ರೇರಣೆಗಳೆನಿಸುತ್ತವೆ. ದುರ್ವಿಕಾರಗಳನ್ನು ಧೂರಮಾಡಬೇಕೆಂಬ ಬಯಕೆ ನೈತಿಕ ಪ್ರೇರಣೆ ಎನಿಸುತ್ತದೆ.

ಹಿಂದೀ ಭಾಷಿಕ ಅನುಭಾವಿಗಳಲ್ಲಿ ಇವುಗಳ ಜೊತೆಗೆ ಮಾಯೆಯಿಂದ ಬಿಡುಗಡೆ ಹೊಂದಬೇಕೆಂಬ ಬಯಕೆ, ದೈವಲೀಲೆ ಅಥವಾ ಹಣೆಬರಹದಲ್ಲಿರುವ ನಂಬಿಕೆ, ಪ್ರಪಂಚದಲ್ಲಿರುವ ನಾವೆಲ್ಲ ಕುರುಡರೆಂಬ ಭಾವನೆ, ಮರಣದ ಸಮಸ್ಯೆ, ಪಾಪದ ಪ್ರಜ್ಞೆ, ಕ್ಷಣಭಂಗುರತೆ, ನಾನಾ ವಿಧದ ಚಿಂತೆ ಇವುಗಳೂ ಅನುಭಾವದ ಪ್ರೇರಣೆಗಳಾಗಿ ತೋರುತ್ತವೆ.

ಮಧ್ಯಕಾಲೀನ ಭಕ್ತಿಪಂಥಗಳಿಗೆ, ಅನುಭಾವಿಗಳಿಗೆ ಮೂಲಪ್ರೇರಣೆಯಾಗಿ ನಿಂತುದು ಜನಸಾಮಾನ್ಯರ ಬದುಕು; ಅದನ್ನು ಹಸನುಗೊಳಿಸಬೇಕೆಂಬ ಹಂಬಲ ಹಾಗೂ ಜಡಗಟ್ಟಿದ್ದ ವ್ಯವಸ್ಥೆ, ಅದನ್ನು ಒಡೆದು ಹಾಕಿ ಸರ್ವಸಮಾನತೆಯ ಸುಂದರ ಸುಖೀ ಸಮಾಜ ನಿರ್ಮಿಸಬೇಕೆಂಬ ಉತ್ಕಟ ಬಯಕೆ. ಹೀಗಾಗಿ ಎಲ್ಲ ಅನುಭಾವಿಗಳು ಗಹನವಾದ, ಗೂಢವಾದ ಪರತತ್ವದ ರಹಸ್ಯವನ್ನು, ಬದುಕಿನ ಬೆಡಗನ್ನು ತಮ್ಮ ತಮ್ಮ ಪ್ರಾಂತದ ದೇಶೀಭಾಷೆಯಲ್ಲಿ ಬಿಡಿಸಿ ಹೇಳಲು ಪ್ರಯತ್ನಿಸಿದರು. ಕರ್ನಾಟಕದ ಶರಣರು ಈ ಹಂಬಲದ ಜೊತೆಗೆ ವೈದಿಕ ಧರ್ಮದಲ್ಲಿರುವ ಕರ್ಮಕಾಂಡವನ್ನು, ವರ್ಣಾಶ್ರಮಧರ್ಮ ಪದ್ಧತಿಯನ್ನು, ವರ್ಗ-ವರ್ಣ-ಲಿಂಗಭೇದದಿಂದ ಕೂಡಿದ ಶೋಷಣೆ ಸಹಿತ ವ್ಯವಸ್ಥೆಯನ್ನು, ಸಂಸ್ಕೃತ ಭಾಷೆಯ ಬಂಧುರತೆಯನ್ನು ಪ್ರತಿಭಟಿಸಿದರು. ಶೋಷಣೆರಹಿತ ಸರ್ವಸಮಾನತೆಯ ಸರಳ-ಸುಂದರ ಸಮಾಜ, ಸಂಸ್ಕೃತಿಯನ್ನು ಆವಿಷ್ಕಾರಗೊಳಿಸಲು ಯತ್ನಿಸಿದರು. ವಿಷ್ಣುಭಕ್ತಿ ಪರವಾದ ಅನುಭಾವ ಪಂಥದಲ್ಲಿಯೂ ಈ ಸಮತಾ ದೃಷ್ಟಿ ತೋರಿದರೂ ಅವರು ಹೆಚ್ಚಾಗಿ ವೇದ, ಉಪನಿಷತ್ತು, ಗೀತೆ, ಭಾಗವತಗಳ ಗೂಢತತ್ವಗಳ ರಹಸ್ಯವನ್ನು ಸರಳ ಭಾಷೆಯಲ್ಲಿ

ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ಹೇಳಲು ಪ್ರಯತ್ನಿಸಿದರು. ಈ ದೃಷ್ಟಿಯಿಂದ ಶಿವಶರಣರ ಅನುಭಾವ ಸಾಹಿತ್ಯದ ಪ್ರೇರಣೆಗಳು ಉಳಿದವರಿಗಿಂತ ಭಿನ್ನವಾಗಿ, ಹೆಚ್ಚು ಅರ್ಥಪೂರ್ಣವಾಗಿ ತೋರುತ್ತವೆ.

ಹೀಗೆ ಆಯಾ ಕಾಲದ ಮತ್ತು ಸಮಾಜದ ಪ್ರಭಾವ ಹಾಗೂ ವ್ಯಕ್ತಿ ವಿಶಿಷ್ಟವಾದ ಸ್ವಭಾವ-ಸಂಸ್ಕಾರಗಳ ಹಿನ್ನೆಲೆಯಲ್ಲಿ ಅನುಭಾವ ಸಾಹಿತ್ಯಕ್ಕೆ ಪ್ರೇರಣೆ ದೊರೆತಿದ್ದರೂ ಎಲ್ಲ ಸಾಧಕರ, ಶರಣರ, ಸಾಧುಸಂತರ, ತತ್ವಜ್ಞಾನಿಗಳ ಮುಂದಿದ್ದ ಆದರ್ಶ ಮಾತ್ರ ಒಂದೇ ಆಗಿದೆ: ಮಾನವ ಬದುಕಿನ ಉಜ್ವಲತೆಗಾಗಿ ತುಡಿಯುವುದು. ತಮಿಳುನಾಡಿನ ನಾಯನಾರರು, ಆಳ್ವಾರರು, ಕರ್ನಾಟಕದ ಶಿವಶರಣರು, ಹರಿದಾಸರು, ಮಹಾರಾಷ್ಟ್ರದ ಸಂತರು, ಉತ್ತರದ ಕಬೀರದಾಸ ಮತ್ತು ಇತರರು, ಬಂಗಾಳದ ಚೈತನ್ಯ-ಇವರೆಲ್ಲರಲ್ಲಿಯೂ ವ್ಯಕ್ತಿ-ಕಾಲ-ಪರಿಸರ ವಿಶಿಷ್ಟವಾದ ವಿಭೇದಗಳನ್ನು, ಜೊತೆಗೆ ಒಳಗೆ ಜೀವತಂತುವಾಗಿರುವ ಅನುಭಾವದ ಏಕಸೂತ್ರತೆಯನ್ನು ನಾವು ಕಾಣುತ್ತೇವೆ.

**ಪರಂಪರೆ:**

ಜೀವನದ ಅಂತಿಮ ಗುರಿಯನ್ನು ಕುರಿತು ಮನುಷ್ಯ ಎಂದು ಆಲೋಚಿಸಲು ತೊಡಗಿದನೋ ಅಂದಿನಿಂದಲೇ ಅನುಭಾವ ಮಾರ್ಗದ ಅನ್ವೇಷಣೆ ಆರಂಭವಾಯಿತೆಂದು ಹೇಳಬಹುದು. ಸಾಧಕನ ನಿರಂತರ ಸಾಧನೆಯಿಂದ ಈ ಮಾರ್ಗ ಪೂರ್ಣತೆಯನ್ನು ಪಡೆಯಿತು. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಈ ಸಾಧಕರು ಜೀವನದ ರಹಸ್ಯವನ್ನು ಅರಿಯಲು ಪ್ರಯತ್ನ ಕೈಕೊಂಡಿದ್ದರೂ ಎಲ್ಲರೂ ಒಂದೇ ಗುರಿಯತ್ತ ನಡೆದಿದ್ದಾರೆ. ಹೀಗಾಗಿ ಅವರ ಪ್ರಯತ್ನದ ರೀತಿ ಹೊರನೋಟಕ್ಕೆ ಭಿನ್ನವಾಗಿ ತೋರಿದರೂ ಅವರು ಕಂಡ ಅನುಭಾವದ ಸ್ವರೂಪ ಮಾತ್ರ ಒಂದೇ ಆಗಿದೆ. ಅದಕ್ಕಾಗಿ ಜಗತ್ತಿನ ಅನುಭಾವಿಗಳೆಲ್ಲರ ಮಾತಿನಲ್ಲಿ ಒಂದೇ ಸತ್ಯದ ಸೂತ್ರವನ್ನು, ಸಂದೇಶವನ್ನು ಕಾಣುತ್ತೇವೆ.

ಭರತಖಂಡವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ವೇದಗಳೇ ಅನುಭಾವ ಸಾಹಿತ್ಯದ ಮೊದಲ ಗ್ರಂಥಗಳೆನಿಸುತ್ತವೆ. ಪ್ರಥಮ ವೇದವೆನಿಸಿದ ಋಗ್ವೇದದಲ್ಲಿ ಆರಂಭವಾದ ಈ ಅನುಭಾವದ ಸೆಲೆ ಕ್ರಮೇಣ ವಿಸ್ತಾರಗೊಳ್ಳುತ್ತ ನಡೆದು ಉಪನಿಷತ್ತುಗಳಲ್ಲಿ ಹೊನಲಾಗಿ ಹರಿದು ಸಾಗರಗಾಮಿಯಾಗಿರುವುದನ್ನು ನೋಡುತ್ತೇವೆ.

ಉಪನಿಷತ್ತುಗಳು ವೇದಗಳಲ್ಲಿರುವ ಅಲೌಕಿಕ ಶಕ್ತಿಗಳ ಉಪಾಸನೆ, ಕರ್ಮಕಾಂಡ, ಅಂಧಶ್ರದ್ಧೆಗಳನ್ನು ಬದಿಗೆ ಸರಿಸಿ, "ಯಜ್ಞ ಯಾಗಾದಿಗಳಿಂದ ಲಭಿಸುವ ಫಲ ಅತ್ಯಲ್ಪವಾದುದೆಂದೂ, ಕ್ಷಣಭಂಗುರವಾದುದೆಂದೂ, ಶಾಶ್ವತವಾದ ಸುಖ ಸಾಧನೆಗೆ ಜ್ಞಾನಯಜ್ಞವೊಂದೇ ಸಾಧನವೆಂದೂ ಸಾರಿದವು. ಮನಸ್ಸಿನ ಶಕ್ತಿಗಳನ್ನೂ, ಅದರ ಮೇಲೆ ಪ್ರಭುತ್ವವನ್ನು ಪಡೆಯುವುದರಿಂದ ಉಂಟಾಗುವ ಅದ್ಭುತ ಪರಿವರ್ತನೆಯನ್ನೂ ಮೊಟ್ಟ ಮೊದಲ ಬಾರಿಗೆ ಉಪನಿಷತ್ತಿನ ದ್ರಷ್ಟಾರರು ಕಂಡುಕೊಂಡರು. ಮನುಷ್ಯ ದೀನನಾಗಿ ಕುರುಡು

ನಂಬಿಕೆಯಿಂದ ಆ ಅಲೌಕಿಕ ಶಕ್ತಿಯನ್ನು ಆಶ್ರಯಿಸಬೇಕಾಗಿಲ್ಲ. ಆ ಶಕ್ತಿಯ ಪ್ರತ್ಯಕ್ಷ ದರ್ಶನವನ್ನು ಸಾಕ್ಷಾತ್ತಾಗಿ ಪಡೆಯಬಹುದು; ಪಡೆಯಬೇಕು. ಏಕೆಂದರೆ ಎಲ್ಲರೂ ಆ ಅಮೃತ ಶಕ್ತಿಯ ಪುತ್ರರು" ಎಂದು ಉಪನಿಷತ್ತುಗಳು ಘೋಷಿಸಿದವು.

ಉಪನಿಷತ್ತುಗಳ ತರುವಾಯ ಅವುಗಳ ಸಾರವನ್ನು ಒಳಗೊಂಡು ಮೂಡಿಬಂದ ಭಗವದ್ಗೀತೆ ಅನುಭಾವದ ದೃಷ್ಟಿಯಿಂದ ಇನ್ನೂ ಹೆಚ್ಚು ಮುಖ್ಯವಾದ ಗ್ರಂಥವೆನಿಸಿದೆ. ಅದು ಜ್ಞಾನದ ಜೊತೆಗೆ ಭಕ್ತಿಗೂ ಆದ್ಯತೆಯನ್ನು ನೀಡುತ್ತದೆ. 'ತತ್ವಜಿಜ್ಞಾಸೆ ಸಾರ್ಥಕವಾಗಬೇಕಾದರೆ ಅದು ಬುದ್ಧಿಯನ್ನು ಮಾತ್ರ ತೃಪ್ತಿಪಡಿಸಿದರೆ ಸಾಲದು; ಹೃದಯವನ್ನರಳಿಸುವ ಅನುಭಾವವಾಗಬೇಕು' ಎಂಬ ತತ್ವವನ್ನು ಅದು ಪ್ರತಿಪಾದಿಸುತ್ತದೆ. ದಿವ್ಯ ದೃಷ್ಟಿಯೇ ಅನುಭಾವಿಗೆ ಬೇಕಾದ ಒಳಗಣ್ಣು; ಸತ್ಯಸ್ವರೂಪ ಸಾಕ್ಷಾತ್ಕಾರವೇ ವಿಶ್ವರೂಪದರ್ಶನ. ಸತ್ಯದ ಸಾಕ್ಷಾತ್ಕಾರಕ್ಕೆ ಅಂತರ್‌ದೃಷ್ಟಿಬೇಕೆಂಬುದನ್ನು ಗೀತೆ ಪ್ರತಿಮಾರೂಪದಲ್ಲಿ ಹೇಳುತ್ತದೆ.

ಉಪನಿಷತ್ತು ಮತ್ತು ಭಗವದ್ಗೀತೆ ಹಾಕಿಕೊಟ್ಟ ಆದರ್ಶವನ್ನೇ ಆಗಮ, ಪುರಾಣ, ಇತಿಹಾಸ, ಮಹಾಕಾವ್ಯಗಳು ಮುಂದುವರಿಸಿಕೊಂಡು ನಡೆದಿವೆ. ಭಾರತದ ವಿವಿಧ ಭಾಗಗಳಲ್ಲಿ ಕಾಲಕಾಲಕ್ಕೆ ಆಗಿ ಹೋದ ಸಾಧಕರುಗಳ ಜೀವನದಲ್ಲಿಯೂ ಇದೇ ಆದರ್ಶದ ಪುನರಾವತಾರವನ್ನು ಕಾಣುತ್ತೇವೆ.

ಮಧ್ಯಯುಗದಲ್ಲಿ ಆರಂಭವಾದ ಭಕ್ತಿಯ ಆಂದೋಳನ ಅನುಭಾವ ಪರಂಪರೆಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿತು. ಅದು ದ್ರಾವಿಡ ಸಂಸ್ಕೃತಿಯ ಕೊಡುಗೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸಂಸ್ಕೃತ-ಪದ್ಮಪುರಾಣದಲ್ಲಿ ಬರುವ "ಜಾತಾಹಂ ದ್ರಾವಿಡದೇಶೇ ವೃದ್ಧಿಂ ಕರ್ನಾಟಕೇ ಗತಾ" ಎಂಬ ಹೇಳಿಕೆ, 'ಭಕ್ತಿ ಚಳುವಳಿ ದ್ರಾವಿಡದೇಶದಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಬೆಳೆದು, ಭಾರತವೆಲ್ಲ ವ್ಯಾಪಕವಾಗಿ ಮೆರೆಯಿತು' ಎಂದು ತಿಳಿಸುತ್ತದೆ. ಈ ಮಾತನ್ನು ಸಮರ್ಥಿಸುವಂತೆ ಕಬೀರದಾಸರ ಈ ಹೇಳಿಕೆ ಮೂಡಿಬಂದಿದೆ: "ಭಕ್ತಿದ್ರಾವಿಡ ಉಪಜೀ ಲಾಯೇ ರಾಮಾನಂದ್। ಪರಗಕಿಯೇ ಕಬೀರನೇ ಸಾತದ್ವೀಪ ನವಖಂಡ್" ಅಂದರೆ ಭಕ್ತಿದ್ರಾವಿಡ ದೇಶದಲ್ಲಿ ಜನಿಸಿತು. ಅದನ್ನು ಉತ್ತರಕ್ಕೆ ತಂದವರು ರಾಮಾನಂದರು. ಕಬೀರ ಅದನ್ನು ಸಪ್ತದ್ವೀಪ ನವಖಂಡಗಳಲ್ಲಿ ಪಸರಿಸಿದರು.

"ಮಧ್ಯಯುಗದ ಈ ಭಕ್ತಿ ಆಂದೋಲನ ವಿಶ್ವದ ಮಹಾ ಆಂದೋಲನಗಳಲ್ಲಿ ಒಂದು. ಅದು ಹಿಂದೂ ಧರ್ಮದಲ್ಲಿ ಮಡುಗಟ್ಟಿದ್ದ ಅರ್ಥಶೂನ್ಯ ಕರ್ಮಕಾಂಡ, ಜಾತಿಪದ್ಧತಿ, ಮಡಿಮೈಲಿಗೆ, ಮೇಲುಕೀಳುಗಳೆಂಬುದನ್ನು ವಿರೋಧಿಸಿ ವರ್ಗ, ವರ್ಣರಹಿತ ಸಮಾಜವನ್ನು ರಚಿಸಲು ಸಂಕಲ್ಪಿಸಿತು. 'ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿ' ಧಾರ್ಮಿಕ ಸಾಮ್ರಾಜ್ಯದಲ್ಲಿ ಜನತಂತ್ರವನ್ನು ಸಾರಿದ ಶ್ರೇಯಸ್ಸು ಈ ಆಂದೋಲನಕ್ಕೆ ಸಲ್ಲುತ್ತದೆ."

ತಮಿಳುನಾಡಿನಲ್ಲಿ ಕ್ರಿ.ಶ. ೬ನೆಯ ಶತಮಾನದಲ್ಲಿ ಮೊದಲು ಶೈವ ಪುರಾತನರಾದ ನಾಯನಾರರಿಂದ ಆರಂಭವಾದ ಶಿವಭಕ್ತಿಯ ಆಂದೋಲನ, ನಂತರ ವೈಷ್ಣವ ಆಳ್ವಾರರಿಂದ ಹರಿಭಕ್ತಿಯ ಮತ್ತೊಂದು ಕವಲಾಗಿ ಒಡೆಯಿತು. ಶೈವ ಮತ್ತು ವೈಷ್ಣವ ಭಕ್ತರಿಂದ ಹುಟ್ಟಿದ 'ತೇವಾರಂ' ಮತ್ತು 'ಪ್ರಬಂಧ' ಎಂಬ ಭಕ್ತಿ ಸಾಹಿತ್ಯ ಕನ್ನಡನಾಡಿನ ಶಿವಶರಣರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ಕರ್ನಾಟಕದ ಶಿವಶರಣರು ತಮಿಳುನಾಡಿನ ಶೈವಪುರಾತನರಿಂದ ಪ್ರೇರಣೆ ಪಡೆದಿದ್ದರೂ ಇವರ ದೃಷ್ಟಿ-ಧೋರಣೆಗಳು ಅವರಿಗಿಂತಲೂ ಹೆಚ್ಚು ವ್ಯಾಪಕವಾಗಿ ವಿಸ್ತರಿಸಿಕೊಂಡವು. ಈ ಶರಣ ಸಮೂಹದಲ್ಲಿ ಜಾತಿ-ಲಿಂಗ-ಅಂತಸ್ತು-ವರ್ಗ-ವರ್ಣ ಭೇದವಿಲ್ಲದೆ ಎಲ್ಲ ಸ್ತರದ ಜನರು ಬೆರೆತು 'ಸಕಲ ಜೀವಾತ್ಮರಿಗೆ ಲೇಸ'ನ್ನುಂಟುಮಾಡುವ ಮಾರ್ಗವನ್ನು ರೂಪಿಸಿದರು. ವೇದ, ಆಗಮ, ಉಪನಿಷತ್ತುಗಳಲ್ಲಿ ಸಂಸ್ಕೃತ ಭಾಷೆಯಲ್ಲಿ ರಹಸ್ಯವಾಗಿ ಅಡಗಿದ್ದ ಅಧ್ಯಾತ್ಮ ತತ್ವಗಳನ್ನು 'ವಚನ' ಎಂಬ ವಿನೂತನ ರೂಪದಲ್ಲಿ, ಸರಳ ದೇಶೀ ಭಾಷೆಯಲ್ಲಿ ಹೇಳಿ ಸರ್ವರಿಗೂ ಪಾರಮಾರ್ಥದ ಮಾರ್ಗವನ್ನು ಮುಕ್ತಗೊಳಿಸಿದರು. ಶ್ರದ್ಧೆ, ನಿಷ್ಠಾದಿ ಷಡ್ವಿಧ ಭಕ್ತಿಗಳಿಂದ ಸಾಧಕ ಸುಲಭವಾಗಿ ಸಿದ್ಧಿಯನ್ನು ಪಡೆಯಬಲ್ಲ ಎಂಬುದನ್ನು ಸಾಧಿಸಿ ತೋರಿಸಿಕೊಟ್ಟರು.

ಇದೇ ವೇಳೆಗೆ ಆಂಧ್ರ, ಕೇರಳ, ಬಂಗಾಲ, ಉತ್ತರಪ್ರದೇಶ, ಮಹಾರಾಷ್ಟ್ರ ಮೊದಲಾದ ಪ್ರಾಂತಗಳಲ್ಲಿಯೂ ಈ ಭಕ್ತಿಯ ಗಾಳಿ ಬೀಸತೊಡಗಿತು. ಈ ಭಕ್ತಿಪಂಥಗಳಿಗೆ ಶಿವ ಮತ್ತು ವಿಷ್ಣು ಕೇಂದ್ರದೈವಗಳೆನಿಸಿದವು. ತಮಿಳುನಾಡು ಮತ್ತು ಕರ್ನಾಟಕದ ಶೈವ, ವೀರಶೈವ ಭಕ್ತಿಪಂಥಗಳಿಗೆ ಶಿವ ಮುಖ್ಯನೆನಿಸಿದರೆ, ವೈಷ್ಣವ (ಹರಿದಾಸ) ಪಂಥದ ಭಕ್ತರಿಗೆ ಹಾಗೂ ಉಳಿದ ಪ್ರದೇಶಗಳ ಭಕ್ತಿಪಂಥಗಳಿಗೆ ವಿಷ್ಣು ಕೇಂದ್ರದೈವವೆನಿಸಿದ. ಆದರೂ ಈ ಎಲ್ಲ ಭಕ್ತಿಪಂಥಗಳಲ್ಲಿ ಕೆಲವು ಸಮಾನವಾದ ಲಕ್ಷಣಗಳು ಕಂಡುಬರುತ್ತವೆ:೧. ಪ್ರೇಮವೇ ಪರಮ ಪುರುಷಾರ್ಥ-ಮೋಕ್ಷವಲ್ಲ. ೨. ದೈವೀಪ್ರೇಮ ಕುಲಜಾತಿಗಳನ್ನು ಮೀರಿದ್ದು. ೩. ಭಕ್ತ ಇಲ್ಲವೆ ಗುರು ದೇವರಿಗಿಂತ ದೊಡ್ಡವನು. ೪. ಭಕ್ತಿಯಿಲ್ಲದ ಪಾಂಡಿತ್ಯ ವ್ಯರ್ಥ. ೫. ನಾಮ, ರೂಪಕ್ಕಿಂತ ದೊಡ್ಡದು.

ಈ ಭಕ್ತಿಪಂಥಗಳಲ್ಲಿ ಕೆಲವು ಸಗುಣೋಪಾಸನೆಗೆ ಮಹತ್ವಕೊಟ್ಟರೆ, ಹೆಚ್ಚಿನವು ನಿರ್ಗುಣೋಪಾಸನೆಗೆ ಒತ್ತುಕೊಡುತ್ತವೆ. ಎಲ್ಲ ಭಕ್ತಿಪಂಥಗಳ ಗುರಿ ಸಮಾನತೆಯನ್ನು ಸಾರುವುದು, ಸಹಜ-ಸರಳ ಪ್ರಾಪಂಚಿಕ ಪಾರಮಾರ್ಥಿಕ ಮಾರ್ಗವನ್ನು ಬೋಧಿಸುವುದು. ಹೀಗಾಗಿ ಧರ್ಮ-ಸಮಾಜ-ಸಾಹಿತ್ಯ ಮೂರೂ ಇಲ್ಲಿ ಮುಪ್ಪುರಿಗೊಂಡಿವೆ. ಹೀಗೆ ಜನಸಾಮಾನ್ಯರ ಬದುಕನ್ನು ಹಸನುಗೊಳಿಸುವ ಉದ್ದೇಶವನ್ನು ಇಟ್ಟುಕೊಂಡು ಹುಟ್ಟಿದ ಈ ಭಕ್ತಿಪಂಥಗಳು ಸಾಹಿತ್ಯದ ಮೂಲಕ ತಮ್ಮ ಅನುಭಾವವನ್ನು ಅಭಿವ್ಯಕ್ತಗೊಳಿಸಿದವು. ಈ ಅನುಭಾವ ಪರಂಪರೆ ನಿರಂತರವಾಗಿ ಮುನ್ನಡೆದು ಇಪ್ಪತ್ತನೆಯ ಶತಮಾನದಲ್ಲಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸಾಗಿರುವುದನ್ನು ಕಾಣುತ್ತೇವೆ.

ಪ್ರಭಾವ:

ಯಾವುದೇ ಸಾಹಿತ್ಯ, ಸಿದ್ಧಾಂತ, ತತ್ವ ತನಗ್ಗಿಂತ ಹಿಂದಿನ ಪರಂಪರೆಯಿಂದ ಪ್ರಭಾವಿತವಾಗಿರುವುದು, ಪ್ರಭಾವಿತವಾಗಿಯೂ ಕೆಲವು ಅಂಶಗಳಲ್ಲಿ ತನ್ನತನವನ್ನು ತೋರುವುದು ಕಂಡುಬರುತ್ತದೆ. ಈ ಮಾತು ಅನುಭಾವ ಸಾಹಿತ್ಯಕ್ಕೂ ಅನ್ವಯಿಸುತ್ತದೆ.

ಅನುಭಾವದ ಮೂಲಗಂಗೋತ್ರಿಯೆನಿಸಿದ ಉಪನಿಷತ್ತುಗಳ ಪ್ರಭಾವ ಭಾರತೀಯ ಎಲ್ಲ ಧರ್ಮ-ದರ್ಶನಗಳ ಮೇಲೆಯೂ ಆಗಿರುವುದನ್ನು ಅಲ್ಲಗಳೆಯುವಂತಿಲ್ಲ. ಮಧ್ಯಕಾಲೀನ ಭಕ್ತಿಪಂಥಗಳು ಇವುಗಳಲ್ಲಿನ ಅನೇಕ ಉತ್ತಮಾಂಶಗಳನ್ನು ಅಳವಡಿಸಿಕೊಂಡು ಮುನ್ನಡೆದಿವೆ; ಭಕ್ತಿಯನ್ನೇ ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು ತಮ್ಮ ಉದ್ದೇಶವನ್ನು ಈಡೇರಿಸಿಕೊಂಡಿವೆ.

'ಭಕ್ತಿಯೇ ಅನುಭಾವಕ್ಕೆ ಬೀಜ', 'ಅನುಭಾವವಿಲ್ಲದ ಭಕ್ತಿ ಅನುವಿಂಗೆಬಾರದು' ಎಂಬ ಶರಣರ ನುಡಿಯಂತೆ ಭಕ್ತಿಯ ನೆಲಗಟ್ಟಿನ ಮೇಲೆ ಅನುಭಾವ ಸೌಧ ನಿರ್ಮಿಸ ಹೊರಟ ಮಧ್ಯಕಾಲೀನ ಅನುಭಾವಿಗಳಲ್ಲಿ ತಮಿಳುನಾಡಿನ ಶೈವ ನಾಯನಾರರು, ವೈಷ್ಣವ ಆಳ್ವಾರರು ಪ್ರಮುಖರೆಂಬುದನ್ನು ಈಗಾಗಲೇ ನೋಡಿದ್ದೇವೆ. ಇವರ ಪ್ರಭಾವ ಕರ್ನಾಟಕದ ಶಿವಶರಣರು ಹಾಗೂ ಹರಿದಾಸರ ಮೇಲೆ ಆದುದನ್ನು ಕಾಣುತ್ತೇವೆ. ಹಾಗೆಯೇ ದಕ್ಷಿಣದ ಹಾಗೂ ಉತ್ತರದ ಉಳಿದ ಭಕ್ತಿಪಂಥಗಳ ಮೇಲೆಯೂ ಇವರು ತಮ್ಮ ಪ್ರಭಾವಮುದ್ರೆಯನ್ನು ಒತ್ತಿದ್ದಾರೆ.

ಕರ್ನಾಟಕದ ಶರಣರ ಅನುಭಾವ ಸಾಹಿತ್ಯ, ಕನ್ನಡದಲ್ಲಿಯೇ ಅನಂತರ ಬಂದ ವೀರಶೈವ ಸಾಹಿತ್ಯ, ಹರಿದಾಸ ಸಾಹಿತ್ಯದ ಮೇಲೆ, ತತ್ವಪದಕಾರರ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದಂತೆ, ಉತ್ತರದ ಹಾಗೂ ಮಹಾರಾಷ್ಟ್ರದ ಸಂತರ ಮೇಲೂ ಪ್ರಭಾವ ಬೀರಿರುವುದು ನಿಚ್ಚಳವಾಗಿ ತೋರುತ್ತದೆ. ಕರ್ನಾಟಕದ ಹರಿದಾಸರ ಪ್ರಭಾವ ಮುಂದೆ ಬಂದ ವೈಷ್ಣವ ಕವಿಗಳ ಮೇಲಾದುದನ್ನೂ, ಹಾಗೆಯೇ ಇತರ ಪ್ರಾಂತಗಳ ವೈಷ್ಣವ ಭಕ್ತರ ಜೊತೆಗೆ ಸಾಮ್ಯತೆ ತೋರಿರುವುದನ್ನೂ ಕಾಣುತ್ತೇವೆ.

ನಮ್ಮ ನಾಡಿನ ಸಂತರ, ಭಕ್ತರ, ಅನುಭಾವಿಗಳ ಜೀವನ, ಸಾಧನೆ, ಶೋಧನೆಗಳನ್ನು ಆಳವಾಗಿ ಅಧ್ಯಯನ ಮಾಡಿ ನೋಡಿದಾಗ ಅವರ ಬದುಕಿನ ಹಲವು ಘಟನೆಗಳಲ್ಲಿ, ವಾಣಿಯಲ್ಲಿ, ವಿಚಾರಗಳಲ್ಲಿ, ಬಳಸಿದ ಪ್ರತಿಮೆಗಳಲ್ಲಿ ಹಾಗೂ ಆಶಯಗಳಲ್ಲಿ ವಿಸ್ಮಯಕರವಾದ ಸಾಮ್ಯತೆ ಕಂಡುಬರುತ್ತದೆ. ಅದು ಕೆಲವು ಸಲ ಪ್ರಭಾವದಿಂದ ಉಂಟಾಗಿರಬಹುದು, ಮತ್ತೆ ಕೆಲವು ಸಲ ಸ್ವತಂತ್ರವಾಗಿಯೇ ನಡೆದುದಾಗಿರಬಹುದು.

ಕರ್ನಾಟಕದ ಶಿವಶರಣರ ಜೊತೆಗಿನ ಈ ಸಾಮ್ಯದ-ಪ್ರಭಾವದ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು:

ಬಸವಣ್ಣನವರ ಜೀವನದಲ್ಲಿ ನಡೆದ-ಆಕಳನ್ನು ಕದ್ದೊಯ್ದ ಪ್ರಸಂಗ, ರಾಜಸ್ಥಾನದ ಗಾಗರಕಾನಗರದ ಅರಸನ ಜೀವನದಲ್ಲಿಯೂ ನಡೆದಿದೆ.

ಬಸವಣ್ಣನವರು ಯಜ್ಞೋಪವೀತವನ್ನು ಕಿತ್ತೆಸೆದು ಬಾಲ್ಯದಲ್ಲಿಯೇ ಅಗಾಧವಾದ ವೈಚಾರಿಕತೆಯನ್ನು ಮೆರೆದಂತೆ, ಗುರುನಾನಕರ ಜೀವನದಲ್ಲಿಯೂ ಇಂಥದೇ ಘಟನೆ ನಡೆದಿದೆ.

ಮಹಾರಾಷ್ಟ್ರದ ಸಂತರಲ್ಲಿ ನಾಮದೇವ, ತುಕಾರಾಮ, ಏಕನಾಥರ ಪದಗಳ ಹಾಗೂ ಕರ್ನಾಟಕದ ಬಸವಣ್ಣನವರ ಅನೇಕ ವಚನಗಳ ಭಾವದಲ್ಲಿ ಸಾಮ್ಯತೆ ಕಂಡುಬರುತ್ತದೆ: ಬಸವಣ್ಣ- 'ದಯವಿಲ್ಲದ ಧರ್ಮವಾವುದಯ್ಯ' ಎಂದು ಹೇಳಿದರೆ, ತುಕಾರಾಮ- 'ಧರ್ಮ ಭೂತತಿತೇ ದಯಾ' (ದಯವೇ ನಿಜವಾದ ಧರ್ಮ) ಎನ್ನುತ್ತಾನೆ. ಬಸವಣ್ಣ- 'ಬ್ರಹ್ಮಪದವಿಯನೊಲ್ಲೆ' ಎಂದರೆ, ತುಕಾರಾಮ- 'ನ ಲಾಗೇ ಹೇ ಮಝ ಬ್ರಹ್ಮಜ್ಞಾನ' ಎಂದು ಹೇಳುತ್ತಾನೆ. ಬಸವಣ್ಣನವರ ಅಹಿಂಸೆ, ವರ್ಣಾಶ್ರಮಧರ್ಮದ ವಿರೋಧ, ಮೂರ್ತಿಪೂಜೆಯ ವಿರೋಧ ಮೊದಲಾದ ಸಂಗತಿಗಳು ಮಹಾರಾಷ್ಟ್ರದ ಸಂತರ ಮೇಲೆ ಪ್ರಭಾವ ಬೀರಿವೆ. ಮಹಾರಾಷ್ಟ್ರದ 'ಮಹಾನುಭಾವ' ಪಂಥದ ಮೇಲೆ ವೀರಶೈವದ ಪ್ರಭಾವ ಬಿದ್ದಿರುವುದನ್ನು ಫರ್ಕಹರ್ ಎತ್ತಿ ಹೇಳಿದ್ದಾರೆ.

ವೀರಶೈವದ ವೈಶಿಷ್ಟ್ಯವೆನಿಸಿದ ಭಕ್ತಿ, ಜ್ಞಾನ, ದ್ವೈತಾದ್ವೈತ ಸಮನ್ವಯ ತತ್ವಗಳು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಹರಿದು ಸಾಗಿವೆ. ಅಲ್ಲಿಂದ ವಿಂಧ್ಯಪರ್ವತವನ್ನೂ ದಾಟಿ ಈ ಭಕ್ತಿಪಂಥ ನಿರ್ಗುಣ ಭಕ್ತಿಪಂಥವೆಂದು ವಿಖ್ಯಾತವಾಯಿತು. ನಿರ್ಗುಣಭಕ್ತಿ ಮರಾಠಿ ಸಂತರ ಕೊಡುಗೆಯಾಗಿ ಹಿಂದೀ ಭಾಷೆಗೂ ಬಂದಿದೆ ಎಂದು ಡಾ. ವಿನಯ ಮೋಹನ ಶರ್ಮ ತಮ್ಮ 'ಹಿಂದಿಕೋ ಮರಾಠಿ ಸಂತೋಕಾ ದೇನ್' ಎಂಬ ಗ್ರಂಥದಲ್ಲಿ ತಿಳಿಸುತ್ತಾರೆ. ಆದರೆ ನಿರ್ಗುಣಭಕ್ತಿಯ ಕಲ್ಪನೆ ಒಂದೆಡೆ ನಾಮದೇವರ ಮೂಲಕ ಉತ್ತರಾಪಥವನ್ನು ಹೊಕ್ಕರೆ, ಮತ್ತೊಂದೆಡೆ ನೇರವಾಗಿ ವೀರಶೈವ ಜಂಗಮರು ಬಸವಣ್ಣನವರ ವಿಚಾರ ಗಂಗೆಯನ್ನು ಕಾಶಿಗೆ ಕೊಂಡೊಯ್ದರು. ಕಾಶಿಯಲ್ಲಿರುವ 'ಜಂಗಮವಾಡಿ ಮಠ' ವೀರಶೈವರ ಅತ್ಯಂತ ಪ್ರಾಚೀನ ಮಠಗಳಲ್ಲಿ ಒಂದು. ಕಾಶಿಯಲ್ಲಿ ಹುಟ್ಟಿ ಬಾಳಿದ ಸಂತ ಕಬೀರ ಜಂಗಮವಾಡಿಮಠದಲ್ಲಿದ್ದ ಜಂಗಮ ಸಂತರೊಡನೆ ಸತ್ಸಂಗ ಮಾಡಿ ವಿಚಾರವಿನಿಮಯ ಮಾಡಿಕೊಂಡಿರಬೇಕು. ಅವರಿಂದ ಅನೇಕ ತತ್ವಗಳನ್ನು ಸ್ವೀಕರಿಸಿರಬೇಕು. ಅವನಲ್ಲಿ ಬರುವ 'ಕಾಯಕ ವಿಚಾರ, ಭಿಕ್ಷಾಟನೆಯ ನಿಂದೆ, ಸತ್ಸಂಗ ಮತ್ತು ಭಕ್ತಿ ಮುಕ್ತಿಗಿಂತ ಮಿಗಿಲೆಂಬ ಕಲ್ಪನೆ, ಪತಿವ್ರತಾಂಗನೆಯನ್ನು ಭಕ್ತಿಯ ಆದರ್ಶವನ್ನಾಗಿ ಸ್ವೀಕರಿಸಿರುವುದು, ಸಂತರು ವೀರಯೋಧರೆಂಬ ಕಲ್ಪನೆ, ಜ್ಞಾನ-ಭಕ್ತಿಯ ಸಮನ್ವಯ ರೂಪವಾದ ನಿರ್ಗುಣಭಕ್ತಿಯ ಕಲ್ಪನೆ'- ಇವೆಲ್ಲ ವೀರಶೈವ ಶರಣರ ಪ್ರಭಾವದಿಂದಲೇ ಅಳವಡಿಸಿಕೊಂಡ ಅಂಶಗಳೆನಿಸುತ್ತವೆ. ಡಾ. ಗೋವಿಂದ ತ್ರಿಗುಣಾರ್ಯ ಎಂಬವರು ತಮ್ಮ "ಹಿಂದಿ ಕಿ ನಿರ್ಗುಣ ಕಾವ್ಯಧಾರಾ ಔರ್ ಉಸ್‌ಕಿ ದಾರ್ಶನಿಕ ಪೃಷ್ಠಭೂಮಿ" (ಪು. ೩೬೦) ಎಂಬ ಗ್ರಂಥದಲ್ಲಿ ಉತ್ತರ ಭಾರತದ ಸಂತರ ಮೇಲೆ ಆಗಿರುವ ವೀರಶೈವ

ಶರಣರ ಪ್ರಭಾವವನ್ನು ಕುರಿತು "ಈ ಸಂಪ್ರದಾಯದ ಜಂಗಮ ಸಾಧುಗಳ ಸಂಗತಿ ಹಿಂದಿಯ ನಿರ್ಗುಣ ಸಾಧುಗಳಿಗೆ ತಮ್ಮ ಧರ್ಮ ಹಾಗೂ ಸಮಾಜದತ್ತ ಮುಖ ಮಾಡಲು ಪ್ರೇರಣೆ ನೀಡಿರಬೇಕೆಂಬುದು ನಮ್ಮ ದೃಢನಿರ್ಧಾರ" ಎಂದು ಹೇಳುತ್ತಾರೆ. ಇದಕ್ಕೆ ನಿದರ್ಶನವಾಗಿ ಕಬೀರನ ದೋಹೆಯ ಮೇಲೆ ಆದ ಬಸವಣ್ಣನವರ ವಚನಗಳ ಪ್ರಭಾವವನ್ನು ದಟ್ಟವಾಗಿ ಕಾಣುತ್ತೇವೆ.

ಅಸ್ಸಾಮಿನಲ್ಲಿ ಭಕ್ತಿಯ ಹುಚ್ಚು ಹೊಳೆ ಹರಿಸಿದ ಶಂಕರದೇವ (೧೫೫೦) ತನ್ನ ಮಹಾಪುರುಷ ಸಂಪ್ರದಾಯದಲ್ಲಿ 'ದೀಕ್ಷೆ'ಗೆ 'ಶರಣ' ಎಂದೂ, ದೀಕ್ಷಿತರಾದವರನ್ನು 'ಶರಣಿಯಾ' ಎಂದೂ ಕರೆಯುತ್ತಾನೆ. ಈತ ಸಾಮಾಜಿಕವಾಗಿ ಜಾತಿಪಂಥಗಳನ್ನು ತಿರಸ್ಕರಿಸಿ, ಹರಿಯ ಭಜಿಸುವರೆಲ್ಲ ಒಂದೇ ಎಂದು ಹೇಳುವಲ್ಲಿ ಕನ್ನಡ ನಾಡಿನ ಶರಣರ ಪ್ರಭಾವಕ್ಕೊಳಗಾದಂತೆ ತೋರುತ್ತದೆ. ಕಾಶ್ಮೀರದ ಸಂತ ಶರಣೆ ಲಲ್ಲೇಶ್ವರಿಗೂ, ಉತ್ತರದ ಮೀರಾಬಾಯಿಗೂ, ಕರ್ನಾಟಕದ ಅಕ್ಕಮಹಾದೇವಿಗೂ ಅನೇಕ ಅನುಭಾವಿಕ ವಿಷಯಗಳಲ್ಲಿ ಸಾಮ್ಯವಿದೆ. ಕರ್ನಾಟಕದ ಶರಣರ 'ಸತಿಪತಿ ಭಾವ' (ಶರಣಸತಿ-ಲಿಂಗಪತಿ)ದ ಕಲ್ಪನೆಗೆ, ಹರಿದಾಸರ 'ಮಧುರಭಕ್ತಿ'ಗೆ, ಸೂಫಿ ಸಂತರ 'ಮಧುರಭಕ್ತಿ' ಪ್ರೇರಕವಾದಂತಿದೆ. ಆದಯ್ಯನಿಂದ ವೀರಶೈವದ ಪ್ರಭಾವ ಸೌರಾಷ್ಟ್ರದವರೆಗೂ ಹೋಗಿರಬೇಕು. ನೇಪಾಳಕ್ಕೆ ಯೋಗದೀಕ್ಷೆಯನ್ನು ನೀಡಿದ ಗೋರಕ್ಷನಾಥನೂ ಕನ್ನಡಿಗ. ಹೀಗೆ 'ಒಂದು ಕಾಲಕ್ಕೆ ಇಡೀ ಭರತವರ್ಷ ಕನ್ನಡ ನಾಡಿನ ಧರ್ಮ ಸಾಧನೆಯ ಪ್ರಭಾವ ಮುದ್ರೆಯ ಸಮುದ್ರದಲ್ಲಿ ಮುಳುಗಿತ್ತು. ಅನುಭಾವದ ಪ್ರಭಾವವೇನೋ ಎಲ್ಲೆಡೆಯಲ್ಲಿಯೂ ಒಂದಿಲ್ಲೊಂದು ರೂಪದಲ್ಲಿ ಕಾಣಸಿಗುತ್ತದೆ. ಆದರೆ ಭಕ್ತಿ ಆಂದೋಳನಕ್ಕೆ ಒಂದು ಸಾಮಾಜಿಕ ಕ್ರಾಂತಿಯ ಸ್ವರೂಪ ಕೊಟ್ಟವರು ಕರ್ನಾಟಕದ ಬಸವಾದಿ ಶಿವಶರಣರು'. ಹೀಗಾಗಿ ಮಧ್ಯಯುಗದ ಈ ಭಕ್ತಿ ಆಂದೋಲನ ಎಂದೆಂದಿಗೂ ಪ್ರಸ್ತುತವೆನಿಸಿ ತನ್ನ ಮಹತ್ವವನ್ನು ಕಾಯ್ದುಕೊಂಡು ಬಂದಿದೆ.

ಹೀಗೆಯೇ ವೀರಶೈವ ಶರಣರ ನಂತರ ಹುಟ್ಟಿಕೊಂಡ ಇನ್ನೂ ಹಲವು ಭಕ್ತಿಪಂಥಗಳ ಮೇಲೆ ಇದರ ಪ್ರಭಾವ ಆಗಿರುವ ಸಾಧ್ಯತೆಯಿದೆ. ಅದನ್ನು ವ್ಯಾಪಕ ಹಾಗೂ ಸೂಕ್ಷ್ಮ ಅಧ್ಯಯನದಿಂದ ಕಂಡುಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ ಭಾರತದ ಎಲ್ಲ ಭಕ್ತಿಪಂಥಗಳ ತೌಲನಿಕ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

ಅನುಭಾವ ಪರಂಪರೆಯ ಪ್ರಭಾವ ಆಧುನಿಕ ಯುಗದ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ, ರಾನಡೆ ಮೊದಲಾದ ಸಂತಶ್ರೇಷ್ಠರ ಮೇಲೆ, ನವೋದಯ ಯುಗದ ಅನೇಕ ಕವಿಗಳ ಮೇಲೆಯೂ ಆಗಿರುವುದನ್ನು ಕಾಣುತ್ತೇವೆ. ಹೀಗೆ ಅನುಭಾವದ ಪ್ರವಾಹ ವೇದಪೂರ್ವಕಾಲದಿಂದ ಇಲ್ಲಿಯವರೆಗೆ ವಿವಿಧ ಮುಖವಾಗಿ ಹರಿಯುತ್ತ, ಮಾನವನ ಬದುಕನ್ನು ಅಧ್ಯಾತ್ಮಶಕ್ತಿಯಿಂದ ಉದಾತ್ತಗೊಳಿಸುತ್ತ, ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುತ್ತಾ ಬಂದು ನಾಡಿನ ನೆಮ್ಮದಿಗೆ ಸಂಜೀವಿನಿಯಾಗಿ ಪರಿಣಮಿಸಿದೆ.

## ಆಧಾರ ಗ್ರಂಥಗಳು


೧. ಶರಣರ ಅನುಭಾವಸಾಹಿತ್ಯ:ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರ:ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೯೧(ತೃ.ಮು.)

೨. ಶರಣರ ಅನುಭವ, ಅನುಭಾವ, ಅನುಭೂತಿ: ಡಾ. ಆರ್.ಆರ್. ದಿವಾಕರ, ಪ್ರ:ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೩. ಕನ್ನಡ ಶರಣರ ಪರಮಾರ್ಥಪಥ: ಡಾ. ಆರ್.ಡಿ. ರಾನಡೆ, ಅನು-ಎಂ.ಎಸ್. ದೇಶಪಾಂಡೆ, ಪ್ರ:ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬(ದ್ವಿ.ಮು.)

೪. ಶರಣತತ್ತ್ವ ಚಿಂತನ: ಸಂ. ಡಾ.ಎ.ಎಲ್. ಶಿವರುದ್ರಪ್ಪ, ಪ್ರ: ಅಖಿಲಭಾರತ ಶರಣಸಾಹಿತ್ಯ ಪರಿಷತ್ತು, ಮೈಸೂರು, ೧೯೮೮ (ಡಾ. ಮ.ಸು. ಕೃಷ್ಣಮೂರ್ತಿ ಅವರ ಲೇಖನ)

೫. ಸಾಹಿತ್ಯ ಭಾರತಿ: ಎನ್. ಅನಂತರಂಗಾಚಾರ್, ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦

೬. ಕರ್ನಾಟಕ ಸರಕಾರ ಪ್ರಕಟಿಸಿದ ವಚನಸಾಹಿತ್ಯ ಸಂಪುಟಗಳು *


---

* ಬಯಲ ಕಾರಣಿಕ : ಭಾಲ್ಕಿ ಶ್ರೀ ಶಿವಯೋಗೀಶ್ವರ ಸ್ವಾಮಿಗಳ ಪೀಠಾರೋಹಣ ರಜತ ಮಹೋತ್ಸವ ಸಂದರ್ಭದ ಸಂಭಾವನಾ ಗ್ರಂಥ. ೨೦೦೦.

ಶುಭವಾಗಲಿ

ವಚನ ಸಾಹಿತ್ಯ ಸಂಶೋಧನಾ ವಲಯದಲ್ಲಿ ಇತ್ತೀಚಿನವರೆವಿಗೂ ಗಂಭೀರ ತರದಲ್ಲಿ ನಡೆದಿರುವ ಸಂಶೋಧನೆಯ ಸ್ವರೂಪ, ಪರಂಪರೆ, ಸಂಪಾದನೆ ಅದರ ಇತಿಹಾಸ, ಸ್ವರವಚನಗಳ ಉಗಮ, ಲಕ್ಷಣ, ಗುರುಬಸವಾರ್ಯನ ಇತಿವೃತ್ತ ಹಾಗೂ ಕೈವಲ್ಯ ಪದ್ಧತಿ ಬಗೆಗೆ ಮಾಹಿತಿ; ಅನುಭವ ಸಾಹಿತ್ಯ ಸಮೀಕ್ಷೆ ಎಲ್ಲವೂ ಸಂಕ್ಷಿಪ್ತವಾಗಿ ಅಡಕಗೊಂಡಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ವಚನ ಸಾಹಿತ್ಯ ಸಂಶೋಧನ ಕ್ಷೇತ್ರದ ಪಕ್ಷಿನೋಟ ನೀಡುವುದು ಈ ಕೃತಿಯ ಆಶಯವಾಗಿದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು